# ARUN'S
## GOLD

ಅರುಣ್
ಗೋಲ್ಡ್

STUDENT NOTE BOOK

192 PAGES

Rs. 6.00

Name ..................................................

Class ..................................................

Subject ..................................................

School ..................................................

[illegible]

[illegible]

विदिताविदिताभ्यामन्यः आत्मा

विदितं = ज्ञानेन विषयीकृतम् । अविदितं = अज्ञानेनावृतम् ।

बोधस्वरूपत्वात्

॥ ಓಂ ತತ್ ಸತ್ ಬ್ರಹ್ಮಣೇ ನಮಃ ॥

ಶ್ರೀಮದ್ಭಾಗವತ ದಶಮಸ್ಕಂಧ ೮೭ ನೇ ಅಧ್ಯಾಯದಲ್ಲಿ ಪರೀಕ್ಷಿದ್ರಾಜನು ಶುಕಮುನಿಗಳನ್ನು ಕುರಿತು ಪ್ರಶ್ನೆ ಮಾಡುತ್ತಾನೆ.

ಬ್ರಹ್ಮನ್ ಬ್ರಹ್ಮಣ್ಯನಿರ್ದೇಶ್ಯೇ ನಿರ್ಗುಣೇ ಗುಣವೃತ್ತಯಃ ।
ಕಥಂ ಚರಂತಿ ಶ್ರುತಯಃ ಸಾಕ್ಷಾತ್ಸದಸತಃ ಪರೇ ॥

ವಾಣೀರೂಪ ವೇದಗಳು ಜಾತಿಗುಣಕ್ರಿಯಾವಿಶಿಷ್ಟವಾದ ಅರ್ಥವನ್ನೇ ತಿಳಿಸು ವೃತ್ತಿದ್ವಾರದಿಂದ ನಿರ್ಗುಣ ಸದಸತ್ಪರ ಅಂದರೆ ಜಾತಿಗುಣಕ್ರಿಯಾರಹಿತ ಮತ್ತು ಅಪ್ರಮೇಯವಾದ ಬ್ರಹ್ಮವಸ್ತುವನ್ನು ಹೇಗೆ ತಿಳಿಸುವವು? ಪದಾರ್ಥವೂ ಇಲ್ಲದ ವಾಕ್ಯಾರ್ಥವೂ ಇಲ್ಲದ ಶುದ್ಧಬ್ರಹ್ಮ ಪರಮಾತ್ಮನಲ್ಲಿ ವೇದತಾತ್ಪರ್ಯವೆನ್ನುವುದು ಹೇಗೆ? ಎಂಬೀ ಪ್ರಶ್ನೆಗೆ ಶುಕಮುನಿಗಳು ಉತ್ತರಿಸುತ್ತಾರೆ.

ಬುದ್ಧೀಂದ್ರಿಯಮನಃಪ್ರಾಣಾನ್ ಜನಾನಾಮಸೃಜತ್ ಪ್ರಭುಃ ।
ಮಾತ್ರಾರ್ಥಂ ಚ ಭವಾರ್ಥಂ ಚ ಆತ್ಮನೇಽಕಲ್ಪನಾಯ ಚ ॥

ಪ್ರಭುಃ ಅಂದರೆ ಪ್ರಕೃತಿಯನ್ನು ಸ್ವವಶದಲ್ಲಿಟ್ಟುಕೊಂಡಿರುವ ಸ್ವಾಮಿಯು ಜನರ ಅಂದರೆ ಜೀವಚೇತನರಿಗೆ ಬುದ್ಧಿ ಇಂದ್ರಿಯ ಮನಸ್ಸು ಮತ್ತು ಪ್ರಾಣಗಳನ್ನು ಸೃಷ್ಟಿಮಾಡಿಕೊಟ್ಟಿರುವನು. ಮಾತ್ರಾರ್ಥಂ ವಿಷಯಸಿದ್ಧಿಗೋಸ್ಕರ, ಭವಾರ್ಥಂ= ಜನ್ಮಾರಬ್ಧ ಕರ್ಮ-ಧರ್ಮಸಾಧನೆಗೋಸ್ಕರ, ಆತ್ಮನೇ=ಆತ್ಮನಿಗೆ ಆಯಾಯ ಲೋಕಗಳಲ್ಲಿ ಭೋಗಸಿದ್ಧಿಗೋಸ್ಕರ. ಅಕಲ್ಪನಾಯ= ಕಲ್ಪನಾನಿವೃತ್ತಿಗೆ ಅಂದರೆ ಮೋಕ್ಷಕ್ಕೋಸ್ಕರ ಜಗತ್ಸೃಷ್ಟಿ ಮಾಡಿದ್ದಾನೆ. ಜೀವರ ಉಪಯೋಗಕ್ಕೋಸ್ಕರ ಈಶ್ವರನ ಸೃಷ್ಟ್ಯಾದಿ ಪ್ರವೃತ್ತಿ. ಇದರಲ್ಲಿ ಸ್ವಾರ್ಥವೇನೂ ಇಲ್ಲ. ಈಶ್ವರನು ಸರ್ವದಾ ಉಪಾಧಿಯನ್ನು ಸ್ವಾಧೀನದಲ್ಲಿಟ್ಟುಕೊಂಡಿರುವುದರಿಂದ ಅವನು ನಿತ್ಯಮುಕ್ತನೇ, ಸ್ವತಂತ್ರನೇ.

ಸ್ವಸೃಷ್ಟಮಿದಮಾಪೀಯ ಶಯಾನಂ ಸಹಶಕ್ತಿಭಿಃ ।
ತದಂತೇ ಬೋಧಯಾಂಚಕ್ರುಸ್ತಲ್ಲಿಂಗೈಃ ಶ್ರುತಯಃ ಪರಂ ॥
ಯಥಾ ಶಯಾನಂ ಸಮ್ರಾಜಂ ವಂದಿನಸ್ತತ್ಪರಾಕ್ರಮೈಃ ।
ಪ್ರತ್ಯೂಷೇಭ್ಯೇತ್ಯ ಸುಶ್ಲೋಕೈರ್ಬೋಧಯಂತ್ಯನುಜೀವಿನಃ ॥

ಮಹಾಪರಾಕ್ರಮಶಾಲಿಯಾದ ಸಮ್ರಾಟನು ರಾತ್ರಿ ಶಯನಿಸಿ ನಿದ್ರಿಸುತ್ತಿದ್ದರೆ ಬೆಳಗಿನ ಜಾವದಲ್ಲಿ ಎಚ್ಚರಗೊಳಿಸಲು ಸ್ತುತಿಪಾಠಕರಾದ ವಂದಿಮಾಗಧರು ಆ ರಾಯನ ಪರಾಕ್ರಮ ಕಾರ್ಯಗಳನ್ನೇ ಎತ್ತಿ ಆಡಿ ಹೊಗಳುವಂತೆ ~~ಇವು~~ ಉಪನಿಷದ್ಗೀತೆಗಳುವುವು. ಪರಮಾತ್ಮನು ತನ್ನ ಸೃಷ್ಟಿಯ ಸರ್ವವನ್ನು, ಸೃಷ್ಟಿಶಕ್ತಿಯೇ ಮೊದಲಾದ ಸರ್ವಶಕ್ತಿಗಳನ್ನು ತನ್ನಲ್ಲೇ ಅಡಗಿಸಿಕೊಂಡು (ಪರಮಾತ್ಮಪಕ್ಷದಲ್ಲಿ) ಯೋಗನಿದ್ರಾಮುದ್ರೆಯಿಂದಿರಲು (ಜೀವಪಕ್ಷದಲ್ಲಿ) ಅವಿದ್ಯಾಮಾಯಾಮೋಹಿತರಾಗಿರಲು ಮೋಹನಿದ್ರೆಯಿಂದಿರಲು (ಆತ್ಮವಿಸ್ಮೃತಿಯಿರುವುದರಿಂದ) ಅಂತರ್ಯಾಮಿ ಅಂತರ್ಯವಾದ ಆತ್ಮನನ್ನು ಸ್ತುತಿಸಲು ಎಚ್ಚರಪಡಿಸಲು - ಪ್ರಬೋಧಗೊಳಿಸಲು ಆತ್ಮನಿಗೆ ಮೀಸಲಾಗಿರುವ ಹೆಗ್ಗುರುತುಗಳನ್ನೇ ಎತ್ತಿ ಆಡಿ ಶ್ರುತಿಗಳು ಹೊಗಳುವುವು.

ಶ್ರುತಯ ಊಚುಃ — (ಈ ಭಾಗಕ್ಕೆ ಶ್ರುತಿಗೀತೆ ಎಂಬ ಹೆಸರುಂಟು)

ಜಯ ಜಯ ಜಹ್ಯಜಾಮಜಿತ, ದೋಷಗೃಭೀತಗುಣಾಂ
ತ್ವಮಸಿ ಯದಾತ್ಮನಾ ಸಮವರುದ್ಧಸಮಸ್ತಭಗಃ ।
ಅಗಜಗದೋಕಸಾಮಖಿಲಶಕ್ತ್ಯವಬೋಧಕ ತೇ
ಕ್ವಚಿದಜಯಾತ್ಮನಾ ಚ ಚರತೋಽನುಚರೇನ್ನಿಗಮಃ ॥ ೧ ॥

ಪರಮಾತ್ಮನು ಮನೋವಾಣಿಗಳಿಗೆ ಅಗೋಚರ - ಅಪ್ರಮೇಯನಾಗಿದ್ದರೂ [illegible] ಶ್ರುತಿಗಳು ಭಾಗತ್ಯಾಗಲಕ್ಷಣಾ ಎಂಬ ಉಪಾಯದಿಂದ ಅಥವಾ ಅನಾತ್ಮಸ್ವರೂಪ ಧರ್ಮವ್ಯಾವೃತ್ತಿ (ಅವನ ವಲ್ಲದ ಸ್ವರೂಪ ಧರ್ಮಗಳನ್ನು ಅಲ್ಲಗಳೆಯುವ) ಉಪಾಯದಿಂದ

ಪರಮಾತ್ಮನನ್ನು ಸ್ತುತಿಸುತ್ತವೆ. ಹಾಗೆಯೇ ಜೀವಾತ್ಮನನ್ನು ಪ್ರಬೋಧಗೊಳಿಸುತ್ತವೆ. ಅಂದರೆ ಮೋಹನಿದ್ರೆಯಿಂದ ಎಚ್ಚರಗೊಳಿಸುತ್ತವೆ

ಪರಮಾರ್ಥವನ್ನು ತಿಳಿಸುತ್ತವೆ. ಶ್ಲೋಕಾರ್ಥ – ಹೇ ಅಜಿತ = ಎಂದೆಂದಿಗೂ ಅಪರಾಜಿತನೇ ಆಗಿರುವ ಮಹಾಪ್ರಭುವೇ! ಜಯ ಜಯ = ನಿನಗೆ ಸರ್ವದಾ ಜಯವಾಗಲಿ. ಜಯಶಾಲಿಯಾಗೇ ಇರು. ಯಾವ ಕಾರ್ಯ ಮಾಡುತ್ತಾ ಜಯಸಿದ್ಧಿ ಆಗುವುದೆಂದರೆ:- ಅಗಜಗದೋಕಸಾಂ ದೋಷಗೃಭೀತಗುಣಾಂ ಅಜಾಂ ಜಹಿ = ಚರಾಚರಾತ್ಮಕವಾದ ಈ ಪ್ರಪಂಚದ ಮನುಷ್ಯಾದಿ ಸಮಸ್ತ ಜೀವಜಂತುಗಳಿಗೆ ಸಂಸಾರವೈಷಮ್ಯವುಂಟುಮಾಡಲೆಂದೇ ಸ್ವರೂಪಾವರಣವನ್ನುಂಟುಮಾಡಿ ಮತ್ತೆ ತಾನು ಮೋಹಕವೆಂಬ ಗುಣವನ್ನು ಧರಿಸಿಕೊಂಡಿರುವ ಯಾವ ಅನಾದ್ಯವಿದ್ಯೆ - ಮಾಯೆ (ಇದೇ ಅಜಾ = ಇಲ್ಲದ ಸ್ವರೂಪ) ಎಂಬುದಿದೆಯೋ ಅದನ್ನು ನಿವಾರಿಸು. ಅಂತಹ ಪ್ರಬಲವಾದ ಅಜಾವಿದ್ಯೆಯನ್ನು ನಾಶಪಡಿಸುವುದಕ್ಕೆ ನಿನಗೆ ಸಾಮರ್ಥ್ಯವುಂಟು. ಮತ್ತು ಅದರಿಂದ ನಿನಗೇನೂ ಹಾನಿಯುಂಟಾಗುವುದಿಲ್ಲ. ಏಕೆಂದರೆ:- ಯತ್ ತ್ವಂ ಆತ್ಮನಾ ಸಮವರುದ್ಧಸಮಸ್ತಭಗಃ ಅಸಿ = ಭಗ ಎಂದರೆ ನಿತ್ಯಜ್ಞಾನಾನಂದೈಶ್ವರ್ಯವೀರ್ಯಕೀರ್ತಿತೇಜಸ್ ಇವಕ್ಕೆ ಭಗವೆಂದು ಹೆಸರು. ಈ ಷಟ್ಸಂಪತ್ತನ್ನು ನೀನು ಸ್ವರೂಪದಿಂದಲೇ ಶಾಶ್ವತವಾಗಿ ಉಳ್ಳವನಾಗಿದ್ದೀಯೆ. ಸ್ವಸ್ವರೂಪಕ್ಕೆ ಎಂದೂ ಚ್ಯುತಿಯಿಲ್ಲವಷ್ಟೆ! ಅಂತಹ ಪರಸಂಪತ್ತು ನಿನ್ನಲ್ಲಿ ಇರುವುದರಿಂದಲೇ ನೀನು ಜೀವಜಂತುಗಳ ಕೃಪಣತ್ವವನ್ನು ನಿವಾರಿಸಬಲ್ಲೆ. ಮತ್ತು ನೀನು ನಿರ್ವಿಶೇಷಜ್ಞಾನಸ್ವರೂಪನೂ ಸ್ವಯಂಪ್ರಕಾಶನೂ ಸರ್ವಸ್ವತಂತ್ರನೂ ಸರ್ವಶಕ್ತನೂ ಆಗಿರುವುದರಿಂದ ನಿನ್ನಿಂದಲೇ ಅವಿದ್ಯಾಮಾಯಾ ನಿವಾರಣೆಯಾಗಬೇಕು. ಆ ಜೀವರೇ ಜ್ಞಾನಪಡೆದುಕೊಂಡು ತಮ್ಮ ಅವಿದ್ಯಾವರಣವನ್ನು ನಿವಾರಿಸಿಕೊಳ್ಳಬಹುದಲ್ಲ ಎಂದರೆ:- ಅದು ಶಕ್ಯವಿಲ್ಲ. ಅವರು ಸ್ವತಂತ್ರರಲ್ಲ. ಯಾವಾಗಲೂ ಮಾಯಾ ಅವಿದ್ಯಾಕಾಮಕರ್ಮಾದಿಗಳಿಗೆ ವಶರಾಗಿ ಇರುತ್ತಾರೆ. ಅಲ್ಲದೆ ಅಗಜಗದೋಕಸಾಂ = ಈ ಚರಾಚರಾತ್ಮಕ ಶರೀರಗಳಾದ

ಜೀವರ, ಅಖಿಲಶಕ್ತ್ಯವಬೋಧಕ = ಕರ್ಮಶಕ್ತಿಜ್ಞಾನಶಕ್ತಿ ಸಮಸ್ತಕ್ಕೂ ಮೂಲ
ಚಾಲಕನಾಗಿ ಚೈತನ್ಯಮಯನಾದ ನೀನೇ ಎಲ್ಲಾ ಶಕ್ತಿಗಳನ್ನು ಪ್ರಚೋದಿಸುವ
ವನಾಗಿದ್ದೀಯೆ. ಜೀವರ ಅವಿದ್ಯಾತಮಸ್ಸನ್ನು ದೂರಗೊಳಿಸಬಲ್ಲ ಜ್ಞಾನಪ್ರಕಾಶ
ವು ನಿನ್ನ ಸ್ವರೂಪ ಚೈತನ್ಯದಿಂದಲೇ ಕೈಗೂಡಬೇಕು. ಆದ್ದರಿಂದ ಜೀವರಿಗೆ
(ಜ್ಞಾನ) ತತ್ತ್ವಜ್ಞಾನಸಿದ್ಧಿಯೂ ಪರಮಾತ್ಮನ ಅನುಗ್ರಹದಿಂದಲೇ ಆಗಬೇಕು.
ಈರೀತಿ ಜೀವರ ಕರ್ಮಶಕ್ತಿಜ್ಞಾನಶಕ್ತಿಗಳನ್ನು ಪರಮಾತ್ಮನೇ ಉದ್ಬೋಧಿಸುವ
ನೆಂಬುದಕ್ಕೆ ಪ್ರಮಾಣವೇನೆಂದರೆ:- ನಿಗಮ: = ವೇದವೇ. ತೇನ ವಿನಾ
ತೃಣಾಮಪಿ ನ ಚಲತಿ ಎನ್ನುತ್ತಿರುವ ವೇದಶಾಸ್ತ್ರಗಳೇ ಪ್ರಮಾಣವು. ಪರ
ಮಾತ್ಮನು ಅಪ್ರಮೇಯ ಮನೋವಾಗಗೋಚರನೆಂದು ಹೇಳುತ್ತಾರಲ್ಲವೇ?
ಎಂದರೆ ಕ್ವಚಿದಜಯಾ ಚರತ: (ಆತ್ಮನಾ ಚ ಚರತ: = ತೇ ತವ ವಿಷಯ:)
ಅಂದರೆ ಕ್ವಚಿತ್ = ಸೃಷ್ಟಿಕಾರ್ಯ ಮತ್ತು ವ್ಯವಹಾರದಶೆಗಳಲ್ಲಿ ಅಜಯಾ
ಲೋಕವ್ಯವಹಾರ ಕಾಲದಲ್ಲಿ
ಚರತ: = ಈಶ್ವರಾತ್ಮನ ಮಾಯೆಯಿಂದಲೂ, ಜೀವಾತ್ಮನ ಅವಿದ್ಯೆಯಿಂದಲೂ
ಸಂಪರ್ಕವಿಟ್ಟುಕೊಂಡಿರುವಂತೆ (ಆತ್ಮನ ಲೀಲೆಯಿಂದ ಕ್ರೀಡಿಸುತ್ತಿರುವಂತೆ)
ಕಂಡುಬರುತ್ತಿರುವುದಾಗಿ, ಆತ್ಮನಾ ಚರತ: = ಆತ್ಮ ಸ್ವರೂಪತ: ಕೈವಲ್ಯಸ್ಥಿತಿಯಲ್ಲಿ
ಮಾಯೆಯೂ ಅವಿದ್ಯೆಯೂ ಇಲ್ಲದ
~~ಯಾವ ಉಪಾಧಿ~~ ನಿರುಪಾಧಿಕನಾಗಿರುವಂತೆ ಕಂಡುಬರುತ್ತಿರುವುದಾಗಿ
ಅನುಚರತೇ = ನಿನ್ನ ವಿಷಯವನ್ನು ಪ್ರತಿಪಾದನೆಮಾಡುತ್ತವೆ.
ಈ ಎರಡು ಸ್ಥಿತಿ ಅಂದರೆ ಸ್ತೋತ್ರ ಮತ್ತು ಉಪದೇಶವೆಂಬ ವ್ಯವಹಾರದಲ್ಲಿ
ಆತ್ಮಸ್ವರೂಪಪ್ರತ್ಯಭಿಜ್ಞೆಗೋಸ್ಕರ ಉಪಾಧಿವಿಶಿಷ್ಟರೂಪವನ್ನೇ ವೇದಗಳು
ಕೊಂಡಾಡುತ್ತಾ ಲಕ್ಷಣಯೋಪಲಕ್ಷಣಾಕ್ರಮದಿಂದ ಅಥವಾ ಹಾಗಿಲ್ಲದುದನ್ನು
ಅಲ್ಲಗಳೆಯುತ್ತಾ ನಿನ್ನನ್ನೇ ಬೋಧಿಸುವುವು. ಹೀಗೆ ವೇದಗಳು ಅಭಿಧಾವೃತ್ತಿ
ಯನ್ನು ಮೀರಿ ಲಕ್ಷಣಾವೃತ್ತಿಯಿಂದ ಅಥವಾ ಅತದ್ವ್ಯಾವೃತ್ತಿಕ್ರಮದಿಂದ

ಜೀವರ ಜ್ಞಾನಕ್ಕೆ ಅವಿಷಯನಾದ ಈಶ್ವರ ನಿಜಾತ್ಮನ ಅಂಶವು ಅವರಿಗೆ ಲಭಿಸು
ವಂತೆ ಶ್ರೀಗುರೂಪದೇಶ ~~ತ್ತದೆ~~. ಪರಮಾತ್ಮನು ರಾಮಕೃಷ್ಣಾದ್ಯವತಾರಕಾಲದಲ್ಲಿ ನಾಮರೂಪಉಪಾಧಿ
ಸಂಪರ್ಕವಿಟ್ಟುಕೊಂಡು ಲೋಕರಕ್ಷಣೆ- ತತ್ತ್ವೋಪದೇಶ ಮೊದಲಾದ
ವ್ಯವಹಾರಕ್ರೀಡೆಯನ್ನು ಲೀಲೆಯಿಂದ ನಡೆಸುತ್ತಿರುವನು. ಜೀವಪುರುಷನು
ವಿಶ್ವ ತೈಜಸ ಪ್ರಾಜ್ಞ (ಮೂರು ಅವಸ್ಥೆಗಳಲ್ಲಿ) ನಾಮರೂಪಾತ್ಮಕ ದೇಹೋ-
ಪಾಧಿವಿಶಿಷ್ಟನಾಗಿ ಲೋಕದಲ್ಲಿ ವ್ಯವಹರಿಸುತ್ತಿರುವನು. ಅವಿದ್ಯಾವ್ಯಾಪ್ತನಾದ ಜೀವನು ಆತ್ಮ
ನನ್ನೇ ನೋಡುತ್ತಿರುವನಾದರೂ ಅವನಿಗೆ ಆ ನಿಜವು ತಿಳಿಯುವುದಿಲ್ಲ. ಆತ್ಮನು
ಮಾಯೆಯಿಂದ ನಾಮರೂಪಾತ್ಮಕ ಪ್ರಪಂಚರೂಪದಿಂದಲೂ ತೋರಿಕೊಳ್ಳುವನು.
ಅಂತು ಸಮಸ್ತವ್ಯವಹಾರಗಳಿಗೂ ಮೂಲಚಾಲಕನಾಗಿದ್ದರೂ ವಾಸ್ತವದಲ್ಲಿ ವೈಕುಂ
ಠಪರಂಧಾಮದಲ್ಲಿ ನಿತ್ಯಾನಂದನಿರತನಾಗಿರುವಂತೆ ಪ್ರಾಣಿಗಳ ಪ್ರತ್ಯಗಾತ್ಮನು
ಕೂಟಸ್ಥಸಾಕ್ಷಿಯಾಗಿಯೇ ಇರುತ್ತಿದ್ದು ಸರ್ವದಾ ಶುದ್ಧಪರಮಾನಂದನೇ
ಆಗಿರುತ್ತಾನೆ.

ಈಗ ಅನಾತ್ಮಸ್ವರೂಪಗಳ ವ್ಯಾವೃತ್ತಿಯಿಂದಲೇ ವೇದಗಳು ~~[illegible]~~ ಆತ್ಮತತ್ತ್ವವನ್ನು
ಪ್ರತಿಪಾದನೆ ಮಾಡುತ್ತವೆ ಎಂಬುದನ್ನು ತಿಳಿಸುತ್ತಾರೆ.

ಬೃಹದುಪಲಬ್ಧಮೇತದವಯಂತ್ಯವಶೇಷತಯಾ
ಯತ ಉದಯಾಸ್ತಮಯೌ ವಿಕೃತೇರ್ಮೃದಿ ವಾವಿಕೃತಾತ್ ।
ಅತ ಋಷಯೋ ದಧುಸ್ತ್ವಯಿ ಮನೋವಚನಾಚರಿತಂ
ಕಥಮಯಥಾ ಭವಂತಿ ಭುವಿ ದತ್ತಪದಾನಿ ನೃಣಾಂ ॥ ೨ ॥

ಪ್ರತ್ಯಕ್ಷವೇ ಮೊದಲಾದ ಪ್ರಮಾಣಗಳಿಂದ ಉಪಲಬ್ಧಂ ಏತತ್ = ಈ ಪ್ರಪಂಚವು
ದೇವ ತಿರ್ಯ ಮಾನವಾದಿ ವ್ಯಕ್ತಿವಿಶೇಷಗಳಿಂದಲೂ ಭೂಜಲಾದಿ ವಸ್ತುವಿಶೇಷಗಳಿಂದ

ಕೂಡಿರುವಂತೆ ತಿಳಿದುಬರುತ್ತಿದೆ. ಆದಾಗ್ಯೂ ಈ ಸಮಸ್ತವೂ ಕೂಡ, ಬೃಹತ್-
ಬ್ರಹ್ಮವಸ್ತುವೇ. ಏಕೆಂದರೆ:- ಅವಶೇಷತಯಾ ಅವಯಂತಿ = ಪ್ರತೀತಿಕಾಲ
ದಲ್ಲಿ ಅವೆಲ್ಲವೂ ಜ್ಞಾನಕ್ಕೆ ವಿಷಯವಾಗಿಯೇ ಇರತಕ್ಕವುಗಳಾದ್ದರಿಂದಲೂ
ಅನಿತ್ಯ ಎಂದರೆ ಆಗಮಾಪಾಯಿಗಳಾಗಿರುವುದರಿಂದಲೂ, ಇದು ಬ್ರಹ್ಮವಲ್ಲ
ಇದು ಬ್ರಹ್ಮವಲ್ಲ ಎಂದು ಅಲ್ಲಗಳೆಯುತ್ತಾ ಬಂದರೆ ಕೊನೆಯಲ್ಲಿ ಅಲ್ಲಗಳೆಯುವ
ಜ್ಞಾನಾತ್ಮವೊಂದೇ ಉಳಿದುಕೊಳ್ಳುವ ಸತ್ಪರಮಾರ್ಥ ಸತ್ಯವಾಗಿರುತ್ತದೆಂದೂ
ನಿಶ್ಚಯಿಸಬೇಕಾಗುತ್ತದೆ. ಕಲ್ಪಿತ ವಿಕಾರಕಾರ್ಯಗಳನ್ನೆಲ್ಲಾ ಅಸತ್ಯವೆಂದು ತಳ್ಳಿ
ಹಾಕಲಾಗಿ ಕೊನೆಗೆ ಬ್ರಹ್ಮಾತ್ಮವೊಂದೇ ಉಳಿದುಕೊಳ್ಳುವುದು. ಅದೇ ವಾಸ್ತವ,
ಪರಮಾರ್ಥವು. ಆದರೂ ತೋರಿಕೊಳ್ಳುವುದೇ ಬ್ರಹ್ಮಜ್ಯೋತಿಯ ಸ್ವಭಾವವಾಗಿ-
ರುವುದರಿಂದ ಮಾಯಿಕವಾಗಿ ಈ ಪ್ರಪಂಚರೂಪದಿಂದ ಎದ್ದು ತೋರಿಕೊಳ್ಳುವುದು.
ಪ್ರಪಂಚಕಾರ್ಯಕ್ಕೆ ಬ್ರಹ್ಮವೇ ಕಾರಣವಾಗಿರುವುದು. ಮೃದಿ ವಿಕೃತೇಃ ಇವ = ಮಣ್ಣಿ
ನಲ್ಲಿ ಮಡಿಕೆಯೆಂಬ ವಿಕಾರವುಂಟಾಗುವಂತೆ ಕಾರ್ಯಕಾರಣಭಾವವಿರುವುದು.
ಆದರೆ ಒಂದು ವಿಶೇಷವುಂಟು, ಮಡಿಕೆಯುಂಟಾದಾಗ ಮಣ್ಣಿನಲ್ಲಿ ವಿಕಾರವುಂಟಾಗು
ವುದು. ಆದರೆ ಪ್ರಪಂಚಕಾರ್ಯವುಂಟಾದಾಗ ಬ್ರಹ್ಮನಲ್ಲಿ ವಿಕಾರವೇನೂ ಉಂಟಾಗುವುದಿಲ್ಲ
ಯತಃ ಅವಿಕೃತಾತ್ ಉದಯಸ್ತಮಯೌ = ಯಾವುದರ ದೆಸೆಯಿಂದ ಈ ಪ್ರಪಂಚದ
ಉದ್ಭವವಿನಾಶಗಳುಂಟಾಗುತ್ತಿವೆಯೋ ತಾನು ಅವಿಕಾರವಾಗಿಯೇ ಇರುವುದೋ ಅದು
ಬ್ರಹ್ಮವಸ್ತುವಾಗಿರುತ್ತದೆ. ಅದು ಪ್ರಪಂಚಕ್ಕೆ ಕಾರಣವು. ಪ್ರಪಂಚವು ವಿವರ್ತಕಾರ್ಯವು
ಹಗ್ಗದಲ್ಲಿ ಹಾವು ತೋರಿದಾಗ ಭ್ರಮೆಗೆ ಅಧಿಷ್ಠಾನವಾದ ಹಗ್ಗದಲ್ಲಿ ವಿಕಾರವೇನೂ
ಉಂಟಾಗಿರುವುದಿಲ್ಲ. ಭ್ರಮೆಯಿಂದ ಹಾವು ತೋರುತ್ತದೆ. ಹಾಗೆಯೇ ಭ್ರಮೆಯಿಂದ
ಪ್ರಪಂಚಕಾರ್ಯವು ತೋರುತ್ತದೆ. ಈ ಭ್ರಮೆಗೆ ಬ್ರಹ್ಮವೇ ಅಧಿಷ್ಠಾನವು. ಅಧಿಷ್ಠಾನ

ಹಗ್ಗದ ನಿಶ್ಚಯಜ್ಞಾನವಾದಾಗ ಕಲ್ಪಿತಹಾವು ಹಗ್ಗದಲ್ಲಿ ಅಡಗಿಹೋಗುತ್ತದೆ. ಹಾಗೆಯೇ ಪ್ರಪಂಚಾಧಿಷ್ಠಾನ ಬ್ರಹ್ಮಜ್ಞಾನವಾದಾಗ ಬ್ರಹ್ಮದಲ್ಲಿ ಪ್ರಪಂಚವು ಅಡಗಿಹೋಗುತ್ತದೆ. ಬ್ರಹ್ಮಜ್ಞಾನವಿಲ್ಲದಾಗಲೇ ಪ್ರಪಂಚಕಾರ್ಯವು ತೋರುವುದು. ಈರೀತಿ ಕಾರ್ಯಕಾರಣಾಭಾವವನ್ನು ಗುರುತಿಸಿಕೊಂಡು, ಆರೋಪಪ್ರಕ್ರಿಯನ್ನು ಮತ್ತು ಅಪವಾದಪ್ರಕ್ರಿಯೆಯನ್ನು ಅರ್ಥಮಾಡಿಕೊಂಡು ನಿತ್ಯಪರಮಾರ್ಥವನ್ನು ಬೋಧಿಸುವುದಕ್ಕಾಗಿಯೇ, ಋಷಯಃ ತ್ರಯಿ ಮನೋವಚನಾಚರಿತಂ ದಧುಃ = ಋಷಯಃ = ಪರೀಕ್ಷೆಗಳಿಂದ ಸೂಕ್ಷ್ಮವಿಚಾರಗಳನ್ನು ಅರಿತುಕೊಂಡ ಋಷಿಗಳು ಮತ್ತು ವೇದಗಳು. ತ್ರಯಿ = ನಿನ್ನಲ್ಲಿ. ಮನಆಚರಿತಂ ವಚನಾಚರಿತಂ = ಮನಸ್ಸಿನ ತಾತ್ಪರ್ಯನಿಶ್ಚಯವನ್ನು ವಾಕ್ಪ್ರವೃತ್ತಿಯನ್ನು ದಧುಃ = ಕೈಗೊಂಡರು. ಅಂದರೆ ಕಾರ್ಯ ಮತ್ತು ಕಾರಣಗಳ ಗ್ರಹಣೆಯಾಗುತ್ತಿರುವಾಗ ಪ್ರಕೃತಿ ವಿಕೃತಿಭಾವವನ್ನು ಗುರುತಿಸಿಕೊಳ್ಳ, ಆಗ ಬ್ರಹ್ಮಾತ್ಮನಲ್ಲಿ ಮಾಯಾವಿದ್ಯೋಪಾಧಿವೈಶಿಷ್ಟ್ಯವಿರುವುದೆಂಬುದನ್ನು ತೋರಿಸಿಕೊಳ್ಳ ಸಿದ್ಧಾಧಿಷ್ಠಾನಪ್ರಜ್ಞೆಯನ್ನುಂಟುಮಾಡಲೆಂದೇ ಆರೋಪ ಅಥವಾ ಕಲ್ಪನಾವಿಷಯಗಳನ್ನೇ ವಾಚ್ಯವಾಗಿ ಇಂದ್ರ, ಅಗ್ನಿ ಭೂಜಲ ಮೊದಲಾದ ಜಗತ್ಪದಾರ್ಥಗಳನ್ನು ಬೋಧಿಸುತ್ತಾರೆ. ಹೀಗೆ ಕಲ್ಪಿತವಸ್ತುಗಳನ್ನು ಬೋಧಿಸಿದರೂ ಲಕ್ಷಣೆಯಿಂದ ಮುಖ್ಯತಾತ್ಪರ್ಯವಿಷಯವಾದ ಅಧಿಷ್ಠಾನವನ್ನೇ ತಿಳಿಸಿಕೊಟ್ಟಂತಾಗುತ್ತದೆ. ಹೇಗೆಂದರೆ:- ನೃಣಾಂ ಭುವಿ ದತ್ತಪದಾನಿ ಅಯಥಾ ಕಥಂ ಭವಂತಿ = ಮನುಷ್ಯರು ಭೂಮಿಯ ಮೇಲೆ ಹೆಜ್ಜೆಯಿಡಬೇಕೆಂಬ ಉದ್ದೇಶದಿಂದ ಹೆಜ್ಜೆಯಿಟ್ಟರೆ ಕಲ್ಲುಮೇಲೋ ಇಟ್ಟಿಗೆಯಮೇಲೋ ಎಲ್ಲಿ ಇಡಲಿ. ಅದು ಭೂಮಿಯಮೇಲೇ ಆಗುವುದಷ್ಟೆ. ಬೇರೆ ಏನೂ ಆಗುವುದಿಲ್ಲವಷ್ಟೆ. ಹಾಗೆಯೇ ಅಪ್ರಮೇಯ ಬ್ರಹ್ಮಾತ್ಮವಸ್ತುವನ್ನು ಅಂದರೆ ಶ್ರೋತೃವಿನ ವಾಸ್ತವಾತ್ಮನನ್ನು ವಾಚ್ಯವಾಗಿ ತಿಳಿಯಲು

ಹೇಳಲು ಅಶಕ್ಯವಾದರೂ ಈ ಲಕ್ಷಣಾಕ್ರಮವೆಂಬ ಉಪಾಯದಿಂದ ಗುರುಶಾಸ್ತ್ರಗಳು ಅಗ್ನಿ-ಇಂದ್ರ ಮೊದಲಾದ ಪ್ರಪಂಚವಸ್ತುಗಳನ್ನು ಹೇಳಿದ್ದರೂ ಮುಖ್ಯತಾತ್ಪರ್ಯ ವಿಷಯನಾದ ಪ್ರತ್ಯಗಾತ್ಮ ಅಥವಾ ಬ್ರಹ್ಮಾತ್ಮನೇ ಗ್ರಹಿಸಲ್ಪಡುವನು. ಬ್ರಹ್ಮಜ್ಞಾನವೇ ಸಿದ್ಧಿಸುವುದು. ಶ್ರೋತೃಸಾಧಕನಿಗೆ ನಿಜಾತ್ಮನ ಅರಿವೇ ಸಿಗುವುದು. ಈ ಕ್ರಮದಲ್ಲಿ ಹೇಳುವುದಕ್ಕೆ ಭಾಗತ್ಯಾಗಲಕ್ಷಣಾ ಎಂದು ಹೆಸರು. ಮಾಯಾವಿಶಿಷ್ಟಚೇತನವನ್ನು ಮತ್ತು ಅವಿದ್ಯಾವಿಶಿಷ್ಟಚೇತನವನ್ನು ವಾಚ್ಯವಾಗಿ ಶಬ್ದದಿಂದ ವಾಚ್ಯಾರ್ಥಕವಾಗಿ ಹೇಳಿದಾಗ ಅವಾಂತರವಾಕ್ಯಗಳ ಸಹಾಯದಿಂದ ಮತ್ತು ತಾತ್ಪರ್ಯಪರ್ಯಾಲೋಚನೆಯಿಂದ ಮಾಯಾ ಅವಿದ್ಯಾ ಅಂಶಗಳನ್ನು ತ್ಯಜಿಸಿ ಶುದ್ಧಚೇತನಾಂಶಕ್ಕೆ ಅಭೇದವನ್ನು ಗ್ರಹಿಸಿಕೊಳ್ಳುವುದೇ ಭಾಗತ್ಯಾಗಲಕ್ಷಣಾ ಎನ್ನುವರು. ಮೇಲೆ ಹೇಳಿದ ಕಲ್ಪಿತಾಂಶಗಳನ್ನೆಲ್ಲ ಇದಲ್ಲ ಇದಲ್ಲ ಎಂದು ಅಪವಾದಮುಖದಿಂದ ತಳ್ಳುವುದೇ ಅನಾತ್ಮವಸ್ತುಧರ್ಮಗಳ ವ್ಯಾವೃತ್ತಿ. ಹೀಗೆ ವ್ಯಾವೃತ್ತಿಮುಖದಿಂದಾಗ ಕೊನೆಯಲ್ಲಿ ತಳ್ಳವಾತನೇ ಉಳಿದುಕೊಳ್ಳುವನು. ಅವನೇ ಆತ್ಮ - ಅವನೇ ಪರಮಾತ್ಮನು. ಎಂಬೀರೀತಿ ನಿಸ್ತರಿಸಲಾಗಿದೆ.

ಭಕ್ತಿ ಅಥವಾ ಪ್ರಪತ್ತಿ = ದಾಸೋऽಹಂ ಎಂಬ ಒಂದು ಉಪದೇಶ.
ಜ್ಞಾನ ಅಥವಾ ಪ್ರತಿಪತ್ತಿ = ಸೋऽಹಂ ಎಂಬ ಜ್ಞಾನೋಪದೇಶ ಮತ್ತೊಂದು.
ಈ ಎರಡು ಉಪದೇಶಗಳು ವೇದೋಕ್ತವಾಗಿವೆ ಎಂದು ಸೂಚಿಸುವ

ಶ್ಲೋಕ:- ಇತಿ ಸ್ಮರಂತ್ಯ ಶ್ರೀಧರ ತೇऽಖಿಲಲೋಕಮಲ-
ಕ್ಷಪಣಕಥಾಮೃತಾಬ್ಧಿಮವಗಾಹ್ಯ ತಪಾಂಸಿ ಜಹುಃ।
ಕಿಮುತ ಪುನಃ ಸ್ವಧಾಮವಿಧುತಾಶಯಕಾಲಗುಣಾಃ
ಪರಮ ಭಜಂತಿ ಯೇ ಪದಮಜಸ್ರಸುಖಾನುಭವಂ॥೨॥

ಹೇ ಕೃಷ್ಣ ಧೀಮತೇ, = ಹೇ ತ್ರಿಗುಣಾಮಾಯಾಧ್ಯಕ್ಷನೆ, ಇತಿ ಸ್ಮರಯ: = ಮೇಲೆ
ವಿವರಿಸಿರುವಂತೆ ಕಾರ್ಯವೆಲ್ಲವೂ ಕಾರಣಮಾತ್ರ ಪರಮಾರ್ಥವುಳ್ಳದ್ದೆಂದೂ
ಕಾರ್ಯವಿಕಲ್ಪಗಳೆಲ್ಲವೂ ಕೇವಲ ಮಿಥ್ಯಾರೂಪವೆಂದೂ ನಿಶ್ಚಯ ಮಾಡಿಕೊಂಡ
ಜ್ಞಾನಿಗಳು ತತ್ತ್ವಜ್ಞಾನವಿಲ್ಲದಿದ್ದರೂ
(ವಿದ್ವಾಂಸರಾದ ವಿವೇಕಿಗಳು) ತವ ಅಖಿಲಲೋಕಮಲಕ್ಷಪಣಕಥಾಮೃತಾಬ್ಧಿಂ
ಕಳೆಯುವಂತಹ
ಅವಗಾಹ್ಯ = ಸಮಸ್ತಲೋಕಗಳ ಜನರ ಸಕಲಪಾಪಗಳನ್ನು ನಿನ್ನ ರಾಮ
ಕೃಷ್ಣಾದ್ಯವತಾರಕಥೆಗಳ ಸ್ನೇ ಅಮೃತಸಿಂಧುವಿನಿಂದ ಕೂಡಿದ
ಆ ಪುಣ್ಯತೀರ್ಥದಲ್ಲಿ ಮಿಂದು ಅಂದರೆ ಪ್ರೀತ್ಯಾದರಪೂರ್ವಕವಾಗಿ ಆ ಕಥೆ
ಉಪಾಸಕ
ಗಳನ್ನು ಶ್ರವಣಮಾಡುತ್ತಾ ನಿನ್ನ ಆರಾಧಕರಾದ ಭಕ್ತರು, ತಪಾಂಸಿ ಜಹು: =
ಈ ಸಂಸಾರತಾಪಗಳನ್ನೆಲ್ಲಾ ಪರಿಹರಿಸಿಕೊಳ್ಳುವರು. ಮತ್ತು ತಪಸ್ಸಾಧನೆಯೇ
ಮೊದಲಾದ ಯತ್ನಾಂತರಗಳನ್ನು ತ್ಯಜಿಸಿರುವರು. (ಇದು ಪ್ರವೃತ್ತಿಮಾರ್ಗ
ದಿಂದ ಸಿದ್ಧಿಸುವ ಫಲವು) (ಈಗ ನಿವೃತ್ತಿಮಾರ್ಗದ ಲಾಭವನ್ನು ಹೇಳುತ್ತಾರೆ)
ಕಿಮುತ ಪುನ: = ಅಂದಾಗ ಮತ್ತೆ ಹೇಳಬೇಕಾದ್ದೇನಿದೆ. ಹೇ ಪರಮ =
ಎಲೈ ಪರಮಾತ್ಮನೇ, ಯೇ ಸ್ವಧಾಮವಿಧುತಾಶಯಕಾಲಗುಣಾ: = ವಿಚಾರ
ಪೂರ್ವಕವಾಗಿ ತಮ್ಮ ಪ್ರತ್ಯಗಾತ್ಮನೇ ಆಗಿರುವ ನಿನ್ನ ಯಥಾರ್ಥಸ್ವರೂಪ
ವನ್ನು ಅರಿಯುವ ಮೂಲಕ ರಾಗದ್ವೇಷಾದಿಗಳನ್ನು ಮತ್ತು ಜರಾರೋಗಾದ್ಯು(ಪ
ಕಾಲಬಂಧನ ಮತ್ತು ಗುಣಸಂಗಗಳನ್ನು
ದ್ರ)ವಗಳನ್ನು ಕಳೆದುಕೊಳ್ಳುತ್ತಾರೆಯೋ ಅಂತಹ ತತ್ತ್ವಜ್ಞಾನಿಗಳು. ಅಜಸ್ರ
ಸುಖಾನುಭವಂ ಭವಂ ಭಜಂತಿ (ಇತಿ ಕಿಮು ಪುನ: ವಕ್ತವ್ಯಂ) ನಿತ್ಯನಿರಂ
ತರಾನಂದಾನುಭವವೆಂಬ ಬ್ರಹ್ಮೀಭಾವವನ್ನು ಹೊಂದುತ್ತಾರೆಂದೂ (~~ಮತ್ತೆ ಹೇ~~
~~ಳಬೇಕೆ~~] ಸಂಸಾರತಾಪಗಳನ್ನು ನೀಗಿಕೊಳ್ಳುತ್ತಾರೆಂದೂ ಮತ್ತೆ ಹೇಳಬೇಕೆ?
ತತ್ತ್ವಜ್ಞಾನವಿಲ್ಲದೇ ಇದ್ದರೂ ಭಕ್ತಿಯಿಂದ ಭಗವತ್ಕಥೆಗಳನ್ನು ಕೇಳಿದ ಮಾತ್ರಕ್ಕೆ

ಮುಕ್ತಿದೊರೆಯುವುದೆಂದು ಶಿಷ್ಟಜನರು ಸ್ವಾನುಭವದಿಂದ ಹೇಳುತ್ತಿರುವಾಗ
ಇನ್ನು ನಾಸ್ತಿಕ ಪರಮಾತ್ಮನ ಅಪರೋಕ್ಷಾನುಭವವನ್ನೇ ಪಡೆದುಕೊಂಡವರಿಗೆ
ಮುಕ್ತಿಫಲಸಿದ್ಧಿ ಎಂದು ಪ್ರತ್ಯೇಕ ಹೇಳಬೇಕೆ? ಇಂತು ಮುಕ್ತಿ ಪಡೆಯಲು
ಎರಡು ಮಾರ್ಗಗಳು ೧ ಭಕ್ತಿಪೂರ್ವಕವಾಗಿ ಭಗವತ್ಕಥಾಶ್ರವಣ-ಆರಾಧನೆ
೨. ತತ್ತ್ವಜಿಜ್ಞಾಸೆ ಎಂಬ ಪರಮಾರ್ಥವಿಚಾರ ಶ್ರವಣ-ಮನನ. ಈ ರೀತಿ
ಎರಡು ರೀತಿಯ ಉಪಾಸನೆಗಳ ಪೈಕಿ ಯಾವುದಾದರೊಂದು ಬಗೆಯ ಉಪಾ
ಸನೆಯನ್ನು ಮನುಷ್ಯನು ಅವಶ್ಯವಾಗಿ ಅನುವರ್ತಿಸಿಕೊಂಡಿರಬೇಕು. ಇಲ್ಲದಿದ್ದರೆ:-

ದೃತಯ ಇವ ಶ್ವಸಂತ್ಯಸುಭೃತೋ ಯದಿ ತೇಽನುವಿಧಾಃ
ಮಹದಹಮಾದಯೋಂಡಮಸೃಜನ್ ಯದನುಗ್ರಹತಃ।
ಪುರುಷವಿಧೋಽನ್ವಯೋಽತ್ರ ಚರಮೋಽನ್ನಮಯಾದಿಷು ಯಃ
ಸದಸತಃ ಪರಂ ತ್ವಮಥ ಯದೇಷ್ವವಶೇಷಮೃತಂ॥ ೬ ॥

ದೃತಯ ಇವ ಶ್ವಸಂತಿ = ಅಭಕ್ತರು ಕೇವಲ ತಿದಿಯಂತೆ ಬುಸ್‌ಬುಸ್ ಎಂದು
ಉಸಿರಾಡುವರು. ಅವರ ಬದುಕು ವ್ಯರ್ಥವಾದುದೇ ಸರಿ. ಅಸುಭೃತಃ = ಮ-
ನುಷ್ಯಾದಿ ಪ್ರಾಣಿಗಳು. ಯದಿ ತೇ ಅನುವಿಧಾಃ = ನಿನ್ನಲ್ಲಿ (ಪರಮಾತ್ಮನಲ್ಲಿ)
ಭಕ್ತಿಭಜನಾದಿಗಳಿಂದ ಅನುವರ್ತಿಸಿಕೊಂಡಿದ್ದರೆ. ಭಕ್ತರಾಗಿದ್ದರೆ,
ತದಾ ತೇ ಶ್ವಸಂತಿ = ಅವರ ಉಸಿರಾಟವು ಸಫಲ. ಅವರ ಬದುಕು ಪ್ರಶಸ್ತ.
ಭಗವದ್ವಿಮುಖರಾದ ಮರ್ತ್ಯರು ದೇವರನ್ನು ಮರೆತೇ ಕಾಲಕಳೆಯುತ್ತಿರುವರಾದ
ತಾವು ಸ್ವತಂತ್ರರೆಂದುಕೊಂಡು ಸ್ವೇಚ್ಛಾಕರ್ಮವ ಮಾಡುತ್ತಾ ಕರ್ಮಫಲವನ್ನನುಭ
ವಿಸುತ್ತಾ ಮೋಹಪರವಶರಾಗಿದ್ದರು. ಅವರಿಗೆ ಪರಮಾತ್ಮನ ಹಂಗೇ ಇಲ್ಲವೆಂದ
ಹೇಳುವಂತಿಲ್ಲ, ಏಕೆಂದರೆ:- ಯದನುಗ್ರಹತಃ ಮಹದಹಮಾದಯಃ: ಅಂಡ

ಮನಸ್ಸು ಜನ್ = ಅವಿಕಾರಿಯಾದ ಪರಮಾತ್ಮನ ಚೈತನ್ಯಾನುಗ್ರಹ ಹಾಗು ಅನುಪ್ರವೇಶಸಾನ್ನಿಧ್ಯ ದಿಂದಲೇ ಬುದ್ಧಿ ಅಹಂಕಾರಾದಿಗಳು ಕಾರ್ಯಂತರಾದಿಗಳನ್ನು ಉಂಟುಮಾಡುತ್ತವೆ, ಹಾಗೆ ಅವು ಸ್ವವಿಷಯಗಳಲ್ಲಿ ಪ್ರವರ್ತಿಸಿಕೊಂಡೇ ಈ ಶರೀರಾದಿಗಳ ಸೃಷ್ಟಿಯಾಗುತ್ತವೆ. ಬುದ್ಧಿ ಅಹಂಕಾರಾದಿಗಳು ಜಡಪ್ರಕೃತಿಪರಿಣಾಮಕಾರ್ಯ ಗಳಾಗಿರುವುದರಿಂದ ಅವು ಸ್ವತಂತ್ರವಾಗಿ ಏನೊಂದು ವ್ಯಾಪಾರವನ್ನು ಮಾಡಲಾರವು. ವಸ್ತುಸ್ಥಿತಿ ಹೀಗಿರುವುದನ್ನು ಅರಿಯದೆಯೂ ಭಗವತ್ಪೂಜನೆ ಮಾಡದೆಯು ಇರುವ ಮೂಢಜನರ ಕೃತಘ್ನರೆಂದೇ ಹೇಳಬೇಕು. ಹಾಗು ಪರಮಾತ್ಮನು ಕರುಣಾಳುವಾಗಿರುವುದರಿಂದ ಸಕಲಜೀವರ ಜೀವನಭೋಗಗಳಿಗೋಸ್ಕರ ಸೃಷ್ಟಿಮಾಡಿಯೇ ಇರುತ್ತಾನೆ. ಹಾಗು ಸಮಸ್ತಜೀವರ ಬುದ್ಧಿ ಅಹಂಕಾರಾದಿ ಗಳಲ್ಲಿ ಅನುಪ್ರವೇಶಮಾಡಿ ಅಂದರೆ ಚೇತನಗೊಳಿಸಿರುವುದರಿಂದಲೇ ಮನುಷ್ಯರು ಕರ್ಮಮಾಡುತ್ತಲು ಫಲವನ್ನನುಭವಿಸುತ್ತಲು ಇರುವರು. ಹೀಗೆ ಅಂತರ್ಯಾಮಿ ಆತ್ಮನ ಅನುಗ್ರಹವಿರುವುದರಿಂದಲೇ ಬ್ರಹ್ಮಾಂಡಪಿಂಡಾಗಿರುವುದು ಕಕ್ರಮದಿಂದಲೇ ಸಮಷ್ಟಿರೂಪದ ಮತ್ತು ವ್ಯಷ್ಟಿರೂಪದ ಸ್ಥೂಲಸೂಕ್ಷ್ಮದೇಹಗಳು ಹುಟ್ಟಿರುತ್ತವೆ. ಹೀಗೆ ಉತ್ಪನ್ನವಾದ ದೇಹವನ್ನು ಅನ್ನಮಯಾದಿ ಪಂಚಪ್ರಕಾರವಾಗಿ ವಿಭಜಿಸಿ ವಿವೇಚನೆ ಮಾಡಿ ನೋಡಿದರೆ ಆ ಎಲ್ಲ ದೇಹಕೋಶಗಳಲ್ಲಿ ಚೇತನಾತ್ಮನು ತುಂಬಿಕೊಂಡು ಅವನ್ನು ಚೇತನಗೊಳಿಸಿರುತ್ತಾನೆಂದು ತಿಳಿಯುವುದು. ಆದ್ದರಿಂದಲೇ ಆತ್ಮನನ್ನು ಪುರುಷವಿಧಃ ಅನ್ವಯಃ ಎಂದು ವೇದವು ತಿಳಿಸಿದೆ. ಅತ್ರ ಅನ್ನಾದ-ಯಾದ್ಯಾಪುರುಷಃ ಚರಮಃ = ಅನ್ನಮಯ ಪ್ರಾಣಮಯ ಇತ್ಯಾದಿ ಪ್ರತಿಪಾದನ ಕ್ರಮದಲ್ಲಿ ಕೊನೆಯದಾದ ಆನಂದಮಯನಲ್ಲಿಯು ಅನ್ವಯಿಯಾಗಿದ್ದು ಬ್ರಹ್ಮ ಪುಚ್ಛಂ ಪ್ರತಿಷ್ಠಾ ಎಂದು ಹೇಳಿ ಅಂತರನ್ವಿತನಾಗಿರುವ ಅಂತರಾತ್ಮನನ್ನೇ

ತಿಳಿಸಿಕೊಡಲಾಗಿದೆಯಲ್ಲವೇ! ಆ ಸದ್ರೂಪವೇ ತ್ವಂ=ನೀನು ಪರಮಾತ್ಮನಾಗಿರುತ್ತೀಯೆ. ಸದಸತಃ ಪರಂ= ಮೂರ್ತಾಮೂರ್ತ ವಸ್ತುಗಳಿಗಿಂತ, ಕಾರ್ಯಕಾರಣಗಳಿಗಿಂತ ಮತ್ತು ಸ್ಥೂಲಸೂಕ್ಷ್ಮಗಳಿಗಿಂತ ಬೇರೆಯಾಗಿದ್ದೀಯೆ. ಅವಕ್ಕೆ ಸಾಕ್ಷಿಯಾಗಿ ವ್ಯತಿರಿಕ್ತನು ಆಗಿದ್ದೀಯೆ. ಇದು ಏಕೆ ಯದಿದಮಶೇಷಂ ತದಶಿವೇತರಂ= ಕಾಣುವ ಈ ಅನ್ನಮಯಾದಿಗಳೆಲ್ಲ ನೀನು ಪ್ರವೇಶಮಾಡಿರುವುದರಿಂದ ನಿನ್ನಲ್ಲಿ ಅನ್ನಮಯಾದಿ ಸಕಲವೂ ಆರೋಪಿತಗಳಾಗಿರುತ್ತವೆ. ಆರೋಪವಸ್ತುವೆಲ್ಲ ಅಜ್ಞಾನವೇ ಪ್ರಮುಖವಸ್ತುವಾಗಿರುವುದರಿಂದ ಆ ಆಗಂತುಕ ಅನ್ನಮಯಾದಿ ನಾಮರೂಪಗಳೆಲ್ಲವೂ ಬಾಧೆಗೆ ವಿಷಯವಾಗಿರುತ್ತವೆ. ಅದು ಜ್ಞಾನಸಾಕ್ಷಿಯು ಅಬಾಧಿತನಾಗಿ ಶಿಷ್ಯಮಾಣನಾಗಿರುತ್ತಾನೆ. ಕೊನೆಗೂ ಉಳಿದುಕೊಳ್ಳುತ್ತಾನೆ. ಅಂತಹ ಚಿದಾತ್ಮಸಾಕ್ಷಿಯಾದ ನೀನೇ (ಪರಮಾತ್ಮನು) ಸತ್ಯಸ್ವರೂಪನಾಗಿರುತ್ತೀಯೆ, ಆಗಂತುಕವಾಗಿ ಬಂದು ಹೋಗುವ ನಾಮರೂಪಗಳೇನೂ ಸಾಕ್ಷಿಗೆ ಇರುವುದಿಲ್ಲ. ಆದ್ದರಿಂದ ಅವಶಿಷ್ಯಮಾಣನಾದ ಆತ್ಮನು ಅವಿಕಾರಿಯು ಅಸಂಗನು ಆಗಿರುತ್ತಾನೆ. ಜಿಜ್ಞಾಸುಗಳು ಗ್ರಹಿಸಲಿಕ್ಕೋಸ್ಕರ ಸ್ಥೂಲ ಸೂಕ್ಷ್ಮ ಕ್ರಮವನ್ನನುಸರಿಸಿ ಪಂಚಕೋಶ ಪ್ರಕ್ರಿಯೆಯನ್ನು ಕಲ್ಪಿಸಲಾಗಿದೆ. ಆತ್ಮನು ಸ್ಥೂಲ ಅನ್ನಮಯಾದಿಯಾಗಿ ಸೂಕ್ಷ್ಮ ಆನಂದಮಯದವರೆಗಿನ ಕೋಶಗಳಲ್ಲಿ ತುಂಬಿರುತ್ತಾನೆ ಎಂದರೆ, ಇದು ಶಾಖಾಚಂದ್ರನ್ಯಾಯ. ಅಂದರೆ ಸೂಕ್ಷ್ಮಕಲೆಯ ಚಂದ್ರನನ್ನು ತೋರಿಸಿಕೊಡುವುದಕ್ಕಾಗಿ ಅದೋ ನೋಡಿ, ಮರದ ಕೊಂಬೆಯ ತುದಿಯಲ್ಲಿ ಚಂದ್ರನಿರುವನು ಎಂದು ತೋರಿಸುತ್ತಾರೆ. ಕೊಂಬೆಗೂ ಚಂದ್ರನಿಗೂ ವಸ್ತುತಃ ಸಂಬಂಧವಿರುವುದಿಲ್ಲ. ಕಾರ್ಯಕಾರಣಭಾವವೂ ಇರುವುದಿಲ್ಲ. ಆದಾಗ್ಯೂ ಮರದ ಕೊಂಬೆಯನ್ನನುಸರಿಸಿ ನೋಡುವವರಿಗೆ ಚಂದ್ರನು ನೋಡಲು ಸಿಕ್ಕುವನು

ಇದು ದೃಷ್ಟವಾಗಿದೆ. ಹಾಗೆಯೇ ಇಲ್ಲಿಯೂ ಗ್ರಹಿಸಬೇಕು. ಮನುಷ್ಯನ ನಿಜಾತ್ಮನು ಸಾಕ್ಷಿಯು ಪಂಚಕೋಶಾತೀತನಾಗಿರುತ್ತಾನೆಂಬುದನ್ನು ಅನುಭವಕ್ಕೆ ತಂದುಕೊಡಲೆಂದೇ ವೇದವು ಲಕ್ಷ್ಯಕೋಶಲಕ್ಷಣಾವೃತ್ತಿಯಿಂದ ಪರಮಾತ್ಮನನ್ನು ತೋರಿಸುತ್ತಾ ಶ್ರೋತೃಜನಕ್ಕೆ ಪ್ರಬೋಧಿಸುತ್ತದೆ. ಯೋಗನಿದ್ರೆಯಿಂದ ಎಚ್ಚರಗೊಳಿಸುತ್ತದೆ.

ಪರಮಾತ್ಮನನ್ನು ಸ್ತುತಿಸುವ ವೇದೋಪನಿಷತ್ತುಗಳನ್ನು ಗ್ರಹಿಸಿಕೊಂಡಿರುವ ಶಿಷ್ಟರ ಸದಾಚಾರಗಳನ್ನು ಸಾಧನಾಕ್ರಮಗಳನ್ನು ವಿವರಿಸುತ್ತಾರೆ —

ಉದರಮುಪಾಸತೇ ಯ ಋಷಿವರ್ತ್ಮಸು ಕೂರ್ಪದೃಶಃ
ಪರಿಸರಪದ್ಧತಿಂ ಹೃದಯಮಾರುಣಯೋ ದಹರಂ ।
ತತ ಉದಗಾದನಂತ ತವ ಧಾಮ ಶಿರಃ ಪರಮಂ
ಪುನರಿಹ ಯತ್ಸಮೇತ್ಯ ನ ಪತಂತಿ ಕೃತಾಂತಮುಖೇ ॥೩॥

ಋಷಿವರ್ತ್ಮಸು = ಕ್ರಾಂತದರ್ಶಿಗಳಾದ ಋಷಿಮುನಿಗಳು ಮತ್ತು ಪರಮಾರ್ಥ ಚಿಂತಿಸುವ ತಾತ್ವಜ್ಞರು, ವೇದೋಪನಿಷತ್ತನ್ನು ಅನುಷ್ಠಾನದಲ್ಲಿಟ್ಟುಕೊಂಡಿರುವ ಶಿಷ್ಟಜನರ ಪದ್ಧತಿ. ಯೇ ಕೂರ್ಪದೃಶಃ = ಮಾತ್ರ ಸ್ಥೂಲದೃಷ್ಟಿಯುಳ್ಳವರು (ಶರ್ಕರಾಕ್ಷ ಮೊದಲಾದವರು) ಅವರು, ಉದರಂ ಉಪಾಸತೇ = ಉದರಂ ಬ್ರಹ್ಮೇತ್ಯುಪಾಸತೇ ಎಂಬ ವೇದವಚನವನ್ನೇ ಮುಖ್ಯವೆಂದು ಗ್ರಹಿಸಿಕೊಂಡು ಉದರ (ಹೊಟ್ಟೆ) ಆಲಂಬನವಾಗಿ ಬ್ರಹ್ಮನನ್ನೇ ಉಪಾಸಿಸುತ್ತಾರೆ. ಅವರ ಆಶಯವೇನೆಂದರೆ:- ಮನುಷ್ಯನ ಸಕಲ ಜ್ಞಾನಕರ್ಮವ್ಯವಹಾರಗಳಿಗೂ ಆಹಾರತುಂಬಿದ ಹೊಟ್ಟೆಯೇ ಆಧಾರವಾಗಿರುತ್ತದೆ. ಜಠರಕೋಶವು ಬರಿದಾಗಿ ಶಕ್ತಿಗುಂದಿದ್ದರೆ ಯಾವುದೂ ಚೇತನ ವ್ಯವಹಾರವೂ ನಡೆಯುವುದಿಲ್ಲ. ಹೀಗೆಂಬುದನ್ನು ವಿಚಾರಪೂರ್ವಕವಾಗಿ ನಿಶ್ಚಯ ಮಾಡಿಕೊಂಡ ಅಂತಹ ಸಾಧಕರು ಉದರವನ್ನೇ ಬ್ರಹ್ಮ ಎಂದು ಉಪಾಸಿಸುತ್ತಾರೆ.

ಮತ್ತು ಆ ಉಪಾಸನೆಯಿಂದ ಸಿದ್ಧಿಯನ್ನು ಪಡೆಯುತ್ತಾರೆ. ಇದೊಂದು ಸಾಧನೆಯ ಮಾರ್ಗವು. ಇನ್ನೊಂದು ವೇದೋಕ್ತವಾದ ಸೂಕ್ಷ್ಮವಾದ ಸಾಧನಾಮಾರ್ಗವೊಂದ ಆರುಣಾಯ:= ಅರುಣರೆಂಬ ಸಾಧಕರು. ಅವರಲ್ಲಿ ಕೆಲವರು, ಪಿಂಡರ ಪದ್ಮತಿಂ ಹೃದಯಂ = ಹೃದಯಂ ಬ್ರಹ್ಮೇತ್ಯುಪಾಸೀತ ಎಂಬ ಉಪದೇಶವನ್ನು ಗ್ರಹಿಸಿಕೊಂಡು ಅವರು ಚೈತನ್ಯಶಕ್ತಿಯ ಸಂಚಾರಕ್ರಮವನ್ನು ಗ್ರಹಿಸಿದಾಗ ಹೃದಯ ಮೂಲಕವಾಗಿ ಶರೀರದೊಳಗಿರುವ ನಾಡಿಗಳಲ್ಲಿ ಶಕ್ತಿಯು ಕ್ರಮವಾಗಿ ಸಂಚರಿಸುತ್ತಿರುವುದು ಅನುಭವಕ್ಕೆ ಬರುವುದಾದ್ದರಿಂದ ಹೃದಯವನ್ನೇ ಬ್ರಹ್ಮನೆಂದು ಉಪಾಸಿಸಿ ಸಿದ್ಧಿಪಡೆದವರಾಗಿರುತ್ತಾರೆ. ಆ ಅರುಣರಲ್ಲಿ ಮತ್ತೆ ಕೆಲವರು. ದಹರಂ = ದಹರಂ ಬ್ರಹ್ಮೇತ್ಯುಪಾಸೀತ ಎಂಬ ಉಪದೇಶವನ್ನು ಗ್ರಹಿಸಿಕೊಂಡು ದಹರವೆಂಬ ಹೃದಯಾಕಾಶವನ್ನು ಬ್ರಹ್ಮನೆಂದು ಉಪಾಸಿಸಿದ್ದಾರೆ. ಅವರ ಅಭಿಪ್ರಾಯದಂತೆ ಹೃದಯವೆಂದರೆ ಮಾಂಸಕೋಶವೆಂದರ್ಥವಲ್ಲ. ಆ ಹೃದಯದ ಅಂತರಾಕಾಶದಲ್ಲಿ ಚೈತನ್ಯಶಕ್ತಿ ತುಂಬಿರುವುದೆಂದು ಗ್ರಹಿಸಿಕೊಂಡಿದ್ದಾರೆ, ಅಂತಹವರು ಆಕಾಶವೇ ಬ್ರಹ್ಮನೆಂದು ಉಪಾಸಿಸಿ ಸಿದ್ಧಿಪಡೆದವರಾಗಿದ್ದಾರೆ. ಹೀಗೆ ಅನೇಕ ಶಿಷ್ಟರಾದ ಸಾಧಕರು ವೇದೋಪದೇಶವನ್ನನುಸರಿಸಿ ಸಾಧನೆಮಾಡುತ್ತಿರುವುದೆಂಬುದೇನೋ ಸರಿ. ಆದರೆ ದೇವ ಅನಂತ = ನಿರವಧಿಕಸ್ವರೂಪಮಹಿಮೆಯುಳ್ಳ ಪರಮಾತ್ಮನೇ, ತವ ಪರಮಂ ಧಾಮ = ನಿನ್ನ ಅತ್ಯಂತ ಶ್ರೇಷ್ಠವಾದ ತೇಜೋರೂಪವು, ತವ ಉದರಾತ್ = ಆ ಉದರ ಹೃದಯ ದಹರಾಕಾಶಗಳನ್ನು ಮೀರಿದೆ. ಚೈತನ್ಯಶಕ್ತಿಸಂಚಾರವಾಗುವ ನಾಡಿಕ್ರಮಗಳಲ್ಲಿ ಮೂಲಾಧಾರ ಮೊದಲಾಗಿ ಕೊನೆಯದಾದ, ಶಿರ: ಉದರಾತ್ = ಸಹಸ್ರಾರವೆಂಬ ಶಿರಸ್ಥಾನವನ್ನು ಮೀರಿರುತ್ತದೆ. ಆ ಸ್ಥಾನವನ್ನು ಬ್ರಹ್ಮರಂಧ್ರವೆಂದೇ ಕರೆಯುತ್ತಾರೆ. ಯತೆ ಸಮುದ್ರ: =

ಈ ಬ್ರಹ್ಮಸಂಸ್ಕಾರವನ್ನು ಯಾವ ಸಾಧಕರು ಯೋಗಸಾಧನೆಯಿಂದ ಸಾಧಿಸಿರುತ್ತಾರೋ ಅವರು ನಿನ್ನ ಪರಂಧಾಮವನ್ನು ವಿಚಾರದಿಂದ ಅಪರೋಕ್ಷ ಮಾಡಿಕೊಂಡಿರುತ್ತಾರೋ ಅಂತಹ ಸಿದ್ಧಪುರುಷರು ಮಾತ್ರ. ಇದು ಕೃತಾಂತಮುಖಾತ್ ಪುನಃ ನ ಪತಂತಿ = ಮೃತ್ಯು(ಮುಖ)ವಿನ ಬಾಯಿಯಾದ ಈ ಸಂಸಾರಕ್ಕೆ ಪುನಃ ಮತ್ತೆ ಎಂದೂ ಬೀಳುವುದಿಲ್ಲ. ಎಂದು ಶ್ರೇಯಃ ಪ್ರಾಪ್ತಿಗೆ ಉಪಾಸನೆ ಮತ್ತು ತತ್ತ್ವಜ್ಞಾನ ಎಂಬ ಎರಡು ರೀತಿಯಿಂದ ಸಾಧಕರ ಸಾಧನೆಮಾಡಲು ಉಪದೇಶಿಸುತ್ತಾ ಪದ್ಯ ಆ ಪರಮಾತ್ಮನನ್ನೇ ಸ್ತುತಿಸಿದೆ. ಇದು ಕ್ರಮಮುಕ್ತಿ. ವಿಚಾರಮಾಡಿ ತತ್ತ್ವಜ್ಞಾನ ಮಾಡಿಕೊಂಡರೆ ಸದ್ಯೋಮುಕ್ತಿ ಆಗುವುದು.

ಆ ವಿಚಾರಕ್ರಮವನ್ನೇ ವಿಸ್ತರಿಸುತ್ತ ಸ್ತುತಿಸುವ ಪರಿಯೆಂದರೆ:—

ಸ್ವಕೃತವಿಚಿತ್ರಯೋನಿಷು ವಿಶನ್ನಿವ ಹೇತುತಯಾ
ತರತಮತಶ್ಚಕಾಸ್ಸ್ಯನಲವತ್ ಸ್ವಕೃತಾನುಕೃತಿಃ ।
ಅಥ ವಿತಥಾಸ್ವಮೂಷ್ವವಿತಥಂ ತವ ಧಾಮ ಸಮಂ
ವಿರಜಧಿಯೋಽನ್ವಯಂತ್ಯಭಿವಿಪಣ್ಯವ ಏಕರಸಂ ॥ ೬ ॥

ಹೇ ಭಗವನ್, ತ್ವಂ = ನೀನು. ಅನಲವತ್ = ಬೆಂಕಿಯಂತೆ. ಸ್ವಕೃತಾನುಕೃತಿಃ = ಸ್ವಕೃತಕಾರ್ಯವನ್ನುವನ್ನೇ ಅನುವರ್ತಿಸಿಕೊಂಡಿರುತ್ತೀಯೆ. ಅಂದರೆ ಕಾರ್ಯವನ್ನು ತಾದಾತ್ಮ್ಯಭಾವದಿಂದಲೇ ಇರುವವನು ಹೋಲಿಕೊಳ್ಳುವವನು ಆಗಿದ್ದೀಯೆ. ಆದ್ದರಿಂದ, ಸ್ವಕೃತವಿಚಿತ್ರಯೋನಿಷು = ಸ್ವಕೃತವಾದ ಪ್ರಪಂಚದ ವಿವಿಧಕಾರ್ಯಗಳಲ್ಲಿ ಹೇತುತಯಾ = ಅವುಗಳ ಉಪಾದಾನಕಾರಣನಾಗಿ. ವಿಶನ್ ಇವ = ಪ್ರವೇಶ ಮಾಡಿರುವವನೋ ಎಂಬಂತೆ, ಮತ್ತು ತರತಮತಃ = ತಾರತಮ್ಯ ಅಂದರೆ ಉಚ್ಚ ನೀಚ ಮಧ್ಯಮ ಭಾವಗಳಿಂದ. ಚಕಾಸ್ಸಿ = ಪ್ರಕಾಶಿಸುತ್ತೀಯೆ. ಯೋನಿಷು ಕಾಷ್ಠಾದಿಗಳಲ್ಲಿರುವಾಗ ಅಗ್ನಿಸ್ಥಿತಿಯು [illegible] ಅನುಕೃತನಾಗಿಯೇ ಇರುತ್ತಾನೆ.

ಶಬ್ದಕ್ಕೆ ಕಾರಣವೆಂದು ಉಪಾಧಿಯೆಂದು ಅರ್ಥವಾಗುತ್ತದೆ. ಬೆಂಕಿಯು ತಾಗಿ
ಕಟ್ಟಿಗೆಯದಕ್ಕೆ ಕಾಷ್ಠವು ಉಪಾಧಿಯಾಗುತ್ತದೆ. ಈ ಕಾಷ್ಠದ ಉತ್ಪತ್ತಿಗೂ
ಮತ್ತು ಸ್ಥಿತಿಗೂ ತೇಜೋರೂಪದ ಈ ಬೆಂಕಿಯೇ ಕಾರಣವಾಗುತ್ತದೆ. ತೇಜಃ
ಪದಾರ್ಥವಿಲ್ಲದೆ ಕಾಷ್ಠಾದ್ಯಾದ ಉತ್ಪತ್ತಿಸ್ಥಿತಿಗಳು ಉಂಟಾಗಲಾರವು.
ಆದ್ದರಿಂದ ತೇಜಸ್ಸು ಎಂಬ ಬೆಂಕಿಯು ತನ್ನ ಮಹಿಮೆಯಿಂದ ಕಾಷ್ಠವನ್ನು
ಉಂಟುಮಾಡಿಕೊಂಡು ಅದೇ ಕಾಷ್ಠದ ವಿವಿಧ ಆಕಾರಗಳಲ್ಲಿ ಬೆಂಕಿ ಹತ್ತಿ
ಉರಿಯುವಾಗ ಆ ಉಪಾಧಿಯಲ್ಲಿ ಬೆಂಕಿ ತಾನೇ ತೋರಿಕೊಳ್ಳುವುದು. ಆ ಕಾಷ್ಠದ
ಆಕಾರವನ್ನು ಹೊಂದಿದಂತೆಯೇ ತೋರುವುದು. ಹಾಗೆಯೇ ನೀನು ಪರಮಾತ್ಮನು
ನಿನ್ನಿಂದ ಸೃಷ್ಟಿಯಾದ (ಉಪಾದಾನ, ಅಧಿಷ್ಠಾನವಾಗಿರುವುದರಿಂದ) ಮತ್ತು
ಕಾರ್ಯ ಆದ ಉಪಕಾರದೇಹಗಳಲ್ಲಿ ಹಾಗೂ ಸೂಕ್ಷ್ಮ ಸ್ಥೂಲವಾದ ವಿರಾಟ್
ಪಂಚಭೂತಗಳಲ್ಲಿಯೂ ಮತ್ತು ಚರಾಚರಜಗತ್ತಿನಲ್ಲಿಯೂ ಉಪಾದಾನ
ಕಾರಣವಾಗಿ ಪ್ರವೇಶಿಸಿ ಆಯಾ ಉಪಾಧಿಗಳಲ್ಲಿ ಉಚ್ಚಾವಚವಾಗಿ
ತರತಮಭಾವದಿಂದ ಪ್ರಕಾಶಿಸುತ್ತೀಯೆ. ಇದು ಪರಮಾತ್ಮಪಕ್ಷದಲ್ಲಿ
ಹೇಗೋ ಹಾಗೆಯೇ ಜೀವಾತ್ಮಪಕ್ಷದಲ್ಲಿ ಅನ್ವಯಿಸಿಕೊಂಡಿರುತ್ತದೆ.
ಜೀವರು ಸ್ವಕೃತ ಧರ್ಮ ಕರ್ಮನಿಮಿತ್ತದಿಂದ ವಿವಿಧ ದೇಹಗಳನ್ನು
ನಿರ್ಮಿಸಿಕೊಂಡು ಆ ಉಪಾಧಿಗಳನ್ನು ಸ್ವಯಂ ಪ್ರವೇಶಿಸಿ, ಉಚ್ಚ ನೀಚ
ಮಧ್ಯಮ ಭಾವದಿಂದ ಪ್ರಕಾಶಿಸುವರು. ಅಂತು ಕಾರ್ಯದಲ್ಲಿ ಆತ್ಮನ
ಪ್ರವೇಶ ಎಂದರೆ ಮುಖ್ಯಾರ್ಥದಲ್ಲಿ ಅಲ್ಲ. ಪ್ರವೇಶಮಾಡಿದಂತೆ ತೋರುವ
ಎಂದರ್ಥ. ಏಕೆಂದರೆ ಆತ್ಮನು ಸರ್ವತ್ರ ಸರ್ವದಾ ವ್ಯಾಪಕನಾಗಿರುವುದ
ರಿಂದ ಹೊಸದಾಗಿ ಪ್ರವೇಶ ಎನ್ನುವುದು ಹೊಂದುವುದಿಲ್ಲ. ಸರ್ವಾಧಿಷ್ಠಾನ

ನಾದ ಆತ್ಮನು ಸರ್ವಕಾರ್ಯಗಳಿಗೂ ಉಪಾದಾನಕಾರಣನಾಗಿರುತ್ತಾನೆ. ಕಾರ್ಯವು ಮಾಯಿಕವಾಗಿರುವುದರಿಂದ ಶುಕ್ತಿರಜತ ಎಂಬ ಕಾರ್ಯದಲ್ಲಿ ಶುಕ್ತಿ ಎಂಬ ಅಧಿಷ್ಠಾನವಿಲ್ಲದೆ ರಜತವಿಕಲ್ಪವುಂಟಾಗುವುದಿಲ್ಲ. ಅದಕ್ಕೆ ರಜ್ಜು ಸರ್ಪ ಎಂಬ ಕಾರ್ಯದಲ್ಲಿ ಹಾವಿನಲ್ಲಿ ಹಗ್ಗವು ಪ್ರವೇಶಿಸುತ್ತದಂತೆ, ಶುಕ್ತಿ ರಜತಕಾರ್ಯದಲ್ಲಿ ಬೆಳ್ಳಿಯಲ್ಲಿ ಚಿಪ್ಪು ಕೂಡಿರುವಂತೆ ಎಂದು ಅರ್ಥವು. ಹೀಗೆ ದೇಹಾದಿಜಡಕಾರ್ಯಗಳಲ್ಲಿ ಆತ್ಮನ ಪ್ರವೇಶ ಎಂದರೆ ಅಲ್ಲಿ ಉಪಲಬ್ಧನಾಗುತ್ತಾನೆಂದು ತಾತ್ಪರ್ಯ. ಹಾಗೆ ಆತ್ಮಕಾರಣಮೂಲಕ ಉತ್ಪನ್ನವಾಗುವ ದೇಹಾದಿಜಗತ್ತು ಆತನ ಪ್ರಕಾಶಕ್ಕೆ ಉಪಾಧಿಸ್ಥಾನವಾಗಿರುತ್ತದೆ. ಎಂದರೆ ಅಲ್ಲಿ ಆತ್ಮನು ಕಾಣಿಸಿಕೊಳ್ಳುತ್ತಾನು. ಇಲ್ಲಿ ಹೇಳಿದ ವಿಚಾರ. ಮತ್ತು ಹೇಗೆಂದರೆ:- ಕಾರ್ಯ ಕಾರಣಾಭಾವವಿರುವೆಡೆಯಲ್ಲೆಲ್ಲಾ ಕಾರಣವು ಸದ್ರೂಪವಾಗಿರುತ್ತದೆ. ಕಾರ್ಯವು ವಿಕಲ್ಪಮಾತ್ರವೇ. ವಿಕಾರವೇ, ಹಾಗು ಮಿಥ್ಯಾರೂಪವೇ ಆಗಿರುತ್ತೆಂಬುದು ದೃಷ್ಟವಾಗಿದೆ. ಇದು ವಿಚಾರದಿಂದ ತಿಳಿದುಬರುವಂತಹದು. ಅಥ ಅತಃ = ಆದ್ದರಿಂದ. ವಿಶೇಷಾನ್ ಅಮೂನ್ = ಮಿಥ್ಯಾರೂಪವಾದ, ಆಗಮಾ ಪಾಯಿಗಳಾದ ಈ ಕಾರ್ಯದೇಹಾದಿಚರಾಚರಜಗತ್ತಿನಲ್ಲಿ, ತವ ಧಾಮ = ಅಧಿಷ್ಠಾನರೂಪ ನಿನ್ನ ಸ್ಥಿತಿ = ತೇಜಃ ಪ್ರಕಾಶವು (ಇರುವಿಕೆ, ತೋರುವಿಕೆ) ಅವಿತಥಂ = ಸತ್ಯವಾಗಿರುವುದಾಗಿದೆ. ಮಿಥ್ಯಾಕಾರ್ಯರೂಪದ ಜಗನ್ನಾಮರೂಪಗಳು ಬಾಧೆಗೆ ವಿಷಯಗಳಾಗಿರುತ್ತವೆ. ಕಾರಣಾಧಿಷ್ಠಾನರೂಪದ ಆತ್ಮನು ಬಾಧೆಗೆ ವಿಷಯನಾಗಿರುವುದಿಲ್ಲ. (ಆತ್ಮನಸ್ತಿರೂಪತ್ವ) ಸದಾ = ನೀನು ಸರ್ವತ್ರ. ಸರ್ವದಾ ಸದ್ರೂಪನಾಗಿರುವಂತಹವನು ಎಂದರೆ ನಿರ್ವಿಶೇಷಸ್ವರೂಪನು. ನಿನ್ನ ಪರಂಧಾಮವು ಏಕರಸಂ = (ಸನ್ಮಾತ್ರವೂ ಚಿನ್ಮಾತ್ರವೂ ಆನಂದಮಯವೂ ಆಗಿರುತ್ತದೆ) ಅಂತಹ ಅನಂತ ಸಚ್ಚಿದಾನಂದಮಾತ್ರವೇ ಆಗಿದೆ.

೧೮

ಅಖಂಡಾನಂದಾನುಭವರೂಪದ
ಪರಮಾರ್ಥವನ್ನು. ವಿರಜೋಧಿಯಃ = ನಿರ್ಮಲವಾದ ತಿಳುವಳಿಕೆಯುಳ್ಳ
ಶಾಂತಾಃ = ಸಕಲ ಬಾಹ್ಯಾಭ್ಯಂತರಗಳಲ್ಲಿ ಆಸಕ್ತಿಯಿಲ್ಲದ ವಿರಕ್ತರಾದ
ಯೋಗಿಗಳು ಭಕ್ತರು ಮತ್ತು ಶ್ರುತಿಗಳು. ಅನ್ವೇಷಯಂತಿ = ವಿಚಾರಮಾಡಿ
ನಿಶ್ಚಯಮಾಡಿಕೊಂಡವರಾಗಿರುತ್ತಾರೆ.

ಈ ವಿಚಾರಕ್ರಮವನ್ನೇ ಮುಂದುವರಿಸಿ ಹೇಳುವುದೇನೆಂದರೆ :-

ಸ್ವಕೃತಪುರೇಷ್ವಮೀಷ್ವಬಹಿರಂತರಸಂವರಣಂ
ತವ ಪುರುಷಂ ವದಂತ್ಯಖಿಲಶಕ್ತಿಧೃತೋಂऽಶಕೃತಂ।
ಇತಿ ನೃಗತಿಂ ವಿವಿಚ್ಯ ಕವಯೋ ನಿಗಮಾವಪನಂ
ಭವತ ಉಪಾಸತೇऽಂಘ್ರಿಮಭವಂ ಭುವಿ ವಿಶ್ವಸಿತಾಃ ॥೨॥

ಹೇ ಭಗವನ್, ಅಮೀಷು ಸ್ವಕೃತಪುರೇಷು = ~~ತಾನೇ ಕಟ್ಟಿಕೊಂಡ~~ ನಿರ್ಮಿಸಿಕೊಂಡ ~~ದೇಹಗಳನ್ನು~~ ತನ್ನ ಕೃತಕರ್ಮಫಲವಾಗಿ(ಪಡೆದುಕೊಂಡ) ದೇಹಗಳಲ್ಲಿ
ನೆಲೆಗೊಂಡು ಕರ್ಮಕರ್ತೃವಾಗಿಯೂ ಫಲಭೋಕ್ತೃವಾಗಿಯೂ ಕಂಡುಬರುವ.
ಪುರುಷಂ = ಜೀವಪುರುಷನನ್ನು. ಅಖಿಲಶಕ್ತಿಧೃತಃ = ಸಕಲಶಕ್ತಿಗಳುಳ್ಳ
ವನಾದ. ತವ = ನಿನ್ನ, ಭಗವಂತನ. ಅಂಶಕೃತಂ = ಅಂಶವೆಂಬಂತೆ, ಮಾಡಲ್ಪ
ಟ್ಟಿರುವಂತೆ ಹೇಳುಯು ಮತ್ತು ಅಬಹಿರಂತಃ ಅಸಂವರಣಂ ವದಂತಿ = ಹೊರಗೆ
ದೇಹ ಕಾರ್ಯೋಪಾಧಿಯಿಂದಲಾಗಲೀ ಒಳಗೆ ಕಾರಣೋಪಾಧಿಯಿಂದಲಾಗಲೀ ಸಂವೃತನಾ-
ಗಲ್ಲವೆಂದು ಹೇಳುತಾರೆ. ಅಂದರೆ ವಸ್ತುವದಲ್ಲ ಕಾರ್ಯೋಪಾಧಿ ಕಾರಣೋಪಾಧಿ
(ಪರಿಚ್ಛಿನ್ನನಲ್ಲ) ಕವಿಗಳು ಎಂದರೆ ತತ್ತ್ವವಿಚಾರಬಲ್ಲವರು ಹೇಳುತ್ತಾರೆ. ಇತಿ ನೃಗತಿಂ
ಹೀಗೆ ವಿವಿಚ್ಯ = ಜೀವಪುರುಷನ ಯಥಾರ್ಥಸ್ವರೂಪವನ್ನು ವಿವೇಚಿಸಿ
ಅರ್ಥಪೂರ್ಣವಾಗಿ ತಿಳಿದುಕೊಂಡು, ಕವಯಃ = (ಜ್ಞಾನಿಗಳು) ತತ್ತ್ವದರ್ಶಿಗಳು

ದೇಹ ಪ್ರಾಪ್ತಿಯಾಗಿರುವಾಗ
ಭುವಿ = ಭೂಲೋಕದಲ್ಲಿ (ಅಂದರೆ ಈ ಭೂಲೋಕಕ್ಕೆ ಬಂದಿರುವಾಗ), ಅಭವಂ = ಸಂಸಾರರಹಿತನನ್ನು, ಸಂಸಾರನಿವರ್ತಕನನ್ನು ಆದ ಭವತಃ ಅಂಘ್ರಿಂ ನಿನ್ನ ಪಾದಕಮಲವನ್ನು, ನಿಗಮಾವಪನಂ = ಶ್ರೇಷ್ಠ ಧೀಪಾತ್ರಗಳಿಗೆ ಬೀಜ ಬಿತ್ತಲು ಪ್ರಶಸ್ತ ಕ್ಷೇತ್ರವೆಂದು, ನಂಬಿ ವಿಶ್ವಸಿತಾಃ = ದೃಢವಿಶ್ವಾಸಭರವಸೆಯುಳ್ಳವರಾಗಿ. ಉಪಾಸತೇ = ಸೇವಿಸಿ ಆರಾಧಿಸುತ್ತಾರೆ. ಅರ್ಚನ ಧ್ಯಾನ ವಂದನಾದಿಗಳಿಂದ ಸೇವಿಸುತ್ತಾರೆ. ಮತ್ತು ಭಕ್ತಿಪೂರ್ವಕವಾಗಿ ಶ್ರವಣ ಮನನ ನಿದಿಧ್ಯಾಸನ ಕ್ರಮದಿಂದ ಭಜಿಸುತ್ತಾರೆ. ಹೀಗೆ ಉಪದೇಶಿಸಿದ ವಿಚಾರಸಾರವೇನೆಂದರೆ ಭಗವಂತನು ಸೇವ್ಯನಾಗಿದ್ದಾನೆ. ಜೀವಪುರುಷನು ಸೇವಕನಾಗಿರುತ್ತಾನೆ. ಹೀಗೆ ಪ್ರಪತ್ತಿಪೂರ್ವಕವಾಗಿ ತತ್ತ್ವ ಪ್ರತಿಪತ್ತಿಯು ಆಗಬೇಕು, ಈಶ್ವರನ ಅನಂತಶಕ್ತಿಗಳಲ್ಲಿ ಕೆಲವೇ ಶಕ್ತ್ಯಂಶಗಳು ಜೀವನಲ್ಲಿ ಕಂಡುಬರುವುದ
ನಿರವಯವವಾದ ಶಕ್ತಿಯಲ್ಲಿ ಅಂಶವೆಂಬುದು ನಾಮಶೇಷ, ನಿಜಪೂರ್ಣಸ್ವರೂಪದ ಶಕ್ತಿ
ರಿಂದ ಜೀವನನ್ನು ಈಶ್ವರಾಂಶನೆನ್ನುತ್ತಾರೆ. ವಾಸ್ತವವಲ್ಲ ಜೀವನು ಈಶ್ವರ ಸ್ವರೂಪವೇ ಬ್ರಹ್ಮಸ್ವರೂಪವೇ ಒಂದೇ ಪೂರ್ಣವಾಗಿರುವುದು. ವ್ಯವಹಾರಾಸಕ್ತಿದಶೆಯಲ್ಲಿ ಜೀವನು ದೇಹಸಂಬಂಧವುಳ್ಳವನೆಂದೂ ಕರ್ತೃಭೋಕ್ತೃ ಅಭಿಮಾನಿಯೆಂದೂ ಪಾಪಲೇಪವುಳ್ಳವನೆಂದೂ ತೋರುವಂತೆ ಈಶ್ವರನು ಅವತಾರವೆತ್ತಿದಾಗ ಅವನಿಗೂ ಕರ್ಮಲೇಪವುಂಟೇ ಎಂಬ ಆಕ್ಷೇಪವೆತ್ತಿಕೊಂಡು ಮುಂದಿನ ಶ್ಲೋಕದಲ್ಲಿ ಉಲ್ಲಿಕ್ಷತಾತೇ ತತ ಉದಗಾತ್, ಅವಿತಥಂ ನಮಃ ಎಂಬ ಮಾತುಗಳಿಂದ ಈಶ್ವರನಿಗೆ ಕರ್ಮಲೇಪ ವಿಲ್ಲೆಂದು ತೋರಿಸಲಾಗಿದೆ. (ನಮೂದಿಸಲಾಗಿದೆ.) ಈ ಶ್ಲೋಕದಲ್ಲಿ ಜೀವನು ವ್ಯವಹಾರಿಕವಾಗಿ ಸಂಸಾರಿಯಂತೆ ಕಾಣುತ್ತಿದ್ದರೂ ವಾಸ್ತವದಲ್ಲಿ ಸಂಸಾರಿಯಲ್ಲ ಎಂಬುದನ್ನು ಅಬಹಿರಂತರಸಂವರಣಂ ಎಂಬ ಮಾತಿನಿಂದ ಬೋಧಿಸಲಾಗಿದೆ. ಈ ನಿರೂಪಣೆಯಿಂದ ಜೀವಸ್ವರೂಪವೇ ಸಂಸಾರಿಯಲ್ಲವೆಂದಾಗ ಈಶ್ವರನು ಸಂಸಾರಿಯಾಗಿರುವುದಿಲ್ಲೆಂದು

ಮತ್ತೆ ಹೇಳಬೇಕೆ। ಆದ್ದರಿಂದಲೇ ಈಶ್ವರನ ಉಪಾಸ್ತಿಯೆಂದೂ ಜೀವನ
ಪ್ರತ್ಯೇಕವಾಗವನ್ನು ಬಿಡದೇ ಇಸಿದೆ
ಉಪಾಸನೆಯೆಂದೂ (ಸಮರ್ಥಿಸಲಾಗಿದೆ) ಐಕ್ಯವನ್ನು ~~ಉಪದೇಶಿಸಿದೆ~~. ಏಕಾತ್ಮವಾದವನ್ನು ಸಮರ್ಥಿಸಲಾ

ತತ್ತ್ವಪ್ರತಿಪತ್ತಿಗೆ ಪ್ರವೃತ್ತಿಯು ಅತ್ಯವಶ್ಯಕ. ಭಕ್ತಿಯು ಭಗವತ್ತತ್ತ್ವಜ್ಞಾನಕ್ಕೆ ಮುಖ್ಯಸಾಧನವೆಂಬುದನ್ನು ಶ್ರುತರ ಅನುಭವಾಚರಣೆ ತಿಳಿಸುವ ಮೂಲಕ ಸ್ತುತಿಸುತ್ತಾರೆ —

ದುರವಗಮಾತ್ಮತತ್ತ್ವನಿಗಮಾಯ ತವಾತ್ತತನೋಃ
ಚರಿತಮಹಾಮೃತಾಬ್ಧಿಪರಿವರ್ತಪರಿಶ್ರಮಣಾಃ ।
ನ ಪರಿಲಷಂತಿ ಕೇಚಿದಪವರ್ಗಮಪೀಶ್ವರ ತೇ
ಚರಣಸರೋಜಹಂಸಕುಲಸಂಗವಿಸೃಷ್ಟಗೃಹಾಃ ॥೮॥

ಹೇ ಈಶ್ವರ = ಎಲೈ ಭಗವಂತನೇ, ದುರವಗಮಾತ್ಮತತ್ತ್ವನಿಗಮಾಯ = ಬಹು ಸೂಕ್ಷ್ಮವಿಷಯವಾದ್ದರಿಂದಲೇ ರಹಸ್ಯವಾದ ಆತ್ಮತತ್ತ್ವಜ್ಞಾನವು ದುರ್ಗಮವಾಗಿರುತ್ತದೆ. ಅಂತಹ ಮಹೋನ್ನತವಸ್ತುವನ್ನು ಜೀವರು ಅರಿತುಕೊಂಡು ಕೃತಾರ್ಥರಾಗಲೆಂದೇ ಕರುಣೆಯಿಂದ ಜ್ಞಾನೋಪದೇಶಮಾಡಲು, ಆತ್ತತನೋಃ = ಅನಂತಕಲ್ಯಾಣಗುಣಪರಿಪೂರ್ಣವಾದ ರಾಮಕೃಷ್ಣಾದ್ಯವತಾರರೂಪಗಳನ್ನು ಮತ್ತು ಅಚಿಂತ್ಯರಚನಾತ್ಮಕವಾದ ಜಗದ್ರೂಪವನ್ನು ಧರಿಸುವ, ತವ = ನಿನ್ನ ಚರಿತಮಹಾಮೃತಾಬ್ಧಿಪರಿವರ್ತಪರಿಶ್ರಮಣಾಃ = ಅವತಾರಕಥೆ ಮತ್ತು ಜಗತ್ಸೃಷ್ಟಿಕಥೆ ಎಂಬ ಅಮೃತಮಹಾಸಮುದ್ರದಲ್ಲಿ ಮಿಂದು, ಆಧ್ಯಾತ್ಮಿಕಾದಿ ರೂಪ ಸಂಸಾರತಾಪವನ್ನು ಕಳೆದುಕೊಂಡು ಶೀತಲಾನಂದವನ್ನು ಪಡೆದವರಾದ, ಕೇಚಿತ್ = (ವಿರಳವಾಗಿ) ಕೆಲವರು ಮಾತ್ರ, ತೇ ಚರಣಸರೋಜಹಂಸಕುಲಸಂಗವಿಸೃಷ್ಟಗೃಹಾಃ = ನಿನ್ನ ಪಾದಕಮಲಸೇವಿಗಳಾದ ಹಂಸಪಕ್ಷಿಯಂತಹ ಪರಮಹಂಸ

ಯತಿಗಳೂ, ಭಕ್ತರೂ, ಸತ್ಸಂಗವನ್ನೇ ಬಯಸಿ ತಮ್ಮ ಹಿಂದಿನ ಕುಲಜ್ಞಾತಿಬಂಧು ಬಾಂಧವರನ್ನು ತ್ಯಜಿಸಿದವರಾಗಿ, ಅಪವರ್ಗಮಪಿ = ಸಿದ್ಧವಾಗಿ ಅನುಗ್ರಹಿಸಿ ಕೊಡುವ ಮೋಕ್ಷವನ್ನು ಕೂಡ, ನ ವಾಂಛಂತಿ = ಬಯಸುವುದಿಲ್ಲ ಸ್ವೀಕರಿಸಲಿಚ್ಛಿಸುವುದಿಲ್ಲ. ಏಕೆಂದರೆ:- ಮೋಕ್ಷದಲ್ಲಿ ದೇಹೇಂದ್ರಿಯಾದಿಗಳಿರುವುದಿಲ್ಲ. ಆ ಭಕ್ತರಿಗೆ ಭಗವತ್ಕಥಾ ಶ್ರವಣಾನಂದವೇ ಹೆಚ್ಚಿನ ಲಾಭವೆಂಬ ಅಭಿಪ್ರಾಯವಿರುತ್ತದೆ. ಮುಕ್ತಿಯಡೆದಾಗ ದೇಹೇಂದ್ರಿಯಗಳಿರುವುದಿಲ್ಲವಾಗಿ ಕಥಾಶ್ರವಣಕ್ಕೆ ಚ್ಯುತಿಯೊದಗುವುದಷ್ಟೆ! ಇದು ನಷ್ಟವೆಂದು ಮಹಾಂತ ಭಕ್ತರ ಮತ. ಆದ್ದರಿಂದ ಭಗವತ್ಪ್ರೀತಿಯೇ ಅಂದರೆ ಆಸಕ್ತಿಯಿಂದ ಭಗವತ್ಕಥಾ ಶ್ರವಣಮಾಡುತ್ತಾ ಭಕ್ತಿರಸವನ್ನನುಭವಿಸುವುದೇ ಪರಮಲಾಭವು ಎಂದು ಉತ್ತರ ತಾತ್ಪರ್ಯ. ಮತ್ತು ಅಜ್ಞರು ಕೂಡ ಭಗವದವತಾರ ಕಥೆಗಳನ್ನು ಭಕ್ತಿಯಿಂದ ಶ್ರವಣಮಾಡಿದರೆ ಅವರಿಗೂ ಭಗವತ್ಪ್ರೀತಿಯುಂಟಾಗಿ ಅದರಿಂದ ಚಿತ್ತಶುದ್ಧಿ ವೈರಾಗ್ಯಪ್ರಾಪ್ತಿ ತತ್ತ್ವಜ್ಞಾನಲಾಭಗಳು ಕ್ರಮವಾಗಿ ಲಭಿಸುವುವು. ಆದ್ದರಿಂದ ಭಕ್ತಿಯೇ ಹೆಚ್ಚಿನ ಸಾಧನವಾಗಿರುತ್ತದೆ.

ಭಕ್ತರಸುಯೋಗವನ್ನು ಅಭಕ್ತರ ದೌಷ್ಟ್ಯವನ್ನು ವರ್ಣಿಸಿ ಸ್ತುತಿಸುತ್ತಾರೆ:-

ತ್ವದನುಪಥಂ ಕುಲಾಯಮಿದಮಾತ್ಮಸುಹೃತ್ಪ್ರಿಯವತ್
ಚರತಿ ತಥೋನ್ಮುಖೇ ತ್ವಯಿ ಹಿತೇ ಪ್ರಿಯ ಆತ್ಮನಿ ಚ ।
ನ ಬತ ರಮಂತ್ಯಹೋ ಅಸದುಪಾಸನಯಾಽಽತ್ಮಹನೋ
ಯದನುಶಯಾ ಭ್ರಮಂತ್ಯುರುಭಯೇ ಕುಶರೀರಭೃತಃ ॥೬॥

ಇದಂ ಕುಲಾಯಂ = ಮಾನವನ ಗೂಡಿನಂತಿರುವ ಈ ದೇಹವು. ಆತ್ಮಸುಹೃತ್ = ಆತ್ಮಮಿತ್ರವು. ಪ್ರಿಯವತ್ = ಬಹುಪ್ರಿಯವು ಆಗಿರುವುದು. ಇದು ಲೋಕದಲ್ಲಿ ಕಂಡಿರುವ ವಿಷಯವಾಗಿದೆ. ತಥಾ ಚ = ಆ ದೇಹದಂತೆಯೇ, ಇನ್ನು ಉತ್ತಮ

ವಾಗಿರುವ ನೀನು ಪ್ರಿಯತಮನಾಗಿರುವೆ. ಏಕೆಂದರೆ:- ಬಂಧುಃ = ಆಶ್ರಿತರ ವರ್ಗಕ್ಕೆ ಯೋಗಕ್ಷೇಮವನ್ನು ಗ್ರಹಿಸುತ್ತಾ ಇರುವ ಮತ್ತು ಪಾಲನಕರ್ತನಾದ ತ್ವಯಿ = ನಿನ್ನಲ್ಲಿ, ನೀನು ಎಂತಹವನೆಂದರೆ:- ಪ್ರಿಯೇ ಹಿತೇ ಆತ್ಮನಿ = ಪ್ರಿಯತಮನೂ, ಹಿತಕಾರಿಯೂ, ಹಾಗು ಸಾಕ್ಷಾತ್ ಆತ್ಮನೇ ಆಗಿರತಕ್ಕವನು. ಇಂತಹ ನಿನ್ನಲ್ಲಿ ರತಿರ್ಯದಿ = (ದೇಹದ) ಪ್ರವರ್ತಿಸಿದರೆ. ಆಗ ಇದು. ತ್ವದನುವಿಧಂ = ನಿನ್ನನ್ನು ಪಡೆಯುವ ದಾರಿಯಲ್ಲಿ ಪ್ರವರ್ತಿಸಿಕೊಂಡಿದೆ ಎನ್ನಬಹುದು. ಆಗ ದೇಹವು ಸ್ವಾಧೀನದಲ್ಲಿದೆ ಎಂದಾಗುವುದು. ಮತ್ತು ಹಾಗಿದ್ದರೆ ಆದೇಹವು ನಿಜವಾಗಿ ಆತ್ಮಸುಹೃತ್ತು ಪ್ರಿಯವತ್ತು ಎಂಬ ಅರ್ಥಕ್ಕೆ ಅನುಗುಣವಾಗಿದೆ ಎಂದು ಹೇಳಬೇಕು. ಇಂದರೆ ಕಾಯೇನ ವಾಚಾ ಮನಸಾ ಭಗವದುಪಾಸನೆಯ ಭಕ್ತಿಯಲ್ಲಿ ತತ್ಪರತೆಯಿಂದಿರುವ ದೇಹವೇ ನಿಜವಾಗಿ ಪ್ರಶಸ್ತವಾದುದು. ಇಲ್ಲಿ ನೀನೇ ಆತ್ಮನು ಎಂದು ಹೇಳುವುದರಿಂದ ಪರಮಾತ್ಮನ ಉಪಾಸನೆಯು ಬಹು ಸುಲಭ. ತನಗೆ ಅತ್ಯಂತ ಸಮೀಪದಲ್ಲಿರುವುದರಿಂದ ಸ್ವಲ್ಪವೂ ಆಯಾಸಪಡಬೇಕಾಗಿಲ್ಲ ಎಂದು ಅಭಿಪ್ರಾಯವಿರುವುದು. ಭಕ್ತನಿಗೆ ಇವನ ದೇಹವು ನಿಜವಾಗಿ, ಆತ್ಮಸುಹೃತ್ ಪ್ರಿಯವತ್ ಚರತಿ = ಆತ್ಮಮಿತ್ರನೂ ಬಹುಪ್ರಿಯನೂ ಆಗಿ ವರ್ತಿಸುತ್ತದೆ. ಇಂದಾಗ ದೇಹದಲ್ಲೇ ಸ್ವಾಭಾವಿಕವಾಗಿರುವ ಪ್ರೀತಿಯು ಭಗವದ್ಭಕ್ತಿಯಿಂದ ಕೂಡಿದ್ದಾಗ ಇದು ಆತ್ಮಸುಹೃತ್ಪ್ರಿಯವತ್ತಾಗುವುದು. ಆದರೆ ಲೋಕದಲ್ಲಿ ಜನರು ತಮ್ಮಲ್ಲಿ ಇರುವ ಹಾಗು ಸುಲಭನೂ ಆದ, ತ್ವಯಿ = ನಿನ್ನಲ್ಲಿ, ನ ರಮಂತಿ = ಪ್ರೀತಿ ಪಡುವುದಿಲ್ಲವಲ್ಲಾ! ಅಹೋ ಬತ = ಅಯ್ಯೋ ವಿಷಾದಕರ. ನಮಗೆ ಭಕ್ತರುಗಳು, ಯಾವಾಗಲು ಒಂದು ಬಗೆಯಿಂದ ಭಾವಿಸಿ ಭಜಿಸುತ್ತಿಲ್ಲವಲ್ಲ!

ಸಾಮಾನ್ಯವಾಗಿ ಅಜ್ಞ ಜನರು. ಅಸದುಪಾಸನಯಾ = ಅನರ್ಥಕರವಾದ ದೇಹ ಇಂದ್ರಿಯ ಪೋಷಣೆಯ ಲಾಲಸೆಯಿಂದ, ಯದಸುತೃಪಃ = ದೇಹಾನುವರ್ತಿಗಳಾದ ಜೀವರು, ಆತ್ಮದುಹಃ = ಆತ್ಮಹತ್ಯೆಯ ಮಹಾಪಾಪವನ್ನು ಮಾಡುತ್ತಿರುವರು. ಕುಶರೀರಭೃತಃ = ಹೀನಜನ್ಮಪಡೆದ ದುರ್ದೇಹಧಾರಿಗಳು, ಇವರು ಉರುಭಯೇ = ಮೇಲಿಂದ ಮೇಲೆ ಭಯಗಳನ್ನೊಡ್ಡುವ ಸಂಸಾರಗಹ್ವರದಲ್ಲಿ. ಭ್ರಮಂತಿ = ಭ್ರಮಿಸಿಕೊಂಡಿರುತ್ತಾರೆ. ಭ್ರಾಂತಿಗೊಳಗಾಗಿರುತ್ತಾರೆ. ಭಕ್ತಿಮಾರ್ಗಬಾಹಿರರು ಕ್ಷುದ್ರಾತ್ಕ್ಷುದ್ರ ಪಾಪಸಂಚಯನ ಮಾಡಿಕೊಳ್ಳುತ್ತಿರುತ್ತಾರೆ. ಭಕ್ತರಿಗೆ ಕ್ಲೇಶವಿಲ್ಲದೇ ಪರಮಪುರುಷಾರ್ಥ ಸಾಧನೆಯಾಗುತ್ತದೆ. ಹೀಗೆ ಭಕ್ತಿಮಾರ್ಗವು ಸುಲಭೋಪಾಯವಾಗಿದೆ. ಆದ್ದರಿಂದ ಮುಮುಕ್ಷುಗಳಿಗೆ ಭಕ್ತಿಯು ಶ್ರೇಷ್ಠ ಸಾಧನ ಎಂದು ಸಮರ್ಥಿತವಾಯಿತು.

ಇನ್ನು ಈಗ ಯಾವುದೇ ಭಾವನೆಯಿಂದಲಾದರು ಸರಿಯೇ ಮನಸ್ಸಿನ ಮನೋಗತಿಯ ಒಂದರ ಸ್ಮರಣಾರೂಪ ವೃತ್ತಿಯು ಭಗವದಭಿಮುಖವಾಗಿದ್ದರೆ ಶ್ರೇಯಃಪ್ರಾಪ್ತಿಯು ನಿಶ್ಚಿತವೆಂದು ನಿರೂಪಿಸುತ್ತಾ ಸ್ತುತಿಸುತ್ತಾರೆ:-

ನಿಭೃತಮರುನ್ಮನೋಕ್ಷದೃಢಯೋಗಯುಜೋ ಹೃದಿ ಯನ್
ಮುನಯ ಉಪಾಸತೇ ತದರಯೋऽಪಿ ಯಯುಃ ಸ್ಮರಣಾತ್ ।
ಸ್ತ್ರಿಯ ಉರಗೇಂದ್ರಭೋಗಭುಜದಂಡವಿಷಕ್ತಧಿಯೋ
ವಯಮಪಿ ತೇ ಸಮಾಃ ಸಮದೃಶೋऽಙ್ಘ್ರಿಸರೋಜಸುಧಾಃ ॥೧೦॥

ಹೇ ಪರಮಾತ್ಮ, ನಿನ್ನ ಸ್ಮರಣೆಯ ಮಹಿಮೆಯನ್ನು ಏನೆಂದು ಕೊಂಡಾಡೋಣ? ಮುನಿಗಳು, ಶತ್ರುಗಳು, ಪ್ರೇಯಸಿಯರಾದ ಗೋಪಿಕಾಸ್ತ್ರೀಯರು ಮತ್ತು ನಾವು ಶ್ರುತಿಗಳು, ಹೀಗೆ ಎಲ್ಲರೂ ನಿನ್ನನ್ನು ಸ್ಮರಿಸತಕ್ಕವರೆ ಆಗಿದ್ದೇವೆ.

ಈ ಶ್ಲೋಕ ಮುನಯಃ = ಋಷಿಗಳು ಹೃದಿ = ತಮ್ಮ ಹೃದಯದಲ್ಲಿ
ನಿಭೃತಮರುನ್ಮನೋಽಕ್ಷದೃಢಯೋಗಯುಜಃ = ಪ್ರಾಣವಾಯು ಬುದ್ಧಿ
ಮನಸ್ಸು ಮತ್ತು ಇಂದ್ರಿಯಗಳನ್ನು ಯೋಗಾಭ್ಯಾಸದಿಂದ ವಶಪಡಿಸಿಕೊಂಡ
ಜಿತೇಂದ್ರಿಯರಾಗಿ, ಯತ್ = ಯಾವ ಪರಂಧಾಮವನ್ನು ಪಡೆಯಲು, ಉಪಾಸತೇ
ಬಹುಶ್ರಮದಿಂದ ಉಪಾಸಿಸುತ್ತಾ ಸ್ಮರಿಸುತ್ತಾರೆಯೋ, ತತ್ = ಅದೇ ಪರಂಧಾಮ
ವನ್ನು, ಅರಯಃ ಅಪಿ = ಸದಾ ಕಾಮ ದ್ವೇಷ ಕ್ರೋಧ ಪರವಶರಾದ (ಅಜಿತೇಂದ್ರಿಯ
ರಾದ) ಅಸುರ ಶತ್ರುಗಳು ಕೂಡ, ಸ್ಮರಣಾತ್ = ದ್ವೇಷ ಬುದ್ಧಿಯಿಂದ ನೆನೆಯುತ್ತ
ನಿನ್ನ ಧ್ಯಾನ ಮಾಡಿ ಕೊನೆಯಲ್ಲಿ (ಸದ್ಗತಿಯನ್ನು) ಯಯುಃ = ಪಡೆದರು.
ಅಂದರೆ ಆಶ್ಚರ್ಯವಲ್ಲವೇ? ನಿಷ್ಕಾಮನೆ ದುಷ್ಕಾಮನೆಗಳಿಗೆ ಪರಸ್ಪರ ವಿರೋಧ
ವಿದ್ದರು ಫಲದಲ್ಲಿ ಮಾತ್ರ ಸಮತೆಯೇ ಉಂಟಾಗುವುದು. ಮತ್ತು ಹಾಗೆಯೇ,
ವಯಂ = ನಾವು ಶ್ರುತಿಗಳು (ಉಪಾಸ್ಯರು) ~~ಬುದ್ಧಿ ಪ್ರಯಾಸದಿಂದ~~ ನಿನ್ನನ್ನು
ಸ್ತುತಿಸುತ್ತಿರುವ ನಾವು ಲಕ್ಷಣಾಲಕ್ಷಣಾಕ್ರಮ, ಅತದ್ವ್ಯಾವೃತ್ತಿ ಕ್ರಮ
ಎಂಬ ಅನೇಕ ಸೂಕ್ಷ್ಮ ಉಪಾಯಗಳಿಂದ ನಿನ್ನನ್ನು (ಅರಿತುಕೊಂಡು) ಸ್ತುತಿಸುತ್ತೇ
ವೆ. ನಮಗೂ ಅದೇ ಗತಿಯು ಲಭಿಸುವುದು. ಮತ್ತು ಉರಗೇಂದ್ರ
ಭೋಗಭುಜ ವಿಷಕ್ತಧಿಯಃ ಸ್ತ್ರಿಯಃ ಅಪಿ = ನಾಗರಾಜನ ಮುದ್ದಾದ
ಮೈಯಂತೆ ಸುಂದರವಾದ ಹಾಗೂ ದೀರ್ಘವಾದ ನಿನ್ನ ಭುಜವನ್ನು ನೋಡಿ
ನಿನಗೆ ಮರುಳಾಗಿ ಪ್ರೀತಿಪರವಶರಾದ ಗೋಪಿಕಾಸ್ತ್ರೀಯರು ಕೂಡ ಪರಂ
ಧಾಮವನ್ನೇ ಪಡೆದರು, ಸಮದೃಶಃ = ಸಮದೃಷ್ಟಿಯ ತೇ = ನಿನಗೆ, ನಾವೆ
ಲ್ಲರೂ, ಸಮಾಃ = ಸಮಭಾವ ಪಾತ್ರರೇ ಆಗಿದ್ದೇವೆ. ಕೇವಲ ನಾವು ಮಾತ್ರವೇ ಅಲ್ಲ
ಅಂಘ್ರಿ ಸರೋಜ ಸುಧಾಃ = ನಿನ್ನ ಪಾದಕಮಲಗಳ ಮಕರಂದಾಸ್ವಾದ ಮಾಡುವ

ಅಂದರೆ ಗಾಢವಾಗಿ ಸ್ಮರಣೆಮಾಡುವವರೆಲ್ಲರೂ—ಭಕ್ತರು, ಶತ್ರುಗಳು ದ್ವೇಷಿಸುವವರು, ಶ್ರುತಿಗಳಾದ ನಮ್ಮಂತಹವರು ಯೋಗಿ ಸಮಾನರು ನಿನಗೆ ಸಮರೇ ಆಗಿರುತ್ತಾರೆ, ಅನುಗ್ರಹಪಾತ್ರರಾಗಿರುತ್ತಾರೆ. ಸರ್ವರಿಗೂ ಸದ್ಗತಿ—ಮೋಕ್ಷ ಎಂಬ ಸಮ ಫಲವನ್ನೇ ನೀಡುತ್ತೀಯೆ. ಈ ರೀತಿಯ ಸಮತ್ವವು ಮತ್ತೆಲ್ಲಿ ಕಾಣಲಾದೀತು?

ಪರಮಾತ್ಮನನ್ನು ಸ್ತುತಿಸುತ್ತಿರುವ ಶ್ರುತಿಗಳೇ ಪರಮಾರ್ಥತತ್ತ್ವವು ದುರ್ಜ್ಞೇಯವೆಂದು ನಿರೂಪಿಸುತ್ತಾ ಭಗವದ್ಭಕ್ತಿಯನ್ನೇ ಸಿದ್ಧೋಪಾಯವೆಂದು ಒಪ್ಪಿ ಈರೀತಿ ಸ್ತುತಿಸುತ್ತಾರೆ:—

ಕ ಇಹ ನು ವೇದ ಬತಾವರಜನ್ಮಲಯೋಽಗ್ರಸರಂ
ಯತ ಉದಗಾದೃಷಿರ್ಯಮನು ದೇವಗಣಾ ಉಭಯೇ।
ತರ್ಹಿ ನ ಸನ್ನ ಚಾಸದುಭಯಂ ನ ಚ ಕಾಲಜವಃ।
ಕಿಮಪಿ ನ ತತ್ರ ಶಾಸ್ತ್ರಮವಕೃಷ್ಯ ಶಯೀತ ಯದಾ ॥೧೧॥

ಹೇ ಪರಮಾತ್ಮನೇ, ಅಗ್ರಸರಂ = ಸೃಷ್ಟಿಗಿಂತಲೂ ಮತ್ತು ಜ್ಞಾನೋತ್ಪತ್ತಿಗಿಂತಲೂ ಮೊದಲೇ ಸಿದ್ಧ ಪರಮಾರ್ಥನಾದ ನಿನ್ನನ್ನು, ಇಹ = ಈ ಪ್ರಪಂಚದಲ್ಲಿ, ಅವರಜನ್ಮಲಯಃ = ಆಧುನಿಕವಾಗಿ ಹುಟ್ಟುವ ಮತ್ತು ನಾಶಹೊಂದುವ, ಕಃ ನು = ಯಾವನು ತಾನೆ ವೇದ = ತಿಳಿದಿದ್ದಾನೆ? ಬತ = ಅಯ್ಯೋ ಅದ್ಭುತ ಅಗಾಧ ರಹಸ್ಯವಿದು. ಅಂದರೆ:— ತತ್ತ್ವಜ್ಞಾನ ಮಾಡಿಕೊಂಡರೆ ತೀರಿತು. ಇನ್ನು ಭಕ್ತಿಯ ಆವಶ್ಯಕತೆಯೇನು ಎಂದು ಕೆಲವರು ಭಾವಿಸಿಕೊಂಡಿರುತ್ತಾರೆ. ಅದು ಸರಿಯಲ್ಲ. ಏಕೆಂದರೆ:— ಭಗವದನುಗ್ರಹವಿಲ್ಲದೆ ಜ್ಞಾನಪ್ರಾಪ್ತಿಯೇ ಆಗುವುದಿಲ್ಲ. ಸೃಷ್ಟಿಪೂರ್ವದಲ್ಲಿ ಜ್ಞಾನಕ್ಕೆ ಬೇಕಾದ ಸಾಧನ ಸಾಮಗ್ರಿಯು ಸಿದ್ಧವಾಗಿರುವುದಿಲ್ಲ. ಏಕೆಂದರೆ:— ಯತಃ = ಯಾವ ಮಹಾನುಭಾವನ ಕಡೆಯಿಂದ, ಋಷಿಃ = ಜ್ಞಾನಸಾಧನವಾದ ವೇದಸಹಿತನಾಗಿ ಸೃಷ್ಟಿಕರ್ತ ಬ್ರಹ್ಮನು

ಗರ್ಭನನು. ಉದಗಾತ್ = ಹುಟ್ಟಿರುತ್ತಾನೆ, ಮತ್ತು ಯಂ ಇನು = ಯಾವ ಆ ದಿನರನ್ನು
ಗರ್ಭನನ್ನನುಸರಿಸಿ ತದನಂತರದಲ್ಲಿ. ಉಭಯೋಃ ದೇವಗಣಾಃ = ಆಧ್ಯಾತ್ಮಿಕ
ಮತ್ತು ಆಧಿದೈವಿಕ ಸಮಸ್ತ ಸೃಷ್ಟಿಗಳು, ಜ್ಞಾನಕರ್ಮೇಂದ್ರಿಯಗಳು ಮತ್ತು
ತದ್ವೃತ್ತಿಗಳು ಉಂಟಾಗಿರುತ್ತವೆ. ಆ ಸೃಷ್ಟಿ ಪೂರ್ವದ ಪರಮಾರ್ಥಕಥೆಯು
ಅರ್ಥವಾಗುವಂತಿಲ್ಲ; ಇನ್ನು ಯದಾ = ಯಾವಾಗ ಎಂದರೆ ಪ್ರತಿಬಿಂಬ ಪ್ರಲಯ ಇತ್ಯಾದಿಗಳಲ್ಲಿ ಅದ್ವೈತದಲ್ಲಿ ಆಗುವುದು
ತರ್ಹಿ = ಆಗ. ಸತ್ ನ = ಕಾರಣರೂಪದ ಸೂಕ್ಷ್ಮವಸ್ತುವು ಇರುವುದಿಲ್ಲ. ಅಸತ್
ಚ ನ = ಕಾರ್ಯರೂಪದ ಸ್ಥೂಲವಸ್ತುವು ಇರುವುದಿಲ್ಲ. ಉಭಯಂ ನ ಚ = ಆಧ್ಯಾ-
ತ್ಮಿಕ ಮತ್ತು ಆಧಿದೈವಿಕವೆಂಬ ವಸ್ತುವ್ಯವಹಾರವು ಇರುವುದಿಲ್ಲ. ಮತ್ತು ನ ಚ
ಕಾಲಜವಃ = ಆ ಸೂಕ್ಷ್ಮ ಮತ್ತು ಸ್ಥೂಲ ವಿಕಾರಗಳಿಗೆ ಅವಕಾಶ ಕೊಡುವ ಪರಿಣಾಮಸ್ವಭಾ-
ವದ ಕಾಲವೂ ಕೂಡ ಇರುವುದಿಲ್ಲ. ಹೀಗೆ ಕಾರ್ಯಕಾರಣಲಯವೇ ಸುಷುಪ್ತಿ
ಎಂಬ ಮಹಾಪ್ರಲಯವು. ತತ್ರ = ಆಸ್ಥಿತಿಯಲ್ಲಿ ಶಾಸ್ತ್ರಂ ಏವ ಜ್ಞಾನಪ್ರದವಾದ = ವೇದಶಾಸ್ತ್ರ
ರಾಶಿಯನ್ನೆಲ್ಲಾ ತನ್ನಲ್ಲಿ (ಆತ್ಮನಲ್ಲಿ) ಅಡಗಿಸಿಕೊಂಡು. ಶಯಾನ = ಮಲಗಿ ಯೋ-
ಗನಿದ್ರಾರೂಢನಾಗಿರುವನೆ. ನೀನು ಕೇವಲ ಸ್ಥಿತಿಯಲ್ಲಿರುವೆ. ತತಃ ಈಮಂತಿ ನ =
ಆದಿಯಲ್ಲು ಮತ್ತು ಅಂತ್ಯದಲ್ಲು
ಆಗ ಏನೊಂದೂ ಇರುವುದೇ ಇಲ್ಲ. ಅದರಿಂದ ತತ್ತ್ವಜ್ಞಾನಕ್ಕೆ ಸಾಧನವಿ-
ಈ ಮಧ್ಯದ ಪ್ರಳಯ ಪ್ರತೀತಿಯು ನಶ್ವರವೆಂದು ಪ್ರಮಾಣಸಹಿತವಾಗಿ ತಿಳಿಯುವುದರಿಂದ
ಲ್ಲದ್ದರಿಂದ ತತ್ತ್ವಜ್ಞಾನವು ಸಿದ್ಧಿಸಲಾರದು. ಸೃಷ್ಟಿಯು ಬರುವುದರಿಂದ
ಹಿಂದೆ ಹೇಳಿದಂತೆ ತ್ವದನುಪಥಂ ಕುಲಾಯಂ ಎಂಬ ಉಪದೇಶವೇ ಮುಖ್ಯ-
ವಾದ ಸಮರ್ಥನೆ ಆಯಿತು. ನಿಃಶ್ರೇಯಸ್ಸಿಗೆ ಭಕ್ತಿಯೇ ಮುಖ್ಯಸಾಧನವು.
ಏಕೆಂದರೆ ಪ್ರಾಣಿಗಳಿಗೂ ತನಗೆ ತಾನೇ ಪ್ರಿಯನೂ ಪ್ರಿಯತಮನೂ ಆಗಿರುವುದು
ಸ್ವಾಭಾವಿಕವಾಗಿರುತ್ತದೆ. ಆ ತನ್ನ ನಿಜಸ್ವರೂಪವೇ ಪರಮಾತ್ಮತತ್ತ್ವವೇ ಆಗಿರುವು-
ದರಿಂದ ಅವನಲ್ಲಿ ಪ್ರೀತಿಯಿಡುವುದು ಭಕ್ತಿ ಮಾಡುವುದು ಸುಲಭವಾದ ಕಾರ್ಯ.
ಇನ್ನು ಮಧ್ಯಕಾಲವಾದ ಸೃಷ್ಟಿಯಾದ ~~ಪ್ರಪಂಚ~~ ಪ್ರತ್ಯಕ್ಷ ಪ್ರಪಂಚದಲ್ಲಿ ಸಮ್ಯಗ್ಜ್ಞಾನವು ಸುಲಭವೇ ಎಂದರೆ

ಸಂಪೂರ್ಣಜ್ಞಾನಕ್ಕೆ ಇದಕ್ಕೆ ಶ್ರವಣ ಸಾಧನಕ್ಕೆ ಗುರುಗಳು ದುರ್ಲಭವೆಂಬುದನ್ನೇ ಮತ್ತೆ ಸಮರ್ಥನೆ ಮಾಡುತ್ತಾ ಸ್ತುತಿಸುತ್ತಾರೆ.

ಜನಿಮಸತಃ ಸತೋ ಮೃತಿಮುತಾತ್ಮನಿ ಯೇ ಚ ಭಿದಾಂ
ವಿಪಣಮೃತಂ ಸ್ಮರಂತ್ಯುಪದಿಶಂತಿ ತ ಆರುಪಿತೈಃ।
ತ್ರಿಗುಣಮಯಃ ಪುಮಾನಿತಿ ಭಿದಾ ಯದಬೋಧಕೃತಾ
ತ್ವಯಿ ನ ತತಃ ಪರತ್ರ ಸ ಭವೇದವಬೋಧರಸೇ ॥೧೨॥

ತತ್ತ್ವಜ್ಞಾನವು ಸುಲಭವಾಗಿರುವುದಿಲ್ಲ, ಏಕೆಂದರೆ:- ವಸ್ತುಪರೀಕ್ಷಕರ ಮತ್ತು ಜ್ಞಾನೋಪದೇಶಕರ ಬುದ್ಧಿಯು ಕೂಡ ಮೋಹಭ್ರಮೆಗಳಿಗೆ ಒಳಗಾಗಿರುವುದು. ಲೋಕದಲ್ಲಿ ವೈಶೇಷಿಕರು ನೈಯ್ಯಾಯಿಕರು ಸಾಂಖ್ಯರು ಪಾತಂಜಲರು ಮತ್ತು ಮೀಮಾಂಸಕರು ದಾರ್ಶನಿಕರೆಂದು ಪ್ರಸಿದ್ಧರಾಗಿದ್ದಾರೆ. ಇವರು ತಾವು ತತ್ತ್ವದರ್ಶನಗಳಿಂದ ಕೂಡ ತತ್ತ್ವವಿಚಾರಗಳನ್ನು ಶಿಷ್ಯರಿಗೆ ಬೋಧಿಸುತ್ತಾರೆ. ಇವರು ಹೇಳುವ ವಿಚಾರ ಹೇಗೆಂದರೆ:- ಯೇ ಅಸತಃ ಜನಿಂ ಸ್ಮರಂತಿ = ವೈಶೇಷಿಕರು ನೈಯ್ಯಾಯಿಕರೆಂಬ ತಾರ್ಕಿಕರು ಹೇಳುತ್ತಾರೆ — ಪೂರ್ವದಲ್ಲಿಲ್ಲದ ಜಗತ್ತು ಮೊದಲಾದ ಕಾರ್ಯಗಳು ಹೊಸದಾಗಿ ಹುಟ್ಟುವುವು. ಮತ್ತು ಸತಃ ಮೃತಿಂ ಸ್ಮರಂತಿ = ಸದ್ರೂಪವಸ್ತುವಿಗೆ ನಾಶವನ್ನು ಹೇಳುತ್ತಾರೆ. ಅಂದರೆ (ಆತ್ಮನಲ್ಲಿ ದುಃಖಾದಿಗಳು ಶಾಶ್ವತವಾಗಿರುತ್ತವೆಂದು ಮೋಕ್ಷದಲ್ಲಿ ಆ ದುಃಖಗಳು ನಾಶಹೊಂದುತ್ತವೆಂದು ಹೇಳುತ್ತಾರೆ. ಯೇ ಆತ್ಮನಿ ಭಿದಾಂ ಸ್ಮರಂತಿ = ಸಾಂಖ್ಯರು ಆತ್ಮನಲ್ಲಿ ಭೇದವನ್ನು ಹೇಳುತ್ತಾರೆ. ಅವರ ಮತದಲ್ಲಿ ಅನಂತ ಆತ್ಮರು. ಇನ್ನು ಪಾತಂಜಲರು ಆತ್ಮಭೇದವನ್ನು ಒಪ್ಪುವರಲ್ಲದೆ ಶಾಶ್ವತವಲ್ಲದ ಜೀವಾತ್ಮ ಮತ್ತು ಪರಮಾತ್ಮ ಎಂಬ ಭೇದವನ್ನು ಹೇಳುತ್ತಾರೆ. ಋತಂ =

ಇನ್ನು ಕೆಲವರು ಯೇ = ಯಾವ ಅನೇಕರು. ವಿಪಶ್ಚಿತಂ ಶ್ರುತಂ ಸ್ಮರಂತಿ = ಜೀವರ ಕರ್ತೃತ್ವ ಭೋಕ್ತೃತ್ವ ವ್ಯವಹಾರವನ್ನು ಸತ್ಯವೆಂದು ಇದು ಶಾಸ್ತ್ರಪ್ರತಿಪಾದಿತವಾಗಿದೆಂದು ಹೇಳುತ್ತಾರೆ. ಸೂಕ್ಷ್ಮವಾಗಿ ವಿಚಾರಮಾಡಿ ನೋಡಿದರೆ, ತೇ = ಅವರೆಲ್ಲರು, ಅಬುದ್ಧಿತ್ವಾ (ಅರಿಯದೆ) ತಪ್ಪು ತಪ್ಪು ಬುದ್ಧಿಯಿಂದ ಕಲ್ಪಿಸಿಕೊಂಡಿದುದನ್ನೇ ಶಾಸ್ತ್ರವು ತಿಳಿಸಿಕೊಂಡುದುದನ್ನೇ, ಉಪದಿಶಂತಿ = ಇನ್ನೊಬ್ಬರಿಗು ಉಪದೇಶಿಸುತ್ತಿರುವರನ್ನು ಬೇಕಾಗಿದೆ. ಯತೇ = ಯಾವ ಕಾರಣದಿಂದ ಪುಮಾನ್ ತ್ರಿಗುಣಮಯ ಇತಿ ಮನುಷ್ಯನು ಎಂದರೆ ಜೀವಾ ಆತ್ಮನು ಗುಣತ್ರಯವುಳ್ಳವನೆಂಬುದು ಮತ್ತು ಭಿದಾ ಇತಿ = (ಜೀವಾತ್ಮ ಪರಮಾತ್ಮರಿಂದ ಬೇರೆ ಭೇದವುಳ್ಳವನೆಂಬುವುದು) ಅಬೋಧಕೃತಾ = ಆತ್ಮಸ್ವರೂಪಾಜ್ಞಾನದಿಂದ ಉಂಟಾದುದಾಗಿದೆ. ಮಿಥ್ಯಾಜ್ಞಾನವಾಗಿದೆ. ತತಃ ಪರತ್ರ = ಮಿಥ್ಯಾಜ್ಞಾನವಿಲ್ಲದ ಅಜ್ಞಾನತಮಸ್ಸಿನಿಂದ ಭಿನ್ನನಾದ ಹಾಗು ತ್ರಿಗುಣಾರಹಿತನಾದ. ಅವಬೋಧರಸೇ = ನಿತ್ಯವಿಜ್ಞಾನಘನೈಕಸ್ವರೂಪದ, ತ್ವಯಿ = ನಿನ್ನಲ್ಲಿ (ಬ್ರಹ್ಮಾತ್ಮನಲ್ಲಿ) ಸಃ ನ ಭವೇತ್ = ಮಾಯೆ ಅವಿದ್ಯೆ, ಅಜ್ಞಾನ, ತಮಸ್ಸು ಎಂಬುದು ಇರುವುದೇ ಇಲ್ಲ. ಹಾಗೆ ಶ್ರುತಿಗಳು ಆತ್ಮನ ಸತ್ಯಸ್ವರೂಪವನ್ನು ಬಣ್ಣಿಸಿ ಸ್ತುತಿಸುತ್ತಾ ತತ್ತ್ವಜ್ಞಾನವಿಚಾರವನ್ನೇ ಪ್ರಸ್ತಾಪಿಸುತ್ತವೆ. ಮಿಥ್ಯಾಜ್ಞಾನವೇ ಮತಭೇದಕ್ಕೂ ಭೇದಕಲ್ಪನೆಗು ಕಾರಣವಾಗಿದೆ. ಮೇಲೆ ಹೇಳಿದ ಮತಗಳೆಲ್ಲವು ತಪ್ಪುತಿಳುವಳಿಕೆಯೇ. ನಿತ್ಯಜ್ಞಾನೈಕಸ್ವರೂಪದ ಅದ್ವೈತಾತ್ಮನಲ್ಲಿ ಮಾಯಾಜ್ಞಾನವೆಂಬ ಗ್ರಹಣೆಯು ಆತ್ಮಸ್ವರೂಪವಿಸ್ಮೃತಿಯಿಂದುಂಟಾದ ಭ್ರಾಂತಿಯೇ ಸರಿ. ಜೀವಾತ್ಮಪುರುಷನ ಜ್ಞಾತೃವಿನ ನಿಜಾತ್ಮನು ಮಾನ್ಯವಲ್ಲ, ಪರಮಾರ್ಥತತ್ತ್ವ ಅಥವಾ ಪರಮಾತ್ಮನು ಎಂಬುದನ್ನು ಭಕ್ತಿ ಜ್ಞಾನ ಮತ್ತು ಶಾಸ್ತ್ರಸಾಧನೆಯಿಂದಲೇ ಕಂಡುಕೊಳ್ಳಬೇಕು.

ವಿಕಾರಕ್ರಮವನ್ನೇ ಮುಂದುವರಿಸುತ್ತಾ ಸ್ತುತಿಸುತ್ತಾರೆ :-

[illegible]

ಸದಿವ ಮನಸ್ತ್ರಿವೃತ್ ತ್ವಯಿ ವಿಭಾತ್ಯಸದಾಮನುಜಾತ್
ಸದಭಿಮೃಶಂತ್ಯಶೇಷಮಿದಮಾತ್ಮತಯಾಽಽತ್ಮವಿದಃ ।
ನಹಿ ವಿಕೃತಿಂ ತ್ಯಜಂತಿ ಕನಕಸ್ಯ ತದಾತ್ಮತಯಾ
ಸ್ವಕೃತಮನುಪ್ರವಿಷ್ಟಮಿದಮಾತ್ಮತಯಾವಸಿತಂ ॥೧೨॥

ತ್ರಿವೃತ್ = ಗುಣತ್ರಯಾತ್ಮಕವಾದ, ಮನಃ = ಮನಸ್ಸೆಂಬ ಕರಣವು. ತ್ವಯಿ = ಸರ್ವಾಧಿಷ್ಠಾನ ~~[illegible]~~ ಚೇತನಾತ್ಮನಾದ ನಿನ್ನಲ್ಲಿ, ಸದಿವ ವಿಭಾತಿ = ನಿಜವಾಗಿ ಸತ್ಯಸ್ವರೂಪವೋ ಎಂಬಂತೆ ತೋರುತ್ತದೆ. ವಾಸ್ತವಿಕವಾಗಿ ಆ ಮನಸ್ಸೆಂಬುದು ಅಸತ್ = ಸತ್ಯಸ್ವರೂಪವಾಗಿರುವುದಲ್ಲ. ಈ ವಿವೇಚನೆಯು ಕೇವಲ ಮನಆದಿ ಕರಣಗಳಿಗೆ ಮಾತ್ರವೇ ಅನ್ವಯಿಸುವುದೆಂದಲ್ಲ. ಆಮನುಜಾತ್ = ಮನಃಪ್ರಧಾನನಾದ ಮನುಷ್ಯನವರೆಗೂ ಅಂದರೆ ಕರ್ತೃಕರ್ಮವೆಂದಾದ ಕಾರಕಗಳೆಲ್ಲವೂ (ಆತ್ಮನಲ್ಲಿ ಆರೋಪಿತಗಳಾಗಿದ್ದು) ಅಸತ್ಪದಾರ್ಥಗಳೇ ಆಗಿರುತ್ತವೆ. ಅವೆಲ್ಲಾ ಅಸ್ವತಂತ್ರವಸ್ತುಗಳು. ಅವಕ್ಕೆ ಸ್ವತಂತ್ರವಾದ ಸತ್ತೆಯೇ-ಸ್ಥಿತಿಯೇ (ಭಾತಿ) ಇರುವುದಿಲ್ಲ. ಆತ್ಮಚೈತನ್ಯಾಧಿಷ್ಠಾನದಲ್ಲಿ ಆರೋಪಿತಗಳಾಗಿದ್ದು (ಅಧ್ಯಸ್ತ) ಅಂದ ತೋರುತ್ತವೆ. ಕನಕದ ಪದಾರ್ಥಗಳು ಸ್ವರ್ಣದೃಷ್ಟಿಯಿಂದ ಸತ್ಯಾಂಶದಲ್ಲಿ ಸತ್ತೆಯನ್ನು ಪಡೆದುಕೊಂಡಿರುತ್ತವಷ್ಟೆ. ಹಾಗೆಯೇ ಜಗತ್ತಿನ ಕರ್ತೃಕರ್ಮಪದಾರ್ಥಗಳೆಲ್ಲವೂ ಆಯಾಯಾ (ಜಾಗ್ರದಾದಿ) ಅವಸ್ಥೆಯಲ್ಲಿ ಪ್ರತೀತಿಕಾಲದಲ್ಲಿ ಆಯಾಯಾ ವ್ಯವಹಾರಪುರುಷದೃಷ್ಟಿಯಿಂದ ಇರತಕ್ಕವುಗಳು, ಅವು ಮಾಯಿಕ ಪದಾರ್ಥಗಳು. ಪಾರಮಾರ್ಥಿಕವಾಗಿ ಇರತಕ್ಕವುಗಳಲ್ಲ. ಹಾಗಾದರೆ ಜ್ಞಾನಿಗಳ ದೃಷ್ಟಿಯಲ್ಲಿ ಪ್ರಪಂಚವು ಇರುವುದಿಲ್ಲವೇ? ಅವರು

ಈ ಪ್ರಪಂಚದಲ್ಲಿ ವ್ಯವಹಾರಮಾಡುತ್ತಿರುವರಲ್ಲ? ಅದು ಹೇಗೆ ಅಂದರೆ:-
ಆತ್ಮವಿದಃ = ತತ್ತ್ವಜ್ಞರು, ಅಶೇಷಂ ಇದಂ = ಜ್ಞಾತೃಸ್ವರೂಪದ ಚೇತನನ್ನು
ನೋಡಿಕೊಂಡು ಈ ಜಗದ್ವರ್ತಿಯ ಸಕಲವನ್ನು. ಆತ್ಮತಯಾ = ಆತ್ಮಮಯ
ವಾಗಿರುವುದರಿಂದಲೇ ಹಾಗಿರುವುದನ್ನರಿತುಕೊಂಡು, ಸರ್ವಭೂತ್ಯಾಂಶಿ =
ಸದ್ವಸ್ತುವನ್ನಾಗಿಯೇ ಅರಿಯುತ್ತಾರೆ. (ಸರ್ವಂ ಖಲ್ವಿದಂ ಬ್ರಹ್ಮ ಎಂದು ಸಾರುತ್ತಾರೆ) ಆತ್ಮನಿಂದ ಭಿನ್ನವಾಗಿ ಇದೆ ಎಂದು
ಅರಿಯುವುದಿಲ್ಲ. ಹೇಳುವುದೂ ಇಲ್ಲ. ಅವರು ಈ ದೃಶ್ಯಪ್ರಪಂಚವನ್ನು
ವರ್ಜಿಸಬೇಕಾದ ಆವಶ್ಯಕತೆಯೂ ಇಲ್ಲ. ಹೇಗೆಂದರೆ:- ಕನಕದ ಮೇಲೆ
ಅಪೇಕ್ಷೆಯುಳ್ಳವರು. ಕನಕಸ್ಯ ವಿಕ್ರಿಯಾಂ = ಬಂಗಾರದ ವಿಕಾರರೂಪದ ಕಟಕ
ಕುಂಡಲ ಮೊದಲಾದವನ್ನು. ನ ಹಿ ತ್ಯಜಂತಿ = ವರ್ಜಿಸುವುದಿಲ್ಲ. ಏಕೆಂದರೆ:-
ತದಾತ್ಮತಯಾ = ಅವು ಬಂಗಾರವೇ ಆಗಿರುವುದರಿಂದ. ಅವನ್ನು ಸಂಗ್ರಹಿಸು
ತ್ತಾರಷ್ಟೆ. ಹಾಗೆಯೇ ಇದಂ ವಿಶ್ವಂ = ಈ ಸಮಸ್ತ ಜಗತ್ತು, ತ್ವತ್ತಃ = ತಮ್ಮ
ಪರಮಾತ್ಮನಿಂದಲೇ ಉಂಟಾದುದಾಗಿದೆ. ಅನುಪ್ರವಿಶ್ಯ ಚ = ಆ ಆತ್ಮನಿಂದ
ಒಳಗೂ ಹೊರಗೂ ತುಂಬಿರುತ್ತದೆ. ಸದ್ರೂಪದಿಂದಲೂ ಚಿದ್ರೂಪದಿಂದಲೂ ಆತ್ಮನ
ಜಗತ್ತಿನಲ್ಲಿ ಪ್ರಕಾಶನಾಗಿರುವನು. ಆತ್ಮತಯಾ = ಆತ್ಮಸ್ವರೂಪದಿಂದಲೇ
ಅವಸಿತಂ = ವಿಶ್ವವಸಾನವಾಗಿದೆ. (ಬ್ರಹ್ಮಸತ್ಯಂ ಜಗನ್ಮಿಥ್ಯಾ ಎಂದು) ವಸ್ತುಸ್ಥಿತಿ ಹೀಗಿರುವುದನ್ನು ಅರಿತ ವಿವೇಕಿಗಳು
ಯಥೋಚಿತವಾಗಿಯೇ ವ್ಯವಹಾರ ಮಾಡುತ್ತಾರೆ. ಅವರ ವ್ಯವಹಾರಕ್ಕೇನೂ
ಚ್ಯುತಿಯುಂಟಾಗುವುದಿಲ್ಲ. ಹೀಗೆಂದು ಸಾರ್ವತ್ರಿಕ ವಿಚಾರ ನಿರೂಪಣೆಯು ಸ್ತೋತ್ರದ

ಈಗ ಪ್ರಾಸಂಗಿಕವಾಗಿ ಬಂದ ತತ್ತ್ವವಿಚಾರವನ್ನು ಇಷ್ಟುಮಟ್ಟಿಗೆ
ವಿರಮಿಸಿ ಈಗ ಪುನಃ ಭಕ್ತಿಸಾಧನವೇ ಪ್ರಧಾನವೆಂಬುದನ್ನು ನಿರೂಪಿಸುತ್ತಾ
ಸ್ತುತಿಸುತ್ತಾರೆ:-

ತವ ಪರಿ ಯೇ ಚರಂತ್ಯಖಿಲಸತ್ತ್ವನಿಕೇತತಯಾ
ತ ಉತ ಪದಾಽಽಕ್ರಮಂತ್ಯವಿಗಣಯ್ಯ ಶಿರೋ ನಿರೃತೇಃ ।
ಪರಿವಯಸೇ ಪಶೂನಿವ ಗಿರಾ ವಿಬುಧಾನಪಿ ತಾನ್
ತ್ವಯಿ ಕೃತಸೌಹೃದಾಃ ಖಲು ಪುನಂತಿ ನ ಯೇ ವಿಮುಖಾಃ ॥೧೪॥

ದೇ ಪರಿಚರ್ಯಾತ್ಮನ, ಯೇ = ಯಾರು ಪರಭಕ್ತರೋ ಅವರು. ಅಖಿಲಸತ್ತ್ವನಿಕೇತತಯಾ = ನೀನೇ ಸಮಸ್ತಭೂತಗಳಿಗೂ ಮೂಲಾಧಾರಭೂತನು, ಭೂತಾವಾಸನು ಆಗಿರುವುದರಿಂದ ಅಂತಿರುವುದನ್ನು ಅರಿತುಕೊಂಡು ಅನುರಾಗಪೂರ್ವಕವಾಗಿ ತವ ಪರಿಚರಂತಿ = ನಿನ್ನ ಸೇವೆಮಾಡುತ್ತಾರೆ, ಅರ್ಚನಭಜನಾದಿಗಳಿಂದ ಉಪಾಸಿಸುತ್ತಾರೆ. ತೇ ಉತ = ಅಂತಹ ಏಕಾಂತಭಕ್ತರು ಮಾತ್ರವೇ, ಅವಿಗಣಯ್ಯ = ಈ ಬಾಹ್ಯಜಗತ್ತಿನ ಬಂಧದ ದಂಗು ಇಲ್ಲದೆ, ಯಾವ ಅಧಿಕಾರಿಪುರುಷರನ್ನಾಗಲೀ ಶಾಸ್ತ್ರಗಳ ವಿಧಿನಿಷೇಧನಿಬಂಧನೆಗಳನ್ನಾಗಲೀ ಲಕ್ಷ್ಯಮಾಡದೆ. ನಿರೃತೇಃ ಶಿರಃ = ಮೃತ್ಯುವಿನ ಶಿರಸ್ಸನ್ನು. ಪದಾ ಆಕ್ರಮಂತಿ = ಕಾಲಿನಿಂದ ಮೆಟ್ಟಿ, ಈ ಜನನಮರಣಪ್ರವಾಹರೂಪದ ಸಂಸಾರದಿಂದ ಮೇಲಕ್ಕೆದ್ದು ಮುಕ್ತರಾಗುತ್ತಾರೆ. ತ್ವಯಿ ಕೃತಸೌಹೃದಾಃ = ನಿನ್ನಲ್ಲಿಯೇ ಪರಮಾನುರಾಗವುಳ್ಳ ಭಕ್ತರು, ಪುನಂತಿ ಖಲು = ಹೃದಯದಲ್ಲಿ ಪಾವನತತ್ತ್ವವುಳ್ಳವರಾದ್ದರಿಂದ ಸ್ವತಃ ಪರಿಶುದ್ಧರಾಗಿರುತ್ತಾರೆ. ಮತ್ತು ಇತರರನ್ನು ಪಾವನಗೊಳಿಸಬಲ್ಲವರಾಗಿರುತ್ತಾರೆ. ಯೇ ವಿಮುಖಾಃ ತೇ ನ = ಯಾರು ಭಗವದ್ವಿಮುಖರಾಗಿದ್ದು ಭಕ್ತರಾಗಿರುವುದಿಲ್ಲವೋ ಅವರು ಯಾರನ್ನೂ ಪರಿಶುದ್ಧಗೊಳಿಸಲಾರರು. ಸ್ವತಃ ಶುದ್ಧರು ಆಗಿರುವುದಿಲ್ಲ. ಅಂತಹ ಜನಗಳ ಪರಿಸ್ಥಿತಿಗಳೇನೆಂದರೆ - ವಿಬುಧಾನಪಿ ತಾನ್ = ಎಷ್ಟೇ ವಿದ್ಯಾವಂತರು ಬುದ್ಧಿವಂತರು ಸಾಕ್ಷಾತ್ ದೇವತಾಪುರುಷರು ಆಗಿದ್ದರೂ, ಅವರನ್ನು. ಪಶೂನ್ ಇವ =

ಈಶ ಪ್ರಾಣಿಗಳನ್ನು ಪೋಷಿಸುವಾಗ, ಗಿರಾ ಪರಿಪಾಲಯಸೇ = ಮಾತಿನಿಂದಲೇ ಕಾಪಾಡುತ್ತೀಯೆ. ಹಗ್ಗದಿಂದ ಕಟ್ಟಿ ಎಳೆಯುವಂತೆ ಎಳೆದಾಡುತ್ತೀಯೆ.

ಶಾಸ್ತ್ರಗಳು ಎಂಬ ಬಂಧನದಲ್ಲಿ ಕಟ್ಟಿಹಾಕಿ

ಅಂದರೆ:- ಭಕ್ತಿಜ್ಞಾನವೈರಾಗ್ಯವಿಲ್ಲದ ಜನರು ತಮ್ಮ ಸಮಾಜ ವ್ಯವಹಾರ ವ್ಯವಸ್ಥಾ ಕಾರಣವಾಗಿ ವೇದಶಾಸ್ತ್ರ ನಿಬಂಧನೆಗಳನ್ನು ಒಪ್ಪಿಕೊಂಡಿರುತ್ತಾರೆ ಆಶ್ರಯಿಸಿಕೊಂಡಿರುತ್ತಾರೆ. ಅವರು ಸಂಬಂಧಿಸಿಕೊಂಡಿರುವ ವೇದಶಾಸ್ತ್ರಗಳು ಪುರುಷಾರ್ಥ ಸಾಧನೆಗೆ ಧರ್ಮಕರ್ಮಗಳೇ ಮುಖ್ಯವೆಂದೂ ಅಗ್ನೀಂದ್ರಾದಿ ದೇವತಾಭೇದಗಳನ್ನು ಬೋಧಿಸುತ್ತವೆಯಾಗಿ ಕರ್ಮಶ್ರದ್ಧೆಯುಳ್ಳ ಅವರು ಕರ್ಮಮಾರ್ಗವನ್ನೇ ಅನುವರ್ತಿಸಿಕೊಂಡಿರುತ್ತಾರೆ. ಹೀಗೆ ನಿರಂತರ ಕರ್ಮಕರ್ತೃಗಳಾಗಿ ಫಲಭೋಕ್ತೃಗಳಾಗಿ ನಿತ್ಯ ಸಂಸಾರವನ್ನೇ ಅನುಭವಿಸಿಕೊಂಡಿರುತ್ತಾರೆ. ವಿಧಿನಿಷೇಧ ನಿಬಂಧನೆಗಳಿಗೆ ಸಿಲುಕಿಕೊಂಡು ಕ್ಲೇಶಪಡುತ್ತಾರೆ.

ಜೀವನ್ಮುಕ್ತ ಜ್ಞಾನರಲ್ಲಿ, ಮೋಕ್ಷ ನಿರ್ವಿಕಾರಭಾವ ಸಂಬಂಧ ವಿರುವ ಹಂಬಲದನ್ನು ಸಮರ್ಥಿಸುತ್ತಾ ಸ್ತುತಿಸುತ್ತಾರೆ.

ತ್ವಮಕರಣಃ ಸ್ವರಾಡಖಿಲಕಾರಕಶಕ್ತಿಧರಃ
ತವ ಬಲಿಮುದ್ವಹಂತಿ ಸಮದಂತ್ಯಜಯಾಽನಿಮಿಷಾಃ ।
ವರ್ಷಭುಜೋಽಖಿಲಕ್ಷಿತಿಪತೇರಿವ ವಿಶ್ವಸೃಜೋ
ವಿದಧತಿ ಯತ್ರ ಯೇ ತ್ವಧಿಕೃತಾ ಭವತಶ್ಚಕಿತಾಃ ॥೧೫॥

ಹೇ ದೇವ, ತ್ವಂ ಅಕರಣಃ = ನೀನು ಮನಸ್ಸು ಅಂತಃಕರಣವಿಲ್ಲದವನು ಮತ್ತು ಚಕ್ಷುರಾದಿ ಇಂದ್ರಿಯಗಳಿಲ್ಲದವನು, ಹಾಗಿದ್ದರೂ ಅಖಿಲಕಾರಕಶಕ್ತಿಧರಃ = ಸಕಲ ಇಂದ್ರಿಯಗಳ ಶಕ್ತಿಗಳುಳ್ಳವನಾಗಿರುತ್ತೀಯೆ. ಅಂದರೆ ಎಲ್ಲಾ ಇಂದ್ರಿಯಗಳನ್ನು ಪ್ರವರ್ತನಗೊಳಿಸುತ್ತೀಯೆ. ಏಕೆಂದರೆ, ಸ್ವರಾಟ್ = ನೀನು ಸ್ವಯಂ ಪ್ರಕಾಶನು

ಸರ್ವಸ್ವತಂತ್ರ ಚೇತನ, ಸಾರ್ವಭೌಮನಾಗಿದ್ದೀಯೆ. ಸ್ವತಸ್ಸಿದ್ಧ ಜ್ಞಾನಶಕ್ತಿಯುಳ್ಳ ಸರ್ವಜ್ಞನಿಗೆ ವಿಷಯವನ್ನು ಗ್ರಹಿಸಲು ಇಂದ್ರಿಯ ಸಾಪೇಕ್ಷೆಯಿರುವದಿಲ್ಲವಷ್ಟೆ! ಸರ್ವಸ್ವತಂತ್ರನೂ ಸರ್ವಜ್ಞನೂ ಸರ್ವಶಕ್ತನೂ ಆಗಿರುವುದರಿಂದಲೇ ನೀನು ನಿತ್ಯನೆಂದು ಸಮರ್ಥಿಸಿದಂತಾಯಿತು. ಸೂರ್ಯನಿಗೆ ಬೆಳಗಿಸಬೇಕಾದರೆ ಮತ್ತೊಂದು ದೀಪದ ಅಪೇಕ್ಷೆಯಿರುವದಿಲ್ಲವಷ್ಟೆ! ಈಶ್ವರನು ಸರ್ವಸಾಕ್ಷಿಯಾಗಿರುವದರಿಂದ ಎಲ್ಲವನ್ನು ಒಳಗಿಂದಾಗಲೇ ಅರಿಯುತ್ತಾನೆ. ಪ್ರಾಣಿಗಳ ಮನ ಬುದ್ಧಿ ಸಕಲ ಕಾರಣಗಳಿಗೂ ಜ್ಞಾನಸಾಧನಗಳಿಗೂ ಮೂಲಚಾಲಕನಾಗಿ ಆತ್ಮನ ಚೈತನ್ಯವನ್ನು ಪ್ರದಾನಮಾಡುತ್ತಿರುವವನು. ಆದ್ದರಿಂದಲೇ ಆತ್ಮನು ಮಹಾಸ್ವಾಮಿಯಾಗಿದ್ದಾನೆ. ಅಂತೆಯೇ, ಅನಿಮಿಷಾಃ = ಅಗ್ನೀಂದ್ರಾದಿ ದೇವತೆಗಳು, ವಿಶ್ವಸೃಜಃ ಅಪಿ = ಪ್ರಜೇಶ್ವರಾದ ಬ್ರಹ್ಮ ರುದ್ರ ಪ್ರಜಾಪತಿಗಳು ಕೂಡ, ಅಜಯಾ = ಅವಿದ್ಯಾಮಾಯಾಯುಕ್ತರಾಗಿರುವುದರಿಂದಲೂ. ತವ ಬಲಿಂ ಉದ್ವಹಂತಿ = ನಿನಗೆ ಪೂಜಾದಿ ಕೈಂಕರ್ಯವನ್ನು ಸಲ್ಲಿಸುತ್ತಾರೆ. ಸಮದಂತಿ ಚ = ಮನುಷ್ಯರಿಂದ ಕೊಡಲ್ಪಟ್ಟ ಹವ್ಯಕವ್ಯಗಳನ್ನು ತಾವೂ ಭಕ್ಷಿಸುತ್ತಾರೆ. ವರ್ಷಭುಜಃ = ಒಂದೊಂದು ರಾಜ್ಯಭಾಗಕ್ಕೆ ಅಧಿಪತಿಗಳಾದ ರಾಜರು, ಅಖಿಲಕ್ಷಿತಿಪತೇಃ ಇವ = ಸಾರ್ವಭೌಮ ಮಹಾರಾಜನಿಗೆ ಕಪ್ಪಕಾಣಿಕೆಗಳನ್ನು ಕೊಡುತ್ತಾ ಸೇವಿಸುವಂತೆಯೇ ಇದು. ಭವತಃ ಚಕಿತಾಃ = ಸದಾಕಾಲದಲ್ಲು ನಿನಗೆ ಹೆದರಿಕೊಂಡು, ಯತ್ರ ತು = ಯಾವಯಾವ ಧರ್ಮಕರ್ಮ ಸ್ಥಾನ-ಅಧಿಕಾರಗಳಲ್ಲಿ ಯೇ = ಯಾರು ಯಾರು ಅಧಿಕೃತಾಃ = ನಿಯುಕ್ತರಾಗಿರುತ್ತಾರೆಯೋ ಅವರು, ವಿದಧತಿ = ಆಯಾಯಾ ಕರ್ತವ್ಯ ಕರ್ಮಗಳನ್ನು ನಡೆಸುತ್ತಾ ನಿನ್ನನ್ನು ಸೇವಿಸುತ್ತಾರೆ. ಇದರಿಂದ ಜೀವರು ಸೇವಕರಾಗಿರತಕ್ಕವರೆ ಎಂದು ನಿರೂಪಿಸಿದಂತಾಯಿತು.

ಹೀಗೆ ಭಕ್ತಿಪೂರ್ವಕದ ಸೇವ್ಯಸೇವಕ ಭಾವವನ್ನು ವಿವರಿಸಿ ಕಾಗ ಪಾನ: ಪ್ರತಿಪತ್ತಿ ವಿಚಾರವನ್ನೂ (ಪ್ರತಿಪಾದಿಸುತ್ತಾ) ಸ್ತುತಿಸುತ್ತಾರೆ:-

ಸ್ಥಿರಚರ-ಜಾತಯಃ ಸ್ಯುರಜಯೋತ್ಥನಿಮಿತ್ತಯುಜೋ
ವಿಹರ ಉದೀಕ್ಷಯಾ ಯದಿ ಪರಸ್ಯ ವಿಮುಕ್ತ ತತಃ।
ನಹಿ ಪರಮಸ್ಯ ಕಶ್ಚಿದಪರೋ ನ ಪರಶ್ಚ ಭವೇತ್
ವಿಯತ ಇವಾಪದಸ್ಯ ತವ ಶೂನ್ಯತುಲಾಂ ದಧತಃ ॥೧೬॥

ಮೇಲಿನ ಶ್ಲೋಕದ ನಿರೂಪಣೆಯ ಪ್ರಕಾರ ಮನಬುದ್ಧಿಕರಣಗಳ ಪ್ರವರ್ತಕನು ಈಶ್ವರನು. ಕರಣಾಪರತಂತ್ರರಾದ ಜೀವರು ಈಶ್ವರನನ್ನು ಭಜಿಸುತ್ತಾರೆ. ಎಂದಿದೆ. ಈಶ್ವರನು ಸೇವ್ಯನಾಗಿದ್ದಾನೆಂಬುದಕ್ಕೆ ಇಚ್ಛೆಮಾತ್ರವೇ ಕಾರಣವಲ್ಲ. ಜೀವಾದಿ ಜಗತ್ತು ಈಶ್ವರನಿಂ ಉತ್ಪನ್ನವಾಗಿರುವುದರಿಂದಲು ಕಾರಣಕ್ಕೆ ಕಾರ್ಯವು ಅಧೀನವಾಗಿರುವಂತೆ ಜೀವರು ಈಶ್ವರನಿಗೆ ಅಧೀನರಾಗಿರುತ್ತಾರೆ. ಸ್ವತಂತ್ರರಾಗಿರುವುದಿಲ್ಲ ಎಂದು ನಿರೂಪಿಸುತ್ತಾರೆ. ಹೇ ವಿಮುಕ್ತ= ನಿತ್ಯಮುಕ್ತನಾದ ಸ್ವಾಮಿಯೇ, ಅಜಯಾ ಯದಿ ವಿಹರಃ =ಯಾವಾಗ ಅವಿದ್ಯೆಯಾ ಎಂಬ ಪ್ರಕೃತಿಯೊಡನೆ (ಸಂಬಂಧವಿರುವಂತೆ) ಲೀಲಾವಿಹಾರವು ಇರುವುದೋ ಆಗ, ತತಃ ಪರಸ್ಯ = ಮೋಹಾವಿದ್ಯೆಗಳಿಂದ ದೂರರಾಗಿರು ತವ ಉದೀಕ್ಷಯಾ =(ಸಾಕ್ಷಿಯಾದ) ನಿನ್ನ ವೀಕ್ಷಣದಿಂದ. ಉತ್ಥನಿಮಿತ್ತಯುಜಃ ಪೂರ್ವಕರ್ಮಗಳ ಉದ್ಬೋಧನೆಯುಳ್ಳ, ಸ್ಥಿರಚರಜಾತಯಃ ಸ್ಯುಃ = ಸ್ಥಿರ ಚರಾತ್ಮಕವಾದ ಹಾಗು ಪ್ರಪಂಚದ ಉತ್ಪತ್ತಿಯು ಆಗುವುದು. ಎಂದರೆ ಮಾಯಾರಹಿತನಾದ ಕೂಟಸ್ಥಸಾಕ್ಷಿಯು ಅಮೋಘವೀರ್ಯನಾಗಿರುವುದರಿಂದಲೇ ಆ ಮಹಿಮೆಯಿಂದ ಸಮಸ್ತ ಸಾಕ್ಷ್ಯ-ದೃಶ್ಯರಾಶಿಯ ಉತ್ಪತ್ತಿಯುಂಟಾಗುವುದು. ಸ್ವಪ್ನದಲ್ಲಿ ಈ ಅನುಭವವಿರುತ್ತದೆ. ಯಥಾರ್ಥವಸ್ತುವಿಲ್ಲದಿದ್ದರೂ ಚಿತ್ರವಿಚಿತ್ರ ವಸ್ತುಗಳ ದರ್ಶನವಾಗುವುದು. ಸ್ವಪ್ನದ್ರಷ್ಟೃವಿಗೆ ನಿದ್ರಾತಮಸ್ಸಿಗೂ ಕನಸಿನ ವಸ್ತುಗಳಿಗೂ ಯಾವ ಸಂಬಂಧವೂ ಉಂಟಾಗಿರುವುದಿಲ್ಲ. ಬುದ್ಧಿಯದು ನಿದ್ರಾವಸ್ಥೆ.

ಸಾಕ್ಷಿಗೆ ಸಂಬಂಧಿಸಿದುದಲ್ಲ. ಹಾಗೆಯೇ ಸಾಕ್ಷಿಯೊಡನೆ ಮಾಯೋಪಾಧಿಗಳು ಸ್ಪರ್ಶಿಸಿಕೊಂಡು
ದುವುದಲ್ಲ. ದೃಕ್ಕು ಮತ್ತು ದೃಶ್ಯಗಳು ಯಾವಾಗಲೂ ಬೇರೆ ಬೇರೆ ತಾನೆ. ಸಾಕ್ಷಿಯು ಅಸಂಗ
ನಾಗಿಯೇ ಇರುತ್ತಾನೆ. ಅವನ ದೃಷ್ಟಿ ಪ್ರಭಾವದಿಂದ ಜೀವರ ವ್ಯಾವಹಾರಿಕಗಳ ಉ
ದ್ಬೋಧನೆ ಮತ್ತು ದೇಹಾದಿ ಪ್ರಪಂಚ ಕಾರ್ಯಗಳ ಉತ್ಪತ್ತಿ ಎಂದದ್ದರಿಂದ ಪರಮಾತ್ಮನಲ್ಲಿ
ಯಾವ ವಿಕಾರವೈಷಮ್ಯಗಳೂ ಉಂಟಾಗುವುದಿಲ್ಲೆಂದು ತಿಳಿಯಬೇಕು.

ವಿಯದಿವ = ಆಕಾಶದಂತೆ. ಸರ್ವತೋಽಂಬರತಃ = ಸರ್ವದೇಶದ
ಕಾಲೋಪಾಧಿಯುಳ್ಳ. ಅನಘಸ್ಯ = ಅಮಾರ್ಗಸ್ವರೂಪನಾದ (ದಯನ್ನು ಮಾಡ್ಯಾನಸ್ವಾಗೇ ಅರಿಯದನಾದ) ಅರಿದರ್ಶ್ಯ = ಅರಿಯ ಕಾರಣರಹಿತನ
ಅತ್ಯಂತ ಶ್ರೇಷ್ಠನು ಆದ, ತವ = ನಿನಗೆ, ನ ಶತ್ರುರಸ್ತಿ = ಶತ್ರುವು ಯಾರೂ ಇಲ್ಲ,
ಸ್ವೀಕರಿಸಿಕೊಳ್ಳುವುದಿಲ್ಲ. ಕಾರ್ಯವಾದುದೆಂಬುದು ಇರುವುದಿಲ್ಲ. ಪರಸ್ಯ ನ ಭವೇತ್ =
ಪರಕೀಯನೆಂಬುದು ಇಲ್ಲ. ಶತ್ರುವು ಇರುವುದಿಲ್ಲ. ಕಾರಣವೆಂಬುದು ಏನೂ ಇರು
ವುದಿಲ್ಲ. ಸರ್ವರಿಗೂ ಸರ್ವದಾ ಸಮವಾಗಿರುವುದೇ ನಿನ್ನ ಸ್ವಭಾವವಾಗಿರುತ್ತದೆ.
ಅದ್ವೈತಂ ಪೂರ್ವ ಕಾರಣವೆಂಬುವುದರುವುದಿಲ್ಲ. ಅದ್ವೈತನಿಗೆ (ಪರಮೇಶನಿಗೆ) ಉತ್ತರ ಕಾರ್ಯವಾ
ವುದೂ ಸತ್ಯವಾಗಿರುವುದಿಲ್ಲ. (ಇವರಿಂದ ಜಗತ್ತು ಮಿಥ್ಯಾ ಎಂದು ಬೋಧಿಸಲಾಗಿದೆ.) ಹೀಗೆ ಅದ್ವೈತ ಪ್ರತಿಪತ್ತಿ ವಿಚಾರವನ್ನು ಪ್ರತಿಪಾದಿ
ಸುತ್ತಾ ಸ್ತುತಿಸಿದ್ದಾರೆ.

ಸ್ತುವರೇಗಿನ ವಿಚಾರದಿಂದ ತಿಳಿದುದೇನೆಂದರೆ - ಅವಿದ್ಯೋಪಾಧಿಯುಳ್ಳ
ಜೀವರು (ಪರಮಾತ್ಮನಿಂದ ಬೇರೆಯಾಗಿರುವಂತೆ) ಬದ್ಧರೆನಿಸಿಕೊಂಡಿರುತ್ತಾರೆ. ಅವರು ಕರ್ಮಾಧೀನರಾಗಿ ಸಂಸಾರವನ್ನನುಭ
ವಿಸುತ್ತಾ ಕರ್ಮಫಲವನ್ನು ಭುಂಜಿಸುತ್ತಾರೆ ಎಂದರ್ಥವಾಯಿತು. ಈಗ ಪೂರ್ವಪಕ್ಷಿಯು
ಕೇಳುತ್ತಾನೆ:- ಅವಿದ್ಯೆಯು ಮತ್ತು ಜೀವಾತ್ಮನನ್ನೂ ಒಂದೇ ಒಂದು ಆಗಿದ್ದ ಪಕ್ಷ
ದಲ್ಲಿ ಒಬ್ಬನು ಮುಕ್ತನಾದರೆ ಸರ್ವರಿಗೂ ಮೋಕ್ಷವಾಗಬೇಕಾಗುವುದು. ಅವಿದ್ಯೆ
ಬೇರೆ ಬೇರೆ. ನಾನಾ ಅವಿದ್ಯೆ ಎಂದರೆ ಆಗ ಆ ಪಕ್ಷದಲ್ಲಿ ಜೀವನಿಗೆ ಒಂದು

ಅವಿದ್ಯೆ ನಾಶವಾದರೂ ಜೀವ ಅವಿದ್ಯೆಯ ಸಂಬಂಧ ತಪ್ಪದೇ ಇರುವುದರಿಂದ ಯಾರಿಗೂ ಮೋಕ್ಷವೇ ಸಿಗುವುದಿಲ್ಲವಾಗುವುದು. ಹೀಗೆ ಶಂಕೆಯಿರುವುದರಿಂದ ವಸ್ತುತಃ ಆತ್ಮನಲ್ಲಿ ಭೇದ ಹೇಳಬಾರದು. ಅನೇಕ ಆತ್ಮರಿರುತ್ತಾರೆ. ಇವರೆಲ್ಲರೂ ನಿತ್ಯರೇ, ಸರ್ವವ್ಯಾಪಕರೇ ಎಂದು ಒಪ್ಪಬೇಕೆಂದು ಕೆಲವು ವಾದಿಗಳು ಹೇಳುತ್ತಾರೆ. ಆದರೆ ಈ ಮತವು ಸರಿಯಲ್ಲ. ಆತ್ಮನಿಗೆ ಅವಿದ್ಯಾಸಂಬಂಧವು ವಾಸ್ತವವಾಗಿರುವುದಿಲ್ಲ. ಅದು ಭ್ರಾಂತಿಯಿಂದ ಕಲ್ಪಿತವಾಗಿರುತ್ತದೆ. ಆ ಭ್ರಾಂತಿಯನ್ನು ಯಾರು ವಿಚಾರದಿಂದ ಕಳೆದುಕೊಂಡಿರುತ್ತಾರೋ ಅವರು ಮುಕ್ತರು. ಯಾರು ವಿಚಾರವಿಲ್ಲದೇ ಭ್ರಾಂತಿಯಿಂದಲೇ ಇರುತ್ತಾರೋ ಅವರು ಅಮುಕ್ತರು ಎಂಬ ವ್ಯವಸ್ಥೆಯಿರುವುದರಿಂದ ಎಲ್ಲವೂ ಸಮಂಜಸವಾಗಿರುತ್ತದೆ. ಈಶ್ವರನಲ್ಲಿ ನಿತ್ಯಜ್ಞಾನವೇ ಇದ್ದು ಅವಿದ್ಯಾಸಂಬಂಧವೇ ಇರುವುದಿಲ್ಲವಾದ್ದರಿಂದ ಅವನು ನಿತ್ಯಮುಕ್ತನೇ ಇರುತ್ತಾನೆ. ಮತ್ತು ವೇದಸಿದ್ಧಾಂತದಲ್ಲಿ ಅದ್ವೈತವೇ ಪ್ರಸಿದ್ಧವಾಗಿದೆ. ಅಲ್ಲದೇ ಮೇಲೆ ಹೇಳಿದ ಮತವು ಶ್ರುತಿಯ ಅಂತರ್ಯಾಮಿಬ್ರಾಹ್ಮಣಕ್ಕೆ ವಿರುದ್ಧವಾಗಿರುವುದರಿಂದಲೂ ಅಂಗೀಕಾರಾರ್ಹವಾಗಿಲ್ಲ. ಈ ಅಂಶವನ್ನು ವಿವರಿಸುತ್ತ ಸ್ತುತಿಸುವುದೇನೆಂದರೆ:-

ಅಪರಿಮಿತಾ ಧ್ರುವಾಸ್ತನುಭೃತೋ ಯದಿ ಸರ್ವಗತಾಃ
ತರ್ಹಿ ನ ಶಾಸ್ಯತೇತಿ ನಿಯಮೋ ಧ್ರುವ ನೇತರಥಾ।
ಅಜನಿ ಚ ಯನ್ಮಯಂ ತದವಿಮುಚ್ಯ ನಿಯಂತೃ ಭವೇತ್
ಸಮಮನುಜಾನತಾಂ ಯದಮತಂ ಮತದುಷ್ಟತಯಾ ॥೧೨॥

ಇಲ್ಲಿ ಅರ್ಧಶ್ಲೋಕದಿಂದ ಮೇಲೆ ಹೇಳಿದ ಪೂರ್ವಪಕ್ಷಿಗಳ ಮತಕ್ಕೆ ವಿರೋಧವನ್ನು ತೋರಿಸುತ್ತಾನೆ. ಅಂತರ್ಯಾಮಿ ಬ್ರಾಹ್ಮಣಭಾಗದಲ್ಲಿ ಹೇಳಿರುವುದೇನೆಂದರೆ:- ಏಕವಾದ ಚೇತನಾತ್ಮನು ಅವಿಕಾರಿಯಾಗಿಯೇ ಸರ್ವದಲ್ಲೂ ಸಮಪೂರ್ಣನಾಗಿ ಇದ್ದುಕೊಂಡು ಎಲ್ಲವನ್ನೂ

ತಾನು ಅರಿಯುತ್ತಾ ಎಂದೂ ತಾನು ಅರಿಯಲ್ಪಡದೆ ಇರುವನು, ಎಂಬುದರಿಂದ ಅನೇಕಾತ್ಮರು ಎಂಬ ಕಲ್ಪನೆಯು ವೇದಕ್ಕೆ ವಿರುದ್ಧವೆಂದಾಯಿತು. ಇನ್ನು ಈ ಶ್ಲೋಕದಲ್ಲಿಯೂ ಅದನ್ನೇ ಹೇಳಿದೆ. ಅರ್ಥ - ತನುಭೃತಃ = ಶರೀರಿಗಳಾದ ಜೀವರು, ಅಪರಿಮಿತಾಃ = ಪರಿಚ್ಛಿನ್ನರಲ್ಲದೆ ಅನಂತಸಂಖ್ಯೆಯುಳ್ಳವರಾಗಿದ್ದು, ಸರ್ವಗತಾಃ = ಅವರೆಲ್ಲರು ಸರ್ವವ್ಯಾಪಕರಾಗಿಯೂ ಇದ್ದು, ಧ್ರುವಾಃ ಯದಿ = ಅವರು ನಿತ್ಯರಾಗಿಯೂ ಇರುತ್ತಾರೆಂದರೆ. ತರ್ಹಿ = ಆಗ, ಶಾಸ್ಯತಾ ಇತಿ ನ = ಅವರು ನಿನ್ನಿಂದ (ಈಶ್ವರನಿಂದ) ನಿಯಮ್ಯರು (ಆಳಲ್ಪಡುವವರು) ಎಂಬುದು ಸಂಭವಿಸುವುದಿಲ್ಲ, ನಿಯಮಃ ಇತಿ ಚ ನ = ನೀನು (ಈಶ್ವರನು) ಅವರಿಗೆ ನಿಯಾಮಕನು (ಪ್ರಭುವು) ಎಂಬುದೂ ಸಂಭವಿಸುವುದಿಲ್ಲ. ಏಕೆಂದರೆ:- ನೀನೂ ಜೀವರೂ ಸಮವೆಂದಾಗುವುದರಿಂದ ನಿಯಮ್ಯನಿಯಾಮಕಭಾವವಿರಲಾರದು. ನ ಇತರಥಾ = ಹಾಗೆ ಸಮತ್ವವಿಲ್ಲವೆಂದಾದರೆ ನಿಯಮ್ಯನಿಯಾಮಕಭಾವ ಸಂಭವಿಸುವುದು, (ಅಂಗಭಾವವನ್ನೇ ಹೇಳುವಂತೆ ಕಂಡರೂ) ವೇದವು ಹೇಳುವ ನಿಯಮ್ಯನಿಯಾಮಕಭಾವದ ಪರಿ ಹೇಗೆಂದರೆ:- ಯನ್ಮಯಂ ಅಜನಿ = ಯಾವ ವಿಕಾರವು ಯಾವ ಉಪಾದಾನಕಾರಣದಿಂದ ಉಂಟಾಗಿರುವುದೋ, ತತ್ ಅವಿಮುಚ್ಯ = ಆ ಉಪಾದಾನವಸ್ತುವು ತನ್ನ ಸ್ವರೂಪವನ್ನು ಬಿಡದೆಯೇ ಕಾಯ್ದರೆ, ನಿಯಂತೃ ಭವೇತ್ = ಕಾರ್ಯಕ್ಕೆ ನಿಯಾಮಕವಾಗಿರುವುದು, ಮತ್ತು ಸಮಂ = ಅದು ಸಮವೇ ಆಗಿರುವುದು ಸಮವಾಗಿಯೇ ತುಂಬಿ ಅನುವರ್ತಿಸಿಕೊಂಡಿರುವುದು, ವಿಕಾರಿಯಾಗಿರುವುದಿಲ್ಲ. ಮಣ್ಣು ಮಡಿಕೆಯಂಥ ಕಾರ್ಯಕ್ಕೆ ಉಪಾದಾನವಾಗಿದ್ದು ನಿಯಾಮಕವಾಗಿರುತ್ತದೆ. ಇದಕ್ಕೆ ಮಾತ್ರವೇ ದೃಷ್ಟಾಂತ. ಏಕೆಂದರೆ ಮಣ್ಣು ಕಾರ್ಯವಾದಾಗ ಅನುವರ್ತಿಸಿಕೊಂಡಿದ್ದರೂ ವಿಕಾರಗೊಂಡಿರುತ್ತದೆ. ಪರಮಾತ್ಮನು ಚರಾಚರ ಜಗತ್ತಾಗಿ ಉದ್ಭವಿಸಿದಾಗ ಅವನಲ್ಲಿ ವಿಕಾರವೇನೂ ಉಂಟಾಗುವುದಿಲ್ಲ. ಅದನ್ನೇ ಅವಿಮುಚ್ಯ ಎಂಬ ಶಬ್ದದಿಂದ ಹೇಳಿದೆ, ಘಟಾಕಾಶಕ್ಕೆ ಮಹಾಕಾಶವು ನಿಯಾಮಕವಾಗಿರುತ್ತದೆ. ಎಂಬುದನ್ನು ಇಲ್ಲಿ ಗ್ರಹಿಸಬೇಕು. ಘಟಾಕಾಶವುಂಟಾದಾಗ ಮಹಾಕಾಶದಲ್ಲಿ ವಿಕಾರವೇನೂ ಉಂಟಾಗುವುದಿಲ್ಲ.

ಜಗತ್ತಿಗೆ ಪರಮಾತ್ಮನು ಕಾರಣನು, ನಿಯಂತೃವು ಆಗಿದ್ದು ಅವಿಕಾರಿಯಾಗಿರುತ್ತಾನೆ ಎಂದಾಗ ಜೀವ ಎಂಬ ಆತ್ಮಕಾಂಶರೂಪ ಕಾರ್ಯ ಎನ್ನುವುದೂ ಜಗತ್ಕಾರ್ಯ ಎಂಬುದೂ ಪ್ರಶ್ನೆಯಾಗಬೇಕಷ್ಟೆ. ಅಂದರೆ ಮಾಯೆಯಿಂದ ಜಗತ್ಕಾರ್ಯ. ಪ್ರತಿಬಿಂಬವು ಬಿಂಬದ ಕಾರ್ಯ ಎಂಬಂತೆ. ಅಥವಾ ದಾರದಲ್ಲಿ ಸರ್ಪೋತ್ಪತ್ತಿ ಎಂದಂತೆ ಜೀವಾಜೀವೋತ್ಪತ್ತಿಯು ವಿವರ್ತಕಾರ್ಯ ಎಂದು ಗ್ರಹಿಸಬೇಕು. ಕಾರಣವು ಸತ್ಯವಸ್ತುವಾಗಿರುತ್ತದೆ. ಅವಿದ್ಯಾಮಾಯಾ ಭ್ರಾಂತಿಯಿಂದ ಕಾರ್ಯವು ಸದ್ರೂಪವೆನಿಸಿ ತೋರುತ್ತದೆ. ಹೀಗೆ ಕಾರಣವೆಂದರೆ ಕಂಡುಕೊಳ್ಳಬೇಕಾದ ಯಾವ ವಸ್ತುವುಂಟೋ ಅದು ಸತ್ಯವಾಗಿರುವ ಪರಮಾತ್ಮನಾಗಿರುತ್ತಾನೆ. ಇಲ್ಲಿ ಯಾವುದು ಅದು ಎಂದು ಪ್ರತ್ಯಯವಾಗಿ ಏಕೆ ಹೇಳುತ್ತಿಲ್ಲ? ಇವನೇ ಪರಮಾತ್ಮನು ಎಂದು ನೇರವಾಗಿಯೇ ಏಕೆ ಹೇಳುತ್ತಿಲ್ಲ? ಅಂದರೆ:- ಯತ್ ಅವಿಜಾನತಾಂ ಅಮತಂ = ಯಾವ ಪರಮಾತ್ಮನನ್ನು ನಾನು ತಿಳಿದುಕೊಂಡಿದ್ದೇನೆ - ಹೇಳುತ್ತಾನೆ ಎಂದು ಯಾರು ಹೇಳುವರೋ ಅವರಿಗೆ ತಿಳಿದಿರುವುದಿಲ್ಲ - ಅವರು ಪರಮಾತ್ಮನನ್ನು ಅರಿತವರಲ್ಲ. ಮತ್ತು ಅಮತದೃಶ್ಯತಯಾ = ತಿಳಿಯಲ್ಪಟ್ಟ ಸಮಸ್ತ ವಸ್ತು ವಿಷಯಗಳು ದೋಷಗ್ರಸ್ತವು ಅಂದರೆ ಅನೃತ ಜಡದು! ಜಡಾತ್ಮಕ ಆಗಿರುವುದರಿಂದ ಪರಮಾತ್ಮನನ್ನು ನೇರವಾಗಿ ಹೇಳಲಾಗುವುದಿಲ್ಲ. ಏಕೆಂದರೆ:- ತಿಳಿಯುವಾತನ ಮತ್ತು ಹೇಳುವಾತನ ಪ್ರತ್ಯಗಾತ್ಮಸ್ವರೂಪನೇ ನಿಜವಾಗಿ ಪರಮಾತ್ಮನಾಗಿರುವುದರಿಂದ ಆ ಸಮರ್ಥ ಆತ್ಮನು ಯಾತಿಗೂ ಜ್ಞಾನಕ್ಕೂ ವಿಷಯನಾಗಿರುವುದಿಲ್ಲ. ಹೀಗೆ ಅಯೋತಿಕಕ್ಕೆ ಬಾಧೆಯನ್ನು ಹೇಳಿದೆ. ಆದ್ದರಿಂದಲೇ ಬಾಧೆಗೆ ವಿಷಯನಾಗದೆ ಉಳಿದುಕೊಳ್ಳುವ ಪರಮಾತ್ಮನನ್ನು ಇಲ್ಲಿ ಧ್ರುವ ಎಂದು ಸಂಬೋಧಿಸಿದೆ. ಧ್ರುವ ಎಂದರೆ:- ಅಪವಾದಕ್ಕೆ ಅವಿಭಾಗನಾದ ನಿಶ್ಚಲ ನಿರ್ವಿಕಾರಿ ವಸ್ತುಧರ್ಮವು.

ಹೀಗೆ ವಿಚಾರಕ್ರಮದಿಂದ ಸೋಪಾಧಿಕವಾದ ಜೀವರ ಮತ್ತು ಜಗತ್ತಿನ ಸೃಷ್ಟಿಯು ಮಾಯಿಕ ಎಂದಾಯಿತು. ಇದನ್ನೇ ಸಮರ್ಥಿಸುತ್ತ ವಿಚಾರಕ್ರಮವನ್ನೇ ಮುಂದುವರಿಸಿ ಸ್ತುತಿಸುತ್ತಾರೆ:-

ನ ಘಟತ ಉದ್ಭವಃ ಪ್ರಕೃತಿಪೂರುಷಯೋರಜಯೋಃ
ಉಭಯಯುಜಾ ಭವಂತ್ಯಸುಭೃತೋ ಜಲಬುದ್ಬುದವತ್।
ತ್ವಯಿ ತ ಇಮೇ ತತೋ ವಿವಿಧನಾಮಗುಣೈಃ ಪರಮೇ
ಸರಿತ ಇವಾರ್ಣವೇ ಮಧುನಿ ನಿಲಿಲ್ಯುರಶೇಷರಸಾಃ ॥೧೮॥

ಅಜಯೋಃ ಪ್ರಕೃತಿಪೂರುಷಯೋಃ = ಪ್ರಕೃತಿ ಎಂದರೆ ಈಶ್ವರಪ್ರಕೃತಿ = ನಾಮರೂಪ ಬೀಜವಾದ ಮಾಯೆ. ಜೀವಪ್ರಕೃತಿ = ಎಂದರೆ ಅವಿದ್ಯೆಯಾಗಿದೆ. ಈ ಅವಿದ್ಯಾಮಾಯೆಗಳನ್ನು ಏಕರೂಪವಾಗಿ ~~ಭಾವಿಸಿದೆ~~ ಪ್ರಕೃತಿ ಎಂದಿರುವರು. ಪುರುಷನೇ ಪೂರುಷನು ಎಂದರೆ ಚೈತನ್ಯಸ್ವಭಾವದ ಚೇತನಾತ್ಮ ಎಂದರ್ಥ. ಈ ಪ್ರಕೃತಿಪುರುಷರಿಬ್ಬರು ಅಜರು ಎಂದರೆ ಹೊಸದಾಗಿ ಹುಟ್ಟುವವರಲ್ಲ. ಹೀಗೆ ಎಂದೆಂದೂ ಹುಟ್ಟದೆ ಇರುವ, ಉಭಯಯೋಃ = ಎರಡು ಪ್ರಕೃತಿಪುರುಷರ. ಉದ್ಭವಃ = ಹುಟ್ಟುವದೆಂಬುದು. ನ ಘಟತೇ = ಸಂಭವಿಸುವುದಿಲ್ಲ. ಹಾಗಾದರೆ ಈ ಜೀವರು ಹೇಗೆ ಕಂಡುಬರುವುದೆಂದರೆ:- ಜಲಬುದ್ಬುದವತ್ = ನೀರಿನಗುಳ್ಳೆಯಂತೆ. ಅಸುಭೃತಃ = ಪ್ರಾಣಧಾರಿಗಳಾದ ಜೀವರು. ಉಭಯಯುಜಃ = ಪ್ರಕೃತಿಪುರುಷರಿಬ್ಬರ ಸಂಯೋಗವುಳ್ಳವರಾಗಿಯೇ, ಭವಂತಿ = ಆಗುತ್ತಾರೆ. ಸೃಷ್ಟಿಕ್ರಮದ ಪ್ರಕಾರ ಇವರು ವಾಸ್ತವವಾಗಿ ಹುಟ್ಟಿದವರಲ್ಲ, ಮಾಯಿಕವಾಗಿ ಹುಟ್ಟುವರು ಸ್ವಪ್ನದಂತೆ ಉದ್ಭವಿಸುತ್ತವೆ ಎಂದಾಗ ನಿದ್ದೆಯಲ್ಲಿನ ಕನಸು ಬಿಂಬದಿಂದ ಪ್ರತಿಬಿಂಬ, ಹಗ್ಗದಲ್ಲಿ ಹಾವು ಹುಟ್ಟಿದಂತೆ ಎಂದು ಅರ್ಥಮಾಡಿಕೊಳ್ಳಬೇಕು. ಮತ್ತು ಇಲ್ಲಿ ಜಲಬುದ್ಬುದವತ್ ಎಂಬ ದೃಷ್ಟಾಂತದಿಂದ ತಿಳಿಯುವುದೇನೆಂದರೆ:- ಗುಳ್ಳೆಗೆ ನೀರು ಉಪಾದಾನಕಾರಣವು. ಗುಳ್ಳೆಯು ನೀರಿನ
ಜೀವವ್ಯವಹಾರದ ಪ್ರಕಾರ ~~[illegible]~~ ಹುಟ್ಟಿದೆ
ವ್ಯವಹಾರಕ್ಕಾಗಿ

ಕಾರಣಾತ್ ; ಪ್ರಕೃತ ಜಗತ್ತು ಜೀವರು ಉಂಟಾಗಿರುವಲ್ಲಿ ಪರಮಾತ್ಮನೇ ಉಪಾದಾನಕಾರಣವು,
ಪ್ರಕೃತಿಯು ನಿಮಿತ್ತಕಾರಣವು. ಪ್ರಕೃತಿಯ ಉದ್ಭವವು ಮಾಯಿಕವಾಗಿದ್ದರೂ
ಇದು ಪರಿಣಾಮಸ್ವಭಾವವುಳ್ಳದ್ದಾಗಿರುತ್ತದೆ. ಹಾಗೆ ಉದ್ಭವಿಸಿದ ಕಾರ್ಯವು
ಮಾಯಿಕವಾಗಿರುವುದರಿಂದ ಗ್ರಹಣೆಯಾಗುವಾಗ ಕಾರ್ಯಕಾರಣಭಾವವು ಸ್ಪಷ್ಟ
ವಾಗಿಯೇ ತಿಳಿಯುತ್ತದೆ. ಅಂದರೆ :- ಪ್ರಕೃತಿಯೇ ಉಪಾದಾನ, ಚೇತನನು ನಿಮಿತ್ತ
ಎಂದು ಗ್ರಹಣೆಯಾಗುತ್ತದೆ. ಇಂತಾಗ ಪ್ರಕೃತಿಪರಿಣಾಮರೂಪದ ಶರೀರ-ದೇಹದ
ಉತ್ಪತ್ತಿಯೇ ಜೀವಾತ್ಮರ ಉದ್ಭವವು ವಾಸ್ತವವಲ್ಲ ಜೀವರ ಉದ್ಭವವೇ ಆಗುವ
ದಲ್ಲ ಎಂದು ತಿಳಿಯಬೇಕು. ಹಾಗೆ ಉದ್ಭವವಾಗುವಾಗ ಜೀವಸ್ವರೂಪದಲ್ಲಿ ಯಾವ
ವಿಕಾರ-ಪರಿಣಾಮವು ಉಂಟಾಗುವುದಿಲ್ಲ. ಇದು ಅನನ್ಯವಲ್ಲವೇ
ಎಂಬ ಮಾತನ್ನೂ ತಿಳಿಸಿದೆ, ಎರಡನೆ ಶ್ರುತಿಯು ಹೇಳುವಂತೆ ಪ್ರಕೃತಿಯ ರಕ್ಷರ
ಅಭೇದಾಧ್ಯಾಸದಿಂದ ಶರೀರಗಳು-ಜೀವರು ಉಂಟಾಗಿರುತ್ತಾರೆ (ಅವಿದ್ಯಾ ಮಾಯಾ,
ಮೂಲಕವಾಗಿ ಎಂಬುದನ್ನು ಮರೆಯಬಾರದು) ಹಾಗೆ ಹುಟ್ಟುವಾಗ ಜೀವರ ಪರ-
ಮಾತ್ಮಸ್ವರೂಪದಲ್ಲಿ ಇರುವಂತೆ ಲಯವಾಗುವಾಗಲು ಉಪಾಧಿಗಳೇ ಲಯವಾಗುವುದು.
ಹಾಗೆಂಬುದನ್ನು ಶ್ರುತಿಪ್ರಮಾಣದಿಂದಲೇ ತೋರಿಸುತ್ತಾರೆ. ತತಃ = ಅನಂತರ ಅಂತ್ಯಕಾಲ
ದಲ್ಲಿ; ತೇ ಸರ್ವೇ = ಆ ಕಾರ್ಯೋಪಾಧಿಗಳು, ತತ್ಸಂಬಂಧ ಜೀವಾತ್ಮರು, ಹಾಗೆ, ಪರಮೇ
ತ್ವಯಿ = ನಿರತಿಶಯನಾದ ನಿರುಪಾಧಿಕನಾದ ನಿನ್ನಲ್ಲಿ ಪರಮಾತ್ಮನಲ್ಲಿ. ವಿವಿಧನಾಮಗುಣೈಃಸಹ
ಮೊದಲಿನ ವ್ಯವಹಾರದ ನಾನಾ ನಾಮರೂಪಗಳೊಂದಿಗೆ. ಮಧುನಿ = ಜೇನುರಸದಲ್ಲಿ,
ಅಶೇಷರಸಾಃ = ಬೇರೆಬೇರೆ ಹೂಗಳ ಸಾರರಸಗಳು ಒಂದೇರಸವಾಗುವಂತೆ.
(ಇದು ಸುಷುಪ್ತಿ ಎಂಬ ಲಯಕ್ಕೆ ದೃಷ್ಟಾಂತ. ಜೇನಿನಲ್ಲಿ ಸಕಲಕುಸುಮರಸಗಳು
ವಿಶೇಷರೂಪದಿಂದ ತೋರದಿದ್ದರೂ ಸಾಮಾನ್ಯರಸರೂಪದಿಂದಿರುವುವು) ಹಾಗೆ ಮುಕ್ತಿ

ಎಂಬ ಲಯವನ್ನು ಉಪಾಧಿಗೆ ಕಾರಣವಾದ ಅವಿದ್ಯೆಯು ಲಯವಾಗುವುದರಿಂದ ಅರ್ಣವೇ = ಸಮುದ್ರದಲ್ಲಿ. ಸ್ಥಿತಃ; ಇವ = ಸಮನ್ವಿನಂಗಳಂತೆ ನಾಮರೂಪಗಳನ್ನು ಬಿಟ್ಟ ಪರಮಾತ್ಮನಲ್ಲ - ನಿನ್ನಲ್ಲಿಯೇ. ನಿಲಿಲ್ಯುಃ = ಸೇರಿಕೊಂಡು ಇರುತ್ತಾರೆ. ಈಗ ಜಗತ್ತು ಮತ್ತು ಜೀವಾತ್ಮನು ಸಾಮಾನ್ಯರೂಪದಿಂದಲಾಗಲೀ ವಿಶೇಷರೂಪದಿಂದಲಾಗಲೀ ಪ್ರತ್ಯೇಕವಾಗಿ ತೋರುವುದಿಲ್ಲ. ಈರೀತಿ ಸೂಕ್ಷ್ಮವಾಗಿರುವಂತೆ ಸ್ತುತಿಸುತ್ತಾರೆ.

ಈಗ ಪ್ರತಿಪತ್ತಿ ಎಂಬ ವಿಚಾರಕ್ರಮವನ್ನು ಅವಿದ್ಯಾಮಾಯಾ ಎಂಬ ಪ್ರಮೇಯವು ತೋರಿಕೆ ಸೇರಿಕೊಂಡಿರುವುದರಿಂದ ತತ್ತ್ವಬೋಧವು ಕಠಿಣವಾಗಿರುವುದರಿಂದ ಈಗ ಆ ವಿಚಾರಕ್ರಮದಂತೆ ಕಠಿಣವಿಲ್ಲದ ಸುಲಭೋಪಾಯವಾದ ಪ್ರಪತ್ತಿ ಎಂಬ ಭಕ್ತಿಸಾಧನವನ್ನೇ ಅನುಸರಿಸುವುದು ಶ್ರೇಯಸ್ಕರವೆಂದು ತಿಳಿಸುತ್ತಾ ಸ್ತುತಿಸುತ್ತಾರೆ:-

ನೃಷು ತವ ಮಾಯಯಾ ಭ್ರಮಮಮೀಷ್ವವಗತ್ಯ ಭೃಶಂ
ತ್ವಯಿ ಸುಧಿಯೋಽಭವೇ ದಧತಿ ಭಾವಮನುಪ್ರಭವಮ್ ।
ಕಥಮನುವರ್ತತಾಂ ಭವಭಯಂ ತವ ಯದ್ಭ್ರುಕುಟಿಃ
ಸೃಜತಿ ಮುಹುಸ್ತ್ರಿಣೇಮಿರಭವಚ್ಛರಣೇಷು ಭಯಂ ॥ ೧೯ ॥

ಅಮೀಷು ನೃಷು = ಸಾಮಾನ್ಯವಾಗಿ ವಿಷಯಭೋಗಾಸಕ್ತಿಯುಳ್ಳವರಾದ ಈ ಮನುಷ್ಯರಲ್ಲಿ ತವ ಮಾಯಯಾ = ನಿನ್ನ ಮಾಯಾಪ್ರಭಾವದಿಂದ, ಭೃಶಂ = ಪದೇ ಪದೇ ಹೆಚ್ಚಾಗಿ. ಭ್ರಮಂ = ವಿಶೇಷ ಭ್ರಾಂತಿಯನ್ನು. ಅವಗತ್ಯ = ಪರೀಕ್ಷೆಯಿಂದ ತಿಳಿದುಕೊಂಡ. ಸುಧಿಯಃ = ಮೇಧಾವಿಗಳಾದ ಭಕ್ತಯೋಗಿಗಳು, ಅನುಪ್ರಭವಂ = ಪ್ರತಿಯೊಂದು ಜನ್ಮದಲ್ಲಿಯೂ, ಅಭವೇ ತ್ವಯಿ = ಸಂಸಾರವಿಲ್ಲದ ಸಂಸಾರಶತ್ರುವಾದ ನಿನ್ನಲ್ಲಿ. ಭಾವಂ ದಧತಿ = ಭಕ್ತಿಮಾಡುತ್ತಾರೆ. ಭಕ್ತಿಭಾವನೆನ್ನೇ ತಾಳಿಕೊಂಡಿರುತ್ತಾರೆ. ಅಂತಹ ಭಗವದ್ಭಕ್ತರನ್ನು. ಭವಭಯಂ = ಈ ಸಂಸಾರಭಯವು

ಕಥಂ ಅನುವರ್ತತಾಂ = ಹೇಗೆತಾನೆ ಬೆನ್ನುಹತ್ತುವುದು? ಬೆನ್ನುಹತ್ತುವುದಿಲ್ಲ. ಅಂತಹ ಭಕ್ತರನ್ನು ಸಂಸಾರತಾಪವು ಪೀಡಿಸುವುದಿಲ್ಲ. ಅತ = ಏಕೆಂದರೆ - ತವ ಭ್ರುಕುಟಿಃ = ನಿನ್ನ ಘೋರ ಹುಬ್ಬಿನ ರೂಪದ. ತ್ರಿನೇಮಿಃ = ಹಗಲು ರಾತ್ರಿ ಮತ್ತು ಸಂಧ್ಯಾಕಾಲವೆಂಬ ಅಥವಾ ಗ್ರೀಷ್ಮಕಾಲ ವರ್ಷಕಾಲ ಮತ್ತು ಹಿಮಕಾಲ ಎಂಬ ಮೂರು ವಿಭಾಗಗಳಿಂದ ಕೂಡಿದ ಕಾಲಚಕ್ರವು. ಅಭವಚ್ಛರಣೇಷು = ನಿನ್ನನ್ನಾಶ್ರಯಿಸದ ಅಭಕ್ತಜನರ ವಿಷಯದಲ್ಲಿ ಭ್ರಮತಿ ಮುಹುಃ = ಪದೇ ಪದೇ ಭಯಂ = ವ್ಯಾಧಿ ಜರಾ ಮರಣಾದಿ ಭಯವನ್ನು. ಸೃಜತಿ = ಉಂಟುಮಾಡುವುದು. ಭಗವದ್ಭಕ್ತರು ಕಾಲಚಕ್ರದ ಭಯವಿಲ್ಲದೇ ಅಂದರೆ ಮರಣಾಭಯವು ಇಲ್ಲದೇ ನಿರ್ಭಯರಾಗಿರುತ್ತಾರೆ. ಎಂದು ತಾತ್ಪರ್ಯವು.

ಇಲ್ಲಿಯವರೆಗೆ ನಿರೂಪಿಸಿದ ಭಕ್ತಿ ಜ್ಞಾನ ವೈರಾಗ್ಯವೆಂಬ ಭಾಗವತ ಧರ್ಮೋಪದೇಶವನ್ನು ಯಾರು ಅನುವರ್ತಿಸಿಕೊಂಡಿರುವುದಿಲ್ಲವೋ ಹಾಗೂ ದೇವನನ್ನೂ ಮತ್ತು ಗುರುವನ್ನೂ ಆಶ್ರಯಿಸಿ ಭಕ್ತಿಮಾಡುವುದಿಲ್ಲವೋ ಅಂತಹ ಕ್ಷುದ್ರರ ದುಃಸ್ಥಿತಿಯನ್ನು ಹೇಳುತ್ತಾ ಸ್ತುತಿಸುತ್ತಾರೆ :-

ವಿಜಿತಹೃಷೀಕವಾಯುಭಿರದಾಂತಮನಸ್ತುರಗಂ
ಯ ಇಹ ಯತಂತಿ ಯಂತುಮತಿಲೋಲಮುಪಾಯಖಿದಃ ।
ವ್ಯಸನಶತಾನ್ವಿತಾಃ ಸಮವಹಾಯ ಗುರೋಶ್ಚರಣಂ
ವಣಿಜ ಇವಾಜ ಸಂತ್ಯಕೃತಕರ್ಣಧರಾ ಜಲಧೌ ॥೨೦॥

ಅಜ = ಜನ್ಮಾದಿ ವಿಕಾರಗಳಿಲ್ಲದ ಎಲೈ ಪ್ರಭುವೇ, ಇಹ = ಈ ಮಿಥ್ಯಾಸಂಸಾರದಲ್ಲಿ. ಯೇ = ಶ್ರೇಯಸ್ಸಾಧನೆ ಮಾಡಬೇಕೆಂದು ಯತ್ನಿಸುವ ಕೆಲವರು. ವಿಜಿತಹೃಷೀಕವಾಯುಭಿಃ = ಯೋಗಾಭ್ಯಾಸಮಾಡುವ ಮೂಲಕ ಪ್ರಾಣ

ವಾಯುಗಳನ್ನು ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳನ್ನು ಗೆದ್ದುಕೊಳ್ಳುವ ಪ್ರಯತ್ನದಿಂದ. ಅತಿಲೋಲಂ ಅದಾನ್ತಮನಸ್ತುರಗಂ = ಅತ್ಯಂತ ಚಂಚಲವಾದ ಹಾಗೂ ವಶಪಡಿಸಿಕೊಳ್ಳಲು ಅಸಾಧ್ಯವಾದ ಮನಸ್ಸೆಂಬ ಕುದುರೆಯನ್ನು. ಯತಂ = ಬಿಗಿಹಿಡಿದು ತನ್ನ ಹತೋಟಿಯಲ್ಲಿಟ್ಟುಕೊಳ್ಳಲು. ಯತಂತಿ = ಶ್ರಮಪಡುತ್ತಾರೆಯೋ, ಅವರು, ಉಪಾಯಹೀನಾಃ = ಆ ಪ್ರಯತ್ನ ಮಾಡುವಾಗ ಉಪಾಯ ಗೊತ್ತಾಗದೆ ಕೇವಲ ಕ್ಲೇಶಗಳಿಗೆ ಬಲಿಯಾಗುವರೆನ್ನಬೇಕು. ಏಕೆಂದರೆ:- ಭಕ್ತಿ ಜ್ಞಾನ ವೈರಾಗ್ಯವೆಂಬ ಸುಲಭೋಪಾಯವನ್ನರಿಯದೆ ಸುಮ್ಮನೆ ಆಯಾಸಪಟ್ಟು ಕೊಳ್ಳುವವರಾಗುತ್ತಾರೆ. ಅವರು ನಿಜವಾಗಿ ಮನಸ್ಸನ್ನು ವಶಗೊಳಿಸಿಕೊಳ್ಳಲಾರರು. ಇಂದ್ರಿಯಗಳನ್ನು ಗೆದ್ದುಕೊಳ್ಳಲಾರರು. ಗುರೋಃ = ವಿದ್ಯಾಗುರುವೂ ಮತ್ತು ಜಗದ್ಗುರುವಾದ ನಿನ್ನ. ಶರಣಂ = ಪಾದಪದ್ಮಾಶ್ರಯವನ್ನು. ವಿಹಾಯ = ತ್ಯಜಿಸಿ, ಅವರು. ವ್ಯಸನಶತಾನ್ವಿತಾಃ = ನೂರಾರು ಸಂಕಷ್ಟಗಳಿಗೆ ಒಳಗಾಗಿ, ಜಲಧೌ = ಸಮುದ್ರದಲ್ಲಿ. ಅಕೃತಕರ್ಣಧಾರಾಃ = ದೋಣಿಯ ಪ್ರಯಾಣ ಮಾಡುವಾಗ ಕುಶಲನಾದ ಅಂಬಿಗನನ್ನಿಟ್ಟುಕೊಳ್ಳದ, ವಣಿಜಃ ಇವ ಸಂತಿ = ಸಮುದ್ರವ್ಯಾಪಾರಿಗಳಂತೆ ಇರುತ್ತಾರೆನ್ನಬೇಕು. ತಾತ್ಪರ್ಯವೇನೆಂದರೆ:- ನಾವಿಕನಿಲ್ಲದ ದೋಣಿಗಳನ್ನೇರಿ ಸಮುದ್ರ ಪ್ರಯಾಣ ಮಾಡುವವರು ಅಲ್ಲಿ ಸಂಭವಿಸುವ ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿ ಆಗ ತಪ್ಪದೆ ದೋಣಿಯೊಡನೆ ತಾವೂ ಆಪತ್ತಿಗೊಳಗಾಗುವರು. ಹಾಗೆಯೇ ಗುರುಸೇವೆ ಶುಶ್ರೂಷೆ ಮಾಡದ ಮತ್ತು ಭಗವದ್ಭಜನೆಯನ್ನು ಮಾಡದ ಮನುಷ್ಯರು ಸಂಸಾರಸಮುದ್ರದಲ್ಲಿ ಪದೇ ಪದೇ ಕ್ಲೇಶಗಳಿಗೆ ಸಿಕ್ಕಿಕೊಂಡು ನರಳುತ್ತಾರೆ.

ಈಗ ಭಗವತ್ಪಾದರ ಕೃತಾರ್ಥತೆಯನ್ನು ಇತರರ ದಾಕ್ಷ್ಯವನ್ನು ತೋರಿಸುತ್ತಾ ಸ್ತುತಿಸುತ್ತಾರೆ:-

ಸ್ವಜನಸುತಾತ್ಮದಾರಧನಧಾಮಧರಾಸುರಥೈಃ
ತ್ವಯಿ ಸತಿ ಕಿಂ ನೃಣಾಂ ಶ್ರಯತ ಆತ್ಮನಿ ಸರ್ವರಸೇ ।
ಇತಿ ಸದಜಾನತಾಂ ಮಿಥುನತೋ ರತಯೇ ಚರತಾಂ
ಸುಖಯತಿ ಕೋ ನ್ವಿಹ ಸ್ವವಿಹತೇ ಸ್ವನಿರಸ್ತಭಗೇ ॥ ೨೧ ॥

ಹೇ ಸರ್ವೇಶ್ವರ, ನೃಣಾಂ ಆತ್ಮನಿ = ಸಕಲ ಮನುಷ್ಯರ ಪ್ರತ್ಯಗಾತ್ಮನಾದ. ಸರ್ವರಸೇ = ಸಕಲ ಸುಖ ಆನಂದಗಳ ನಿಧಿಯಾದ. ತ್ವಯಿ ಸತಿ = ನೀನು ಇರಲು ಶ್ರಯತಃ = ಅಂತಹ ನಿನ್ನನ್ನೇ ಆಶ್ರಯಿಸಿ ಉಪಾಸನೆ ಮಾಡಿಕೊಂಡಿರುವ ಭಕ್ತನಿಗೆ, ಸ್ವಜನಸುತಾತ್ಮದಾರಧನಧಾಮಧರಾಸುರಥೈಃ = ಜ್ಞಾತಿಬಂಧುಗಳು, ಮಕ್ಕಳು, ದೇಹ, ಹೆಂಡಿರು, ಹಣ, ಮನೆಮಠ, ಭೂಮಿಕಾಣಿ, ಮತ್ತು ರಥ, ವಾಹನಾದಿಗಳಿಂದ (ಅವುಗಳನ್ನು ಕಟ್ಟಿಕೊಂಡು) ಕಿಂ = ಏನು ಉಪಯೋಗ? ಅವುಗಳಿಂದ ಭಕ್ತನಿಗೆ ಏನು ಪ್ರಯೋಜನವಾಗುವುದಿಲ್ಲ. ನಿನ್ನಿಂದಲೇ ಅವನಿಗೆ ಸಕಲ ಇಷ್ಟಾರ್ಥ ಸುಖ ಆನಂದಗಳು ಸಿದ್ಧಿಸಿರುವುವು, ಸರ್ವರಸೇ ಎಂಬ ವಿಶೇಷಣವಿರುವುದರಿಂದ ಈ ತಾತ್ಪರ್ಯವು ಲಭಿಸುವುದು. ಇತಿ ಸತ್ ಅಜಾನತಾಂ ಹೀಗೆಂಬ ಪರಮಾರ್ಥವನ್ನು ಅರಿಯದ್ದರಿಂದಲೇ ಅಜ್ಞಾನಿಗಳಾದ ಜನರು, ರತಯೇ = ಸುಖಪ್ರಾಪ್ತಿಗೋಸ್ಕರ. ಮಿಥುನತಃ = ಸ್ತ್ರೀಪುರುಷರು ಪರಸ್ಪರ ಸಾಹಚರ್ಯದಿಂದ. ಚರತಾಂ = ವ್ಯವಹರಿಸುತ್ತಾ ಜ್ಞಾನ ಕರ್ಮ ಮಾಡಿಕೊಳ್ಳುವಂತಹವರಿಗೆ, ಇಹ = ಈ ಪ್ರಪಂಚದಲ್ಲಿ, ಕಃ ನು ಸುಖಯತಿ = ಯಾವ ವಸ್ತು ತಾನೇ ನಿಜವಾದ ಸುಖವನ್ನು ಕೊಟ್ಟೀತು? ಏಕೆಂದರೆ, ಸ್ವವಿಹತೇ = ಸ್ವಯಂ ನಶ್ವರಪ್ರಾಯ - ಅಶಾಶ್ವತ - ಮರ್ತ್ಯವಾಗಿರುವಲ್ಲ. ಮತ್ತು ಸ್ವನಿರಸ್ತಭಗೇ = ಭಾಗ್ಯವಾದ ಮನುಷ್ಯನು ಸ್ವಯಂ ಕ್ಷೇಮವನ್ನೂ ಮಂಗಳವನ್ನು ಕಳೆದುಕೊಂಡವನು, ಅವರ

ಆಗ ಸ್ಥಳಾಂತರದ ಕಷ್ಟವಿಲ್ಲವಲ್ಲ?

ಭಗವದ್ಭಕ್ತರಾದ ಮುನಿಗಳು ಕ್ಷೇತ್ರತೀರ್ಥಗಳಿಗೆ ಹೋಗುವುದನ್ನು ಕುರಿತು ಬಣ್ಣಿಸುತ್ತ ಸ್ತುತಿಸುತ್ತಾರೆ:-

ಭುವಿ ಪುರುಪುಣ್ಯತೀರ್ಥಸದನಾನ್ಯೃಷಯೋ ವಿಮದಾಃ
ತ ಉತ ಭವತ್ಪದಾಂಬುಜಹೃದೋಽಘಭಿದಂಘ್ರಿಜಲಾಃ ।
ದಧತಿ ಸಕೃನ್ಮನಸ್ತ್ವಯಿ ಯ ಆತ್ಮನಿ ನಿತ್ಯಸುಖೇ
ನ ಪುನರುಪಾಸತೇ ಪುರುಷಸಾರಹರಾವಸಥಾನ್ ॥೨೨॥

ಓ ಸರ್ವೇಶ್ವರ, ಋಷಯಃ = ಮುನಿಗಳು, ಭಕ್ತಮುನಿಗಳು. ಭುವಿ = ಈ ಪ್ರಪಂಚದಲ್ಲಿ (ಹರಡಿಕೊಂಡಿರುವ ಪ್ರಾಂತದಲ್ಲಿ) ಪುರುಪುಣ್ಯತೀರ್ಥಸದನಾನಿ = ಬಹಳ ಪಾಪಪರಿಶೋಧಕಗಳಾದ ಮತ್ತು ಅಪಾರಪುಣ್ಯಕಾರಕಗಳಾದ ತೀರ್ಥಕ್ಷೇತ್ರಗಳನ್ನು ಹಾಗು ಭಗವನ್ಮಂದಿರಗಳನ್ನು ಆಶ್ರಯಿಸುತ್ತಾರೆ. ತೇ ಉತ = ಅವರು ಯದ್ಯಪಿ, ಭವತ್ಪದಾಂಬುಜಹೃದಃ = ನಿನ್ನ ಚರಣಾಂಬುಜಗಳನ್ನು ನಿರಂತರವಾಗಿ ಹೃದಯದಲ್ಲಿ ಧರಿಸಿಕೊಂಡಿರತಕ್ಕವರು (ನಿತ್ಯಸ್ಮರಣೆಯುಳ್ಳವರ) ಮತ್ತು ವಿಮದಾಃ = ಮದಮಾತ್ಸರ್ಯಾದಿ ವಿಕಾರಗಳಿಲ್ಲದವರಾಗಿರತಕ್ಕವರು. ಹಾಗು ಅಘಭಿದಂಘ್ರಿಜಲಾಃ = ಅವರ ಪಾದೋದಕವು ಪಾಪಿಗಳ ಪಾಪಗಳನ್ನು ತೊಡೆದುಹಾಕಬಲ್ಲುದಾಗಿರುತ್ತದೆ. ಅಂತಹ ಸಾಧುಗಳು ಮತ್ತೆ ಏತಕ್ಕೆ ತೀರ್ಥಯಾತ್ರೆ ಮಾಡುತ್ತಾರೆಂದರೆ:- ಬಹುಶಃ ತೀರ್ಥಕ್ಷೇತ್ರಗಳಲ್ಲಿ ಬೇರೆ ಬೇರೆ ಸಾಧುಸತ್ಪುರುಷರ ದರ್ಶನ ಸಲ್ಲಾಪ ಲಾಭವಾಗುವುದೆಂಬ ಅಭಿಪ್ರಾಯವಿರಬಹುದು, ಅಥವಾ - ನಿತ್ಯಸುಖೇ = ಸದಾ ಆನಂದಸ್ವರೂಪನಾದ. ಆತ್ಮನಿ = ಹೃತ್ ಪ್ರತ್ಯಗಾತ್ಮನೇ ಆಗಿರುವ. ತ್ವಯಿ = ನಿನ್ನಲ್ಲಿ (ಪರಮಾತ್ಮನಲ್ಲಿ) ಸಕೃತ್ = ಒಂದುಬಾರಿ

ಯೇ = ಯಾರು. ಮನಃ ದಧತಿ = ಭಕ್ತಿಯಿಂದ ಮನಸ್ಸನ್ನು ಕೊಡುವರೋ (ಪರಮಾನಂದವನ್ನನುಭವಿಸಿದ) ಅವರು. ಪುನಃ = ಮತ್ತೆ. ಪುರುಷಸಾರಹರಾವಸಥಾನ್ = ಮನುಷ್ಯನ ಧೈರ್ಯ ವೀರ್ಯ ಕೀರ್ತಿ ತೇಜಸ್ಸು ಇವು ಮಹತ್ತ್ವವನ್ನೇ ಲೋಪಗೊಳಿಸುವ ಮನೆ ಮಠಗಳನ್ನು. ನ ಉಪಾಸತೇ = ಆಶ್ರಯಿಸುವ, ಸೇವಿಸುವ ಯೋಚನೆಯನ್ನೇ ಮಾಡುವುದಿಲ್ಲ.

ವಿಚಾರಕ್ರಮದಲ್ಲಿ ಮನನಾಂಶಗಳನ್ನು ಮಂಡಿಸುತ್ತಾ ಸ್ತುತಿಸುತ್ತಾರೆ:-

ಸತ ಇದಮುತ್ಥಿತಂ ಸದಿತಿ ಚೇನ್ನನು ತರ್ಕಹತಂ
ವ್ಯಭಿಚರತಿ ಕ್ವ ಚ ಕ್ವ ಚ ಮೃಷಾ ನ ತಥೋಭಯಯುಕ್।
ವ್ಯವಹೃತಯೇ ವಿಕಲ್ಪ ಇಷಿತೋऽಂಧಪರಂಪರಯಾ
ಭ್ರಮಯತಿ ಭಾರತೀ ತ ಉರುವೃತ್ತಿಭಿರುಕ್ಥಜಡಾನ್ ॥೩೬॥

ಭಕ್ತಿ, ಜ್ಞಾನ ವೈರಾಗ್ಯವೆಂಬ ಭಾಗವತಧರ್ಮವು ಅತ್ಯುತ್ಕೃಷ್ಟವೆಂಬ ಅದ್ವೈತಸಿದ್ಧಾಂತವನ್ನೇ ಗುರಿಯಾಗಿ ಉಳ್ಳುದಾಗಿದೆ. ವೇದಪ್ರತಿಪಾದ್ಯವಿಷಯವು ಇದೇ ಆಗಿರುತ್ತದೆ. ಶ್ರುತಿಯು ಅನಾತ್ಮಧರ್ಮವ್ಯಾವೃತ್ತಿತಾತ್ಪರ್ಯವುಳ್ಳುದಾಗಿ ಅ(ಜಹ) ಭಾಗತ್ಯಾಗಲಕ್ಷಣೆಯಿಂದ ಪರಮಾರ್ಥವನ್ನು ಪ್ರತಿಪಾದಿಸುವುದು. ಈ ಉಪಾಯದಿಂದ ಪ್ರಮೇಯತೆಗೆ ವಿಷಯನಾಗದ, ನಿತ್ಯವಿಷಯಿಸ್ವರೂಪನು, ಪ್ರತ್ಯಗಾತ್ಮಾಭಿನ್ನನು ಆದ ಪರಮಾತ್ಮನನ್ನು ಬೋಧಿಸುವುದೆಂದು ಒಪ್ಪಬೇಕು. ಹಾಗಲ್ಲದೆ ಶ್ರುತಿವಾಕ್ಯಾರ್ಥನಿರ್ಣಯಕ್ಕೆ ಲೋಕರೂಢಿಯನ್ನೇ ಮುಖ್ಯವಾಗಿಟ್ಟುಕೊಂಡು ಅಭಿಧಾವೃತ್ತಿಯಿಂದ ತಿಳಿಯುವ ಅರ್ಥವನ್ನೇ ಹಿಡಿದು ಅರ್ಥನಿರ್ಣಯಕ್ಕೆ ಹೊರಟರೆ ಎಲ್ಲಾ ಉಪದೇಶಗಳು ವ್ಯಾಕುಲಗೊಳ್ಳುವುವು. ಅಲ್ಲದೆ ವಾಕ್ಯಾರ್ಥಬೋಧಕ್ಕೆ ತಾತ್ಪರ್ಯನಿರ್ಣಯವೇ ಪ್ರಧಾನಸಾಮಗ್ರೀ ಎಂದು

ಎಲ್ಲಾ ವಾದಿಗಳೂ ಒಪ್ಪುತ್ತಾರೆ. ಆದ್ದರಿಂದ ತತ್ತ್ವಮಸ್ಯಾದಿ ವಾಕ್ಯಗಳಿಗೆ ಷಡ್ವಿಧಲಿಂಗವ್ಯಾಪಾರವನ್ನು ನೋಡಿ ಅಭೇದನಿಶ್ಚಯವಾಗುವಂತೆ ಲಕ್ಷಣಾವೃತ್ತಿಯನ್ನಾಶ್ರಯಿಸಬೇಕು. ಎಂಬ ಅಭಿಪ್ರಾಯವನ್ನು ಸಮರ್ಥಿಸುತ್ತಾ ಅಭಿಧಾವೃತ್ತಿಯ ಅವ್ಯವಸ್ಥೆಯನ್ನು ಯುಕ್ತಿಯಿಂದ ತೋರ್ಪಡಿಸುತ್ತಾ ಸ್ತುತಿಸುತ್ತಾರೆ:— ಶ್ಲೋಕಾರ್ಥ:- (ಪೂರ್ವಪಕ್ಷಿಯು ಹೇಳುತ್ತಾನೆ —) ಇದಂ = ಈ ಪ್ರಪಂಚವು. ಸತಃ = ಸದ್ವಸ್ತುವಿನಿಂದ. ಉತ್ಥಿತಂ = ಉಂಟಾಗಿದೆ. ಆದ್ದರಿಂದ ಇದು. ಸತ್ = ಸದ್ವಸ್ತುವೇ. ಸತ್ಯವೇ ಆಗಿದೆ. ಈ (ತರ್ಕ) ಯುಕ್ತಿಯಿಂದ ಪ್ರಪಂಚವು ಮಿಥ್ಯಾ ಎಂದು ಹೇಳುವವರ ಮತವನ್ನು ತಳ್ಳಿಹಾಕಿದಂತಾಯಿತು ಎಂದು ಪೂರ್ವಪಕ್ಷಿಯ ಅಭಿಪ್ರಾಯ. ಸತ್ಯವಾದ ವಸ್ತುವಿನಿಂದ ಉಂಟಾದ ಘಟವೂ ಸತ್ಯವೇ ಎಂಬ ದೃಷ್ಟಾಂತವನ್ನು ಇಟ್ಟುಕೊಂಡು ಹೇಳಿದ ಮಾತು ಇದು. ವಸ್ತು ಸತ್ಯ ಹೇಗೆ? ಎಂಬುದನ್ನು ([illegible]) ನಿರೂಪಿಸಿರುವುದಿಲ್ಲ. ಈ ಪೂರ್ವಪಕ್ಷದ ಖಂಡನೆ ಏನೆಂದರೆ:- ಇತಿ ಚೇತ್ ನ. ತರ್ಕಹತೇಃ = ಹಾಗೆ ಹೇಳುವುದು ತರ್ಕಕ್ಕೆ ವಿರುದ್ಧವಾಗಿದೆ. ಇದು ಯುಕ್ತಿಗೆ ಅನುಗುಣವಾದ ಉಪದೇಶವಾಗುವುದಿಲ್ಲ. ಹೇಗೆಂದರೆ:- ಸತಃ ಉತ್ಥಿತಂ ಎಂಬಲ್ಲಿ ಉಪಾದಾನವಿಭಕ್ತಿ ಪಂಚಮಿಯಿಂದ ಕಾರ್ಯಕಾರಣಗಳಿಗೆ ಭೇದವೇ-ವೈಲಕ್ಷಣ್ಯವೇ ತಿಳಿಯುತ್ತಿದೆ. ಕಾರ್ಯವು ನಾಶಹೊಂದುತ್ತಿರುವುದು ಅನುಭವಸಿದ್ಧವಾಗಿದೆ. ಕಾರಣವಾದ ವಸ್ತು ಇದ್ದೇ ಇರುತ್ತದೆ. ಹೀಗೆ ಭೇದವೇ ಇರುವುದರಿಂದ ಮೇಲೆ ಹೇಳಿದ ಅನುಮಾನಪ್ರಯೋಗದಿಂದ ಪ್ರಪಂಚಸತ್ಯತ್ವವು ಸಿದ್ಧಿಸುವುದಿಲ್ಲ. ಕಾರ್ಯವು ಕಲ್ಪಿತ = ವಿಕಾರಮಾತ್ರ. ಕಾರಣವು ಮೂಲವಸ್ತು ಎಂಬಷ್ಟು ಅಂಶಮಾತ್ರವನ್ನೇ ಎಲ್ಲಾ ವಾದಿಗಳು ಒಪ್ಪುತ್ತಾರೆ. ಅದಕ್ಕೆ ವಿರುದ್ಧವಾದ್ದರಿಂದ ಈ ಮತವು ತಪ್ಪು.

ಸಕೇವದದ ವಾಕ್ಯಾರ್ಥಕ್ಕೆ ಪ್ರಾಧಾನ್ಯ ಕೊಟ್ಟರೆಂದು ಹೇಳುವ ಅರ್ಥ ಸರಿಯಲ್ಲ ಎಂದು ಖಂಡಿಸಿದಹಾಗಾಯಿತು. ಇದಕ್ಕೆ ತರ್ಕವಿರೋಧವನ್ನೂ ತೋರಿಸುತ್ತಾರೆ:- ಕ್ವಚಿತ್ ವ್ಯಭಿಚರತಿ = ತದುತ್ಪನ್ನತ್ವವೆಂಬ ಹೇತುವು ಕೆಲವು ಕಡೆ ವ್ಯಭಿಚಾರಿಯಾಗುತ್ತದೆ. ಅಂದರೆ ಮೇಲೆ ಹೇಳಿದ ಹೇತುವು ಸಾಧ್ಯಾಭಾವವಿದ್ದಾಗ್ಯೂ ಎಂಬ ವ್ಯಭಿಚಾರದೋಷವುಳ್ಳದ್ದಾಗಿರುವುದರಿಂದ, ಈ ಹೇತುವಿನಿಂದ ಸದನುಮಿತಿ = ಯಥಾರ್ಥಜ್ಞಾನವುಂಟಾಗುವುದಿಲ್ಲ. ಹೇಗೆಂದರೆ:- ಪುತ್ರ: ಪಿತ್ರಾತ್ಮಕ: ಪಿತುರುತ್ಪನ್ನತ್ವಾತ್ (ಹೀಗೆ ಅನುಮಾನಪ್ರಯೋಗಮಾಡಿದಾಗ) ಮಗನು ತಂದೆಯಿಂದ ಅಭಿನ್ನನಾಗಿದ್ದಾನೆ. ಏಕೆಂದರೆ:- ತಂದೆಯಿಂದ ಹುಟ್ಟಿರುವುದರಿಂದ. ಹೀಗೆ ಅನುಮಾನಿಸಿದರೆ ಅದು ಸರಿಯಲ್ಲ. ಪಿತ್ರಾತ್ಮಕವಲ್ಲದ ಗೃಹಕ್ಷೇತ್ರಾದಿಗಳಲ್ಲಿ ಪಿತುರುತ್ಪನ್ನತ್ವವಿರುತ್ತದೆ. ಗೃಹಾದಿಗಳು ಮತ್ತು ಮಗನೂ ಪಿತೃವಿನಿಂದ ಭಿನ್ನವಾಗಿರುವುದೂ ಮತ್ತು ಕಾರಣವು ಗತಿಸಿದರೂ ಕಾರ್ಯಗಳು ಇಲ್ಲಿರುವುದೂ ಪ್ರತ್ಯಕ್ಷಸಿದ್ಧವಾಗಿರುತ್ತದೆ. ಇದು ವಿರುದ್ಧವಲ್ಲವೇ? ಆದ್ದರಿಂದ ಮೇಲಿನ ಅನುಮಾನಪ್ರಯೋಗ ವ್ಯಭಿಚಾರದೋಷದುಷ್ಟವಾಗಿದೆ. ಅದರಿಂದ ಪ್ರಮಾನುಮಿತಿಯುಂಟಾಗುವುದಿಲ್ಲ. ಈಗ ಪೂರ್ವಪಕ್ಷಿ ಹೇಳುತ್ತಾನೆ:- ಪುತ್ರೋತ್ಪತ್ತಿಯಲ್ಲಿ ತಂದೆಯು ಉಪಾದಾನಕಾರಣವಾಗಿಲ್ಲ. ಕೇವಲ ನಿಮಿತ್ತವಾಗಿದ್ದಾನೆ. ಪ್ರಕೃತದಲ್ಲಿ ಹೇತುವಿಗೆ ಉಪಾದಾನೋತ್ಪನ್ನತ್ವವೆಂಬ ವಿಶೇಷಣವನ್ನು ಕೊಟ್ಟರೆ ಆಗ ವ್ಯಭಿಚಾರದೋಷ ಬರುವುದಿಲ್ಲವಲ್ಲವೇ! ಎಂದರೆ, ಹಾಗೆ ವಿಶೇಷಣವನ್ನು ಹೇಳಿದರೂ ದೋಷ ತಪ್ಪುವುದಿಲ್ಲ. ಹೇಗೆಂದರೆ:- ರಜ್ಜುಸರ್ಪ: ರಜ್ಜ್ವಾತ್ಮಕ:, ರಜ್ಜೂಪಾದಾನೋತ್ಪನ್ನತ್ವಾತ್ ಎಂಬ ಅನುಮಾನಪ್ರಯೋಗದಲ್ಲಿ (ಹಗ್ಗದಹಾವು ಹಗ್ಗದಿಂದ ಅಭಿನ್ನವಾಗಿದೆ. ಹಗ್ಗವೆಂಬ ಉಪಾದಾನದಿಂದ ಉಂಟಾಗಿದೆಯಾಗಿ) ಆಗಲೂ ವ್ಯಭಿಚಾರದೋಷವಿದ್ದೇ ಇದೆ. ಹಗ್ಗದ ಹಾವು

ಹಗ್ಗದಿಂದಲೇ ಉಂಟಾಗುವುದು. ಆದರೆ ಆ ಹಾವು ಹಗ್ಗವು ಅಲ್ಲ. ಹಗ್ಗದಂತೆ ಸತ್ಯವು ಆಗಿರುವುದಿಲ್ಲ, ಮಿಥ್ಯೆಯೇ ಆಗಿರುತ್ತೆ. ಇದು ಸತ್ಯವೇ ಆಗಿದ್ದರೆ ಕನಕದಿಂದ ಉಂಟಾದ ಕುಂಡಲಾದಿಗಳಂತೆ ಬಾಧೆಗೆ ಒಳಗಾಗಬಾರದು. ಆದರೆ ಬಾಧಿತವಾಗುತ್ತಿದೆ. ಆದ್ದರಿಂದ ಹಾವು ವ್ಯಭಿಚಾರದೋಷವುಳ್ಳದ್ದು ಆಗಿದೆ. ಈ ಅಂಶವನ್ನು ಶ್ಲೋಕದಲ್ಲಿ ಕ್ವಚಿದ್ವ್ಯಭಿಚಾರ = ಕೆಲವು ಕಡೆ ತದುತ್ಪನ್ನವಾದರು ಸತ್ಯವಾಗಿರುವುದಿಲ್ಲ, ಮಿಥ್ಯೆಯೇ ಆಗಿರುತ್ತದೆ ಎಂಬ ಮಾತಿನಿಂದ ತಿಳಿಸಿದೆ. ಹಾಗಾದರೆ [illegible] (ಬೆನ್ನುತ್ತುವ ಪಾರ್ವಪಕ್ಷ) ಉಭಯಯುಕ್ತನ ತಥಾ = ಎರಡೂ ಸೇರಿ ಅಂದರೆ ಉಪಾದಾನ ಚೈತನ್ಯವು, ಮತ್ತು ಅವಿದ್ಯೆಯೂ ಸೇರಿ ಕಾರ್ಯವುಂಟಾಗಿದ್ದರೆ ಆ ಕಾರ್ಯವು ಸತ್ಯವಾಗದೆ ಮಿಥ್ಯೆಯಾಗಿರುತ್ತದೆ. ರಜ್ಜುಸರ್ಪ ಎಂಬಲ್ಲಿ ಅವಿದ್ಯೆಯೂ ಇರುವುದರಿಂದ ಕಾರ್ಯವು ಸತ್ಯವಾಗಿಲ್ಲ. ಹಾಗೆ ವ್ಯಭಿಚಾರ ದೋಷಕ್ಕೆ ಗತಿ ತೋರಿಸಿದಹಾಗಾಯಿತಲ್ಲವೇ ಅಂದರೆ ಇದು (ಕಾರಣಾಧಿಷ್ಠಾನಜ್ಞಾನವಿಲ್ಲದುದು) ಪ್ರಕೃತ ಪ್ರಪಂಚ ಕಾರ್ಯಕ್ಕೆಲ್ಲದಲ್ಲಿ ಸಮವೇ ಆಗಿದೆ. ಇಲ್ಲಿಯೂ ಕಾರಣಾಧಿಷ್ಠಾನವಾದ ಬ್ರಹ್ಮದ ಅಜ್ಞಾನದಿಂದಲೇ ಪ್ರಪಂಚವುಂಟಾಗುವುದು. ಆದ್ದರಿಂದ ಸಮಾಧಾನಕ್ಕೆಡೆಯಿದ್ದರೂ ಕಾರ್ಯಪ್ರಪಂಚವು ಸತ್ಯವೆಂಬುದು ಸಿದ್ಧವಾಗುವುದಿಲ್ಲ. ಎಲ್ಲಾ ವಾದಿಗಳೂ ಒಪ್ಪುವಂತೆ ಕಾರ್ಯವು ಕಲ್ಪಿತ (ಜಡಾಂಶ) - ಅಧಿಷ್ಠಾನವಾದ ಕಾರಣದಲ್ಲಿ ಆರೋಪಿತವಾಗಿದೆ ಎಂಬುದಿಷ್ಟು ಮಾತ್ರ ನಿಜ. ಕಾರ್ಯಪ್ರಪಂಚವು [illegible] ಮಿಥ್ಯೆಯೇ ಎಂದಾಯಿತು. ಹಾಗಾದರೆ ಇದೇನಿದು - ಎಲ್ಲಾ ಜನರೂ ಈ ಪ್ರಪಂಚದಲ್ಲಿ ಸತ್ಯವೆಂದೇ ವ್ಯವಹಾರಮಾಡುತ್ತಿರುವರಲ್ಲ ಎಂದರೆ ಅಂಧಪರಂಪರಯಾ = ತಲತಲಾಂತರದಿಂದ ಭ್ರಾಂತಿಮೂಲಕವಾಗಿಯೇ. ವ್ಯವಹೃತಯೇ = ಜನಗಳೆಲ್ಲರ ವ್ಯವಹಾರಸಿದ್ಧಿಗೋಸ್ಕರ. ವಿಕಲ್ಪಃ ಇಷ್ಯತೇ =

ಅನ್ಯೋನ್ಯಾಶ್ರಯದೋಷವು ವ್ಯವಹಾರಿಗಳಿಗೆ ಇಷ್ಟವಾಗದೆ. ಭ್ರಮಮೂಲಕವಾದ ವ್ಯವಹಾರವನ್ನೇ ಒಪ್ಪಿಕೊಳ್ಳಲಾಗುತ್ತದೆ. ಸತ್ಯಮಿಥ್ಯೆಗಳನ್ನು ವಿಚಾರಮಾಡಿಕೊಳ್ಳದೆ ಎರಡನ್ನು ಬೆರಸಿಕೊಂಡು ವ್ಯವಹರಿಸುತ್ತಾರೆ. ಆದ್ದರಿಂದ ವ್ಯವಹಾರವಾಗಲಿ ಪ್ರಪಂಚವಾಗಲಿ ಸತ್ಯಪದಾರ್ಥವೆಂದು ಸಿದ್ಧವಾಗುವುದಿಲ್ಲ. ಹಾಗಾದರೆ ವ್ಯವಹಾರದಲ್ಲಿರುವ ಕರ್ತೃತ್ವ ಭೋಕ್ತೃತ್ವವೆಂಬ ಅಧಿಕಾರವನ್ನಧಿಕರಿಸಿ ವೇದವು ಕರ್ಮವಿಧಾನ ಮಾಡಿರುವುದು ಏಕೆ? ಎಂದರೆ:- ಹೇ ಭಗವನ್, ಶ್ರೀ ಭಾರತೀ = ನಿನ್ನ ವಾಣಿಯಾದ ವೇದವು. ಉರುವೃತ್ತಿಭಿಃ = ಅಭಿಧಾ ಗೌಣೀ ಲಕ್ಷಣಾ ಎಂಬ ಬೇರೆ ಬೇರೆ ಶಬ್ದ ಶಕ್ತಿವೃತ್ತಿಗಳಿಂದ. ಉಕ್ಥಜಡಾನ್ = ಕಾಮ್ಯಕರ್ಮಗಳಲ್ಲಿ ಅಭಿನಿವೇಶವುಳ್ಳ, ವೇದತಾತ್ಪರ್ಯವನ್ನರಿಯದ, ಮಂದಮತಿಗಳಾದ ಜನರನ್ನು ಭ್ರಮಯತಿ = ಭ್ರಾಂತಿಗೊಳಿಸುವಂತೆ ಮಾಡುತ್ತದೆ. ಕರ್ಮಗಳನ್ನು ಕರ್ಮದ ಕರ್ಮಫಲದಲ್ಲಿ ಮೋಹಗೊಂಡು ಮುಳುಗಿರುವಂತೆ ಮಾಡುತ್ತದೆ.

ಒಟ್ಟಿನಲ್ಲಿ ಈ ಪ್ರಪಂಚದ ಸತ್ಯತ್ವಕ್ಕೆ ಯುಕ್ತಿಪ್ರಮಾಣಗಳಿಲ್ಲದ್ದರಿಂದ ಪ್ರಪಂಚವನ್ನು ಸತ್ಯವೆಂದು ಬಗೆಯುವಂತಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಅಸತ್ಯವೆನ್ನುವ ವಿಷಯಕ್ಕೆ ಶ್ರುತಿಪ್ರಮಾಣವೇ ಇರುವುದೆಂದು ಈ ಶ್ಲೋಕದಿಂದ ನಿರೂಪಿಸುತ್ತಾ ಸ್ತುತಿಸುವರು:-

ನ ಯದಿದಮಗ್ರ ಆಸ ನ ಭವಿಷ್ಯದತೋ ನಿಧನಾದ್
ಅನುಮಿತಮಂತರಾ ತ್ವಯಿ ವಿಭಾತಿ ಮೃಷೈಕರಸೇ ।
ಅತ ಉಪಮೀಯತೇ ದ್ರವಿಣಜಾತಿವಿಕಲ್ಪಪಥೈಃ
ವಿತಥಮನೋವಿಲಾಸಮೃತಮಿತ್ಯವಯಂತ್ಯಬುಧಾಃ ॥೨೪॥

ಯತ್ = ಯಾವಕಾರಣದಿಂದ. ಇದಂ = ಈ ಪ್ರಪಂಚವು, ವಿಶ್ವಸಂಸಾರವು.

ಅಗ್ರೇ = ಸೃಷ್ಟಿಗೆ ಪ್ರಾರಂಭದಲ್ಲಿ, ಜಾಗ್ರದವಸ್ಥೆಗೆ ಬರುವ [ನಿದ್ರೆಯಲ್ಲಿ] ನ ಆಸೀತ್ = ಇರಲಿ
ಇಲ್ಲವೋ ವ್ಯಕ್ತ. ಅತೋ ನಿಧನಾತ್ = ಇನ್ನು ಮುಂದೆ ಪ್ರಳಯಾನಂತರದಲ್ಲಿ
[ಜಾಗ್ರತ್ಸ್ವಪ್ನ] ಅನಂತರದ ಅವಸ್ಥೆಯಾದ ಸುಷುಪ್ತಿಯಲ್ಲಿ. ನ ಭವಿಷ್ಯತಿ = ಇರುವುದಿಲ್ಲವೋ
ಅಂತರಾ = ಮಧ್ಯದ ವರ್ತಮಾನಕಾಲದಲ್ಲಿ, ಜಾಗ್ರದವಸ್ಥೆಯಲ್ಲಿ. ವಿಕಾರಸ್ಯ =
ಅವಿದ್ಯಾನುಭವಸ್ಥೂಲವಾದ, ತ್ವಯಿ = ನಿನ್ನಲ್ಲಿ. ವ್ಯೂಹಾ = ಸಾಕ್ಷಿ ಸಾಕ್ಷಿ (ಸ
ತ್ವವಾಗಿ ಇರುವಂತೆ) ವಿಭಾತಿ = ತೋರುತ್ತದೆ. ಅನುಭವಂ = ಅನುಭವದಿಂದ
[ನಿಶ್ಚಯ] ತ್ರಿಪುಟಿ ತೋರಿದೆ. ಅಂದರೆ ಪ್ರಪಂಚವು ಸಾಕ್ಷಿ ಆತ್ಮನ ಅಧಿಷ್ಠಾನದಲ್ಲಿ ಮಧ್ಯೆ
ಬಂದು ಸ್ವಲ್ಪ ಕಾಲ ತೋರಿಕೊಂಡು ಮತ್ತೆ ಅಡಗಿಹೋಗುವಂತಹುದಾಗಿದೆ. ಆಗ
ಆಗಂತುಕವು ಅನಿತ್ಯವು ಆಗಿರುವುದರಿಂದಲೇ ಪ್ರಪಂಚವು ಕನಸಿನಂತೆ
ಹುಸಿಯಾಗಿದೆ. [ಇದನ್ನು ಮಿಥ್ಯೆ ಎನ್ನುವರು] ಅತಃ = ಆದ್ದರಿಂದ. ಶ್ರುತಯಃ. ಬ್ರಹ್ಮ ಜಾತಿ ವಿಕಲ್ಪವರ್ಜಿತಂ:
ಬ್ರಹ್ಮ ಜಾತಿಗಳಿಂದ ಮುಕ್ತ, ಲೋಕ ಮೊದಲಾದವುಗಳ ಕಾರ್ಯಕಾರಣ
ಭಾವಗಳಾದ ಭೇದ, ಕಲ್ಪಿತ ಪ್ರಕಾರಗಳಿಂದ ರಹಿತ. ಉಪಮಾನ ತೀ =
ಹೋಲಿಕೆ ಕೊಟ್ಟು ನಿರೂಪಿಸುತ್ತದೆ. [ಅನೇಕ ಕಾರಣಗಳ ಜೊತೆಯಲ್ಲಿ] ಅನೇಕ ದೃಷ್ಟಾಂತಗಳಿಂದ ಕಾರ್ಯಕಾರಣ
ಭಾವವನ್ನು ಪ್ರತಿಪಾದಿಸಿದೆ. ಅಂದರೆ:- ಘಟ ಶರಾವಾದಿ ಕಾರ್ಯಪ್ರಕಾರಗಳು
ಕೇವಲ ನಾಮರೂಪಭೇದದಿಂದ ತೋರುವ ಮಣ್ಣೇ, ಕುಂಡಲ ಅಂಗುಲೀಯಾದಿ
ಕಾರ್ಯವಸ್ತುಗಳು ಕೇವಲ ಕನಕವೇ, ಹಾಗೆಯೇ ನಾಮರೂಪಭೇದ
ವ್ಯಕ್ತವಾಗಿರುವ ಜಗತ್ತು, ಹಾಗೂ ಮರದ ಪ್ರಾಪಂಚಿಕ ಪದಾರ್ಥಗಳಿಂದ ತಿಳಿದು
ಬರುತ್ತಿರುವ ಆಧ್ಯಾತ್ಮಿಕ ಪ್ರಯೋಗಗಳು, ಹಾಗೆ ಮನಸ್ಸು ಕೇವಲ ಸನ್ಮಯವೇ
ಬ್ರಹ್ಮಮಯವೇ ಎಂದು ಪರಮಾರ್ಥ ಪ್ರಯೋಜನಗಳನ್ನು ದೃಷ್ಟಾಂತ ಕೊಟ್ಟು
ನಿರೂಪಣೆ ಮಾಡಿದೆ. ಇಷ್ಟಿನಲ್ಲಿ ಪ್ರಪಂಚನಷ್ಟತ್ವ ಸಾಧಕರು ಇಲ್ಲದ್ದರಿಂದ

ಬಾಧಕವಾದ ಬಂದರೆ ಅನಿತ್ಯತ್ವಕ್ಕೆ ಪ್ರಮಾಣಾಭಿಪ್ರಾಯದಿಂದ ಹೇಳುತ್ತಾರೆ—
ಅತಥ್ಯಮಾನೋಽಭಿಮಾನಃ = ಇಂತಹ ವ್ಯರ್ಥವಾದ ಕೋಲಾಹಲವನ್ನಿನ ಕಲ್ಪನೆಯ
ಪ್ರಪಂಚವನ್ನು ಹಾಗೂ ಕಲ್ಪಿತ ಪ್ರಮಾತೃವಿನ ಜ್ಞಾನವನ್ನು (ಋತಂ ಇತಿ =
ಸತ್ಯವೆಂದು) ಅಬುಧಾಃ = ಅಜ್ಞಾನಿಗಳು ಮಾತ್ರವೇ. ಅವಯನ್ತಿ = ತಿಳಿಯು-
ತ್ತಾರೆ ಮತ್ತು ನಂಬಿಕೊಂಡಿರುತ್ತಾರೆ.

ಸಾರಾಂಶವೇನೆಂದರೆ:- ಪ್ರಪಂಚವು ಇದೆ ತೋರುತ್ತದೆ ಎನ್ನುವಾಗ ಇರು-
ವಿಕೆ ಮತ್ತು ತೋರುವಿಕೆ ಬ್ರಹ್ಮನದಾಗಿರುತ್ತದೆ. ಪ್ರಪಂಚ ಎಂಬ ನಾಮವು ಮತ್ತು
ಆಕಾರವು ಮಾಯಿಕವಾದ್ದರಿಂದಲೇ ಹುಸಿಯಾಗಿರುತ್ತದೆ. ಪ್ರಪಂಚವು
ಕಾರ್ಯ (ವಿಕಾರ)ವಾಗಿದ್ದು ಇದಕ್ಕೆ ಕಾರಣವು ಬ್ರಹ್ಮವೇ ಆಗಿರುವುದರಿಂದ
ಕಾರಣಾನನ್ಯನ್ಯಾಯದಿಂದ ಬ್ರಹ್ಮವೇ ಆಗಿರುತ್ತದೆ. ಹಾಗೆ ಶ್ರುತಿಯುಕ್ತಿಪ್ರಮಾಣ-
ಗಳಿಂದ ತಿಳಿಯುವುದೇನೆಂದರೆ:- ಪ್ರಪಂಚವು ಬ್ರಹ್ಮಾತ್ಮನಲ್ಲಿ ತೋರುತ್ತದೆ.
ಆದರೆ ಹುಸಿಯಾಗಿದೆ. ಕನಸಿನಂತೆ ಎಂದು ಶಂಕಿಸಬೇಕು ಸ್ವಯಂ ನಿಶ್ಚಯಿಸಬೇಕು.

ಏಕೆ ಅಸಂಗ ಶುದ್ಧಾತ್ಮನಿಗೆ ಎಂದಿಗೂ ಯಾವ ಪದಾರ್ಥಗಳ ಸಂಬಂ-
ಧವುಂಟಾಗುವುದಿಲ್ಲ. ಇಂದು ಬಳಿಕ ಜೀವಾತ್ಮನಿಗೆ ಸಂಸಾರಬಂಧವೆಂಬುದು
ಈಶ್ವರನು ನಿತ್ಯಮುಕ್ತನೆನ್ನುವುದು ಯಾಕೆ ಹೊಂದುವುದು? ಆತ್ಮನು ಒಬ್ಬನೇ
ಎಂದಿರುವುದರಿಂದ ಮೋಕ್ಷಸಾಧನೋಪದೇಶಗಳು ವ್ಯರ್ಥವೆಂದಾಗುವುದಲ್ಲವೇ?
ಎಂಬೀ ಆಕ್ಷೇಪಕ್ಕೆ ಜೀವೇಶ್ವರವ್ಯವಸ್ಥೆಯನ್ನು ತಿಳಿಸುತ್ತಾ ಸಮಾಧಾನ ಹೇಳುವ
ಶ್ಲೋಕವಿದು. ಅಜ್ಞಾನದಿಂದ ಮನುಷ್ಯನು ಸ್ವಾಭಾವಿಕವಾಗಿಯೇ ಅನ್ಯಭಾವವನ್ನು
ಕಲ್ಪಿಸಿಕೊಂಡಿರುತ್ತಾನೆ. ಆ ಕಲ್ಪನೆಯನ್ನೇ ಅನುವಾದಿಸಿಕೊಂಡು ಶ್ರುತಿಗಳು ಆತ್ಮ-
ಕಲ್ಪನಾದೃಷ್ಟಿಯಿಂದಲೇ ಬದ್ಧಮುಕ್ತವ್ಯವಸ್ಥೆಯನ್ನು ಸಮರ್ಥಿಸುತ್ತಾ

ಸ್ತುತಿಸೂತ್ರೇ :-

ಸ ಯದಜಯಾ ತ್ವಜಾಮನುಶಯೀತ ಗುಣಾಂಶ್ಚ ಜುಷನ್
ಭಜತಿ ಸರೂಪತಾಂ ತದನು ಮೃತ್ಯುಮಪೇತಭಗಃ ।
ತ್ವಮುತ ಜಹಾಸಿ ತಾಮಹಿರಿವ ತ್ವಚಮಾತ್ತಭಗೋ
ಮಹಸಿ ಮಹೀಯಸೇಽಷ್ಟಗುಣಿತೇಽಪರಿಮೇಯಭಗಃ ॥೨೫॥

ಸಃ = ಜೀವಾತ್ಮನು. ಯತ್ = ಯಾವಾಗ. ಅಜಯಾ = ಆತ್ಮವಿಸ್ಮೃತಿ ಸ್ವರೂ-ಪಾಜ್ಞಾನ ಅನ್ಯಥಾಜ್ಞಾನರೂಪ ಮಿಥ್ಯಾಜ್ಞಾನ ಕಾರಣವಾದ ಮಾಯೆಯಿಂದ (ಪ್ರಕೃತಿ ಬದ್ಧನಾಗಿ). ಗುಣಾನ್ ಚ ಜುಷನ್ = (ಮಾಯೆಯ ಕಾರ್ಯ) ಪ್ರಾಕೃತಿಕ ವಿಕಾರಗಳಾದ ವಿಷಯಗಳನ್ನು ಸೇವಿಸುತ್ತಾ, ಭೋಗ ಭೋಗ್ಯಗಳನ್ನು ಭವಿಸುತ್ತಾ, ಅಜಾಂ ಅನುಶಯೀತ = ಮಾಯಾವಿದ್ಯಾಧೀನನಾಗುತ್ತಾನೆಯೋ, ಅಂದರೆ:- ದೇಹದೊಡನೆ ಉಪಾಧಿಯಲ್ಲಿ ನಾನು ಎಂದು ಬಗೆದುಕೊಂಡು ಭ್ರಮೆಯಿಂದಿರುತ್ತಾನೆಯೋ. ತದನು = ಆಗಲೇ. ಸರೂಪತಾಂ ಭಜತಿ = ತಾದ್ರೂಪ್ಯವನ್ನು ಹೊಂದುತ್ತಾನೆ. ಅಂದರೆ ಪ್ರಾಕೃತಪದಾರ್ಥರೂಪನೇ ಆಗುತ್ತಾನೆ. (ಅವಿವೇಕಿಯಾಗಿ ಉಪಾಧಿವಿಶಿಷ್ಟನಾಗಿರುವುದರಿಂದ ಉಪಾಧ್ಯಕ್ತನು ಪರಿಚ್ಛಿನ್ನನು ವಿಕಾರಿಯು, ಗುಣಾತ್ಮಕ ವಿಶಿಷ್ಟನು ಆಗಿ ಪರಿಣಮಿಸುತ್ತಾನೆ) ಹೀಗಿರುವುದರಿಂದ. ಅಪೇತಭಗಃ = ತನ್ನ ಸ್ವಾಭಾವಿಕವಾದ ಮಹಿಮೆಯನ್ನು ಕಳೆದುಕೊಂಡಿರುತ್ತಾನೆ. ಆಗ ದೀನನು ಕೃಪಣನು ಆಗಿರುತ್ತಾನೆ. (ಅಜ್ಞಾನವು ಸ್ವರೂಪವನ್ನು ಆವರಿಸಿರುತ್ತದೆ. ಮಾಯೆಯು ವಿಕ್ಷೇಪವನ್ನುಂಟುಮಾಡುವುದು (ಇದೇ ಸಂಸಾರವು) ಮತ್ತು ಮೃತ್ಯುಂ ಚ ಭಜತಿ = ಮತ್ತು ಮರಣಾದಿ ಕ್ಲೇಶವನ್ನು ಕೂಡ ಹೊಂದುವನು, ಇದೇ ಜೀವನಸ್ಥಿತಿ. ಅಜಾಂ ಅನುಶಯೀತ ಎಂಬುದೇ ಆತ್ಮನಿಗೆ ಬಂದಿರುವ ಜೀವತ್ವಾವಸ್ಥೆ. ಹಾಗಿಲ್ಲದೆ,

ಈಶ್ವರಸ್ವರೂಪ ವ್ಯವಸ್ಥೆ - ಎನ್ನೆಂದರೆ:- ಆತ್ಮಭಗಃ = ಸರ್ವದಾ ಸ್ವಯಂಸಿದ್ಧ ನಿತ್ಯಜ್ಞಾನಾನಂದೈಶ್ವರ್ಯವಿಶಿಷ್ಟನು. ಸ್ವರೂಪಾವರಣವಿಲ್ಲದವನು, ತ್ವಂ ಏವ = ಹಿಂದಿನ ನೀನು (ಪರಮಾತ್ಮನು) ನಾನಾದರೆ, ತಾಂ = ಆ ಮಾಯಾವಿದ್ಯೆಯನ್ನು ಅಜಃ = ದಾಟು. ತ್ವತ್ತಃ ಏವ = ನಿನ್ನಿಂದಲೇ ಬಂದಿರುವ ಪದವನ್ನು ನೀಗಿ ದಾಟಿ ಜಹಾತಿ = ತ್ಯಜಿಸುವೆ. (ಹಿಂದಿನ ಪದಗಳು ದಾಟಿಗೆ ತಾನು ಎಂಬ ಭಾವನೆಯುಳ್ಳವನಲ್ಲ. ಈಶ್ವರನು ನೀನು ಸ್ವಯಂಸಿದ್ಧಜ್ಞಾನವಿಶಿಷ್ಟನಾದ್ದರಿಂದ ನಿನ್ನಲ್ಲಿ ಆತ್ಮವಿಸ್ಮೃತಿಮೂಲಕವಾದ ಅವಿದ್ಯಾಮಾಯಾಮೋಹಗಳು ಇರುವುದಿಲ್ಲವಾದ್ದರಿಂದ ನಿನಗೆ ಮೂಲಪ್ರಕೃತಿಗುಣಗಳಲ್ಲಿ ನಾನು ಎಂಬ ಅಹಂಭಾವನ, ಮಿಥ್ಯಾಜ್ಞಾನವಿರುವುದಿಲ್ಲ. ಆವರಣವೂ ಇಲ್ಲ ವಿಕ್ಷೇಪವೂ ಇಲ್ಲ) ಆದ್ದರಿಂದಲೇ ಆತ್ಮಭಗ ಎಂಬುದು ಈಶ್ವರಸ್ವರೂಪ ವ್ಯವಸ್ಥೆಯಾಗಿದೆ. ಅಪರಿಮೇಯ ಭಗಃ = ನೀನು ಪರಿಚ್ಛಿನ್ನತ್ವ ಹೀನಭಾವವಿಲ್ಲದ, ನಿರತಿಶಯಾನಂದಾದಿ ಕಲ್ಯಾಣಗುಣಪರಿಪೂರ್ಣನಾಗಿದ್ದೀಯೆ. ಮತ್ತು ಅಷ್ಟಗುಣೇಶಃ = ಅಣಿಮಾದಿ ಅಷ್ಟಸಿದ್ಧಿಯುಕ್ತ, ಮುನೀ = ಜ್ಞಾನದೈಶ್ವರ್ಯಪ್ರಕಾಶದಲ್ಲಿ. ಮಹಾಪಾದನೀ = ಉತ್ಕೃಷ್ಟಸ್ವರೂಪಸ್ಥಿತಿಯಲ್ಲಿ ಇರುತ್ತೀಯೆ. ಮುಕ್ತನು ಹಿಂದಿನ ಸ್ಥಿತಿಯನ್ನು ಪಡೆದು ಕೃತಕೃತ್ಯನು. ಹೇಗೆಂದರೆ:- ಆತ್ಮಜ್ಞಾನವಿಲ್ಲದ ಮನುಷ್ಯನು ದೇಹಬುದ್ಧಿ ಹೊಂದಿರುವ ಈ ಪ್ರಕೃತಿವಸ್ತುಗಳಲ್ಲಿ ತನ್ನ ಸ್ವರೂಪವ (ಅಸ್ತಿ ಭಾತಿ ಪ್ರಿಯಂ)ವನ್ನು ಆರೋಪಿಸಿಕೊಂಡು ಮತ್ತು (ಅನೃತ ಜಡ ದುಃಖರೂಪದ) ದೇಹಬುದ್ಧಿಯುಳ್ಳವನಾದ ಧರ್ಮವನ್ನು ತನ್ನಲ್ಲಿ ಆರೋಪಿಸಿಕೊಂಡು ದೇಹಾದಿವಿಶಿಷ್ಟನಾಗಿರುವುದರಿಂದ ತನ್ನ ಸ್ವರೂಪವನ್ನು ಮರೆತುಕೊಂಡಿರುತ್ತಾನೆ. ಮೋಹನಿದ್ರೆಯಲ್ಲಿರುತ್ತಾನೆ ಜ್ಞಾನಸ್ವರೂಪವನ್ನು ಕಾಣುತ್ತಾನೆ ಹಿಂದಿನವನನ್ನು ಕುರಿತು ಶ್ರುತಿಗಳು ಬೋಧಿಸುತ್ತವೆ:- ಅಯ್ಯ, ಮೋಹವನ್ನು ಬಿಡು. ದೇಹ

ಮೊದಲಾದ ಉಪಾಧಿಗಳು ನನ್ನ ಸ್ವರೂಪದಲ್ಲಿ ಸೇರಿದವುಗಳಲ್ಲ. ಅವು ಪ್ರಕೃತಿ ಪರಿಣಾಮದಿಂದ ಉಂಟಾದವುಗಳು. ಅನಾತ್ಮ-ಮಿಥ್ಯಾ ಆಗಂತುಕವುಗಳು, ಉಪಾಧಿಯೇ ಬೇರೆ ನಾನೇ ಬೇರೆ. ವಿವೇಕದಿಂದ ತಿಳಿದುಕೊಳ್ಳುವ ದುರಭ್ಯಾಸವನ್ನು ಬಿಟ್ಟು ಬಿಡು. ಅಧ್ಯಾಸವಾದ ಬೇರೆ ಭ್ರಮೆಯನ್ನು ಬಿಡು. ನೀನು ಶುದ್ಧ ಪರಮಾನಂದನಿತ್ಯ. ಚೈತನ್ಯಸ್ವರೂಪ ಇರುವವನು. ಎಂದು ಉಪದೇಶಿಸಿದುದನ್ನು ಗ್ರಹಿಸಿಕೊಂಡು ಮನುಷ್ಯನು ವಿಚಿತ್ರ ಕೊಳ್ಳುವನು. ಹಾಗು ಕೃತಾರ್ಥನು-ಮುಕ್ತನೂ ಆಗುವನು. ಆದ್ದರಿಂದ ಸಂಸಾರದಿಂದ ಮುಕ್ತ ಸಂಸಾರಾತೀತಸ್ಥಿತಿ ಎಂಬುದೂ, ಏಕಾತ್ಮನೆಂಬುದೂ ಈ ಉಪದೇಶವು ಸಮಂಜಸವಾಗಿದೆ. ಮತ್ತು ಜೀವಪುರುಷನ ಸಂಸಾರಭ್ರಮೆಯನ್ನು ಕಳೆಯುವ ಮೂಲಕ ಉಪದೇಶವು ಸಾರ್ಥಕವಾಗಿದೆ.

ಮನುಷ್ಯನು ದರ್ಪದಂಭವಂಚನೆಗಳನ್ನು ವರ್ಜಿಸಿ ಮೇಲೆ ಹೇಳಿದ ಸಾಧನೆಗಳನ್ನು ಮನಃಪೂರ್ವಕವಾಗಿ ಅನುಷ್ಠಾನದಲ್ಲಿಟ್ಟುಕೊಂಡು ಪ್ರಯತ್ನ ಮಾಡದ ಬಿನಾ ನಿಃಶ್ರೇಯಃಪ್ರಾಪ್ತಿಯಿಲ್ಲೆಂದು ಹೇಳುತ್ತ ಸ್ತುತಿಸುತ್ತಾರೆ:-

ಯದಿ ನ ಸಮುದ್ಧರಂತಿ ಯತಯೋ ಹೃದಿ ಕಾಮಜಟಾಃ
ದುರಧಿಗಮೋಽಸತಾಂ ಹೃದಿಗತೋಽಸ್ಮೃತಕಂಠಮಣಿಃ।
ಅಸುತೃಪಯೋಗಿನಾಮುಭಯತೋಽಪ್ಯಸುಖಂ ಭಗವನ್
ಅನಪಗತಾಂತಕಾದನಧಿರೂಢಪದಾದ್ಭವತಃ ॥೨೬॥

ಯತಯಃ = ಸಂನ್ಯಾಸಿಗಳಾಗಲೀ ಜಿತೇಂದ್ರಿಯರಾಗಿರಲಿ ಸಾಧಕರು. ಹೃದಿ = ತಮ್ಮ ಮನಸ್ಸಿನಲ್ಲಿ ಹುಟ್ಟಿಕೊಂಡಿರುವ. ಕಾಮಜಟಾಃ = ಅನಾದಿಯಾದ ಬಳ್ಳಿಯ ಬೇರುಗಳಂತೆ ಹೆಣೆದುಕೊಂಡ ಕಾಮ ಕರ್ಮ ಜಟೋತ್ತರಗಳನ್ನು. ಯದಿ ನ

೫೬

ಸಮುದ್ರದಂತೆ = ಮಹಾಸಮುದ್ರಕ್ಕೆ ಬಿಸಾಡಿದ್ದರೆ ಅವರ ಕರ್ಮಗಳಿಗೆ ಹೋಗುತ್ತಾರೆ. ಅನಲಂ = ಅಂತರ ಕ್ಷೀಣವಾಗಿ. ದ್ರುತಗತಿ: = ತೀವ್ರ ವೇಗದ ಮಂದಿರದಲ್ಲಿ ಇರುವ ನೀನು ಪರಮಾತ್ಮನು. ಅಸ್ತ್ರ ತೀಕ್ಷ್ಣತಮ ನಖ: = ತನ್ನ ಕತ್ತಿಗೆಯಲ್ಲಿ ಧರಿಸಿದ ರತ್ನವನ್ನು ಮರೆತು, ಅದು ಕಳೆದುಹೋಗಿದೆ ಎಂದು ಹುಡುಕು ಹೋಗುತ್ತಿರುವ, ಪುರಾಣ ಕೇಳುತ್ತಿರುವ ಮನುಷ್ಯನಿಗೆ ^[ಅಪ್ರಯೋಜಕವಾದ] ಆ ರತ್ನವು ಹೇಗೆ ಪ್ರಯೋಜನ ಬಾರದೋ ಹಾಗೆಯೇ. ಮದಧಿಗಮ: = ನನ್ನ ಜ್ಞಾನವಿಲ್ಲ. ಸಂಭೋಗವನ್ನ ಅನುಭವಿಸಲಾಗುವ = [illegible] [illegible] ಗಳನ್ನು ಅನುಭವಿಸುವ ಸಂಸಾರದ ಅಂತರ ಕರ್ಮಗಳಿಗೆ. ಉಭಯತ: ಉ-ಪಿ = ಇರು ಬದಿಗಳಿಂದಲೂ (ಪ್ರಾರಬ್ಧ ಪುಣ್ಯದಿಂದ ಕರ್ಮಗಳಿಂದಲೂ ಬಾರದ್ದರಿಂದ ಇರು ಸಂಸಾರದ ಬಾಧೆಯಿಲ್ಲ. ಪುಣ್ಯ ಸಂಪಾದನೆ ಮಾಡುವುದಿಲ್ಲವಾದ್ದರಿಂದ ಪರಲೋಕದಲ್ಲಿ ಸುಖವಿಲ್ಲ.) ಅವರಿಗೆ, ಅನುಬಂಧವ = ಕೇವಲ ದುಃಖ ಪ್ರಾಪ್ತಿಯಾಗುತ್ತದೆ. ಪರಂತಪ: ಅನವರತಗಾಂತರಾತ್ = ಮೃತ್ಯುವಿನ ಮತ್ತು ಜನನ ಮರಣ ರೂಪವಾದ ಅಧಃಪತನಕ್ಕೆ ಬೀಳಲು ದಾರಿಯಿಲ್ಲವಾದ್ದರಿಂದಲೂ, ಭವತ: ಅನಧಿಗತಪದಾತ್ = ^[ತನ್ನ ಜ್ಞಾನ ಸ್ವರೂಪ] ನಿನ್ನ ಪರಂಧಾಮವಾದ ಶ್ರೀಕೃಷ್ಣ ಸ್ಥಾನವನ್ನು ಪಡೆಯುವುದಿಲ್ಲವಾದ್ದರಿಂದ ಮತ್ತು ಕಷ್ಟಕರವಾಗಿ ಹರಿಯುವುದರಿಂದ ಈ ಕಾರಣಗಳಿಂದ ಕರ್ಮಗಳು ಎರಡು ಕಡೆ ನಾನಾ ಭಯಗಳಿಗೆ ಒಳ ಆಗುತ್ತಾರೆ. ಮತ್ತೆ ಅಂತ ಭಯಗಳು ಹರಿಯುತ್ತವೆ ಎಲ್ಲೆಂದರೆ :-

ಕ್ಷೇತ್ರ ದೇವಗಣಾ ನ ಮೃತ್ಯು ಭಯಾದ್ಯಾಃ ಭಾಗಾಭಯಾಃ
ಗುಣಾಲಿಂಗನಾಗ್ರಯಾನ್ ತೇಷಾಂ ಪ್ರದಾತ್ಸ್ಯಾಂ ಹರ: ।
ಅನುಪಯನ್ನಾಂ ಸಹಿಷ್ಣಾ ಸಂತರಂತಂ ತರಾ ।

ಶ್ರೀಮನ್ನಾಥಭೃತ್ಯೈಃ ಯತ್ನಾದುಪಾದೇಯಗತಿರ್ಮನುಜ್ಞೈಃ ॥ ೧೨ ॥

ಹೇ ಸುಗುಣ = ಅನಂತಕಲ್ಯಾಣಗುಣ ಪರಿಪೂರ್ಣನಾದ ಪರಮಾತ್ಮ, ತ್ವದವಗಮಾ = ತತ್ತ್ವವಿಚಾರದಿಂದ ನಿನ್ನನ್ನು ಅಪರೋಕ್ಷಮಾಡಿಕೊಂಡಿರುವ ಜ್ಞಾನಿಯು, ಭವದುಪಾತ್ತ ಶುಭಾಶುಭವಾರ್ತಿಃ = ಕರ್ಮಫಲದಾತೃವಾದ ನಿನ್ನಿಂದ ನೀಡಲ್ಪಟ್ಟ (ಧರ್ಮಾಧರ್ಮಮೂಲಕವಾದ) ಶುಭಾಶುಭ ಫಲಗಳು. ಸುಖದುಃಖಾನ್ಯಯಾನ್ = ಅನಿವಾರ್ಯ ಸುಖದುಃಖವೆಂಬ ನಾನಾ ಭೋಗಗಳನ್ನು. ನ ಯಾತಿ = ವಿಶೇಷರೂಪದಿಂದ ಪಡೆಯುವುದಿಲ್ಲ. ಅಂದರೆ ಸುಖವಾಗಲೀ ದುಃಖವಾಗಲೀ ಒದಗಿಬಂದರೆ ಉಬ್ಬದೆ ಕುಗ್ಗದೆ (ಸಮಚಿತ್ತನಾಗಿ) ಅನುಭವಿಸುತ್ತಾನೆ. ಯಥಾಪ್ರಾಪ್ತವನ್ನು ಅನುಭವಿಸುತ್ತಿರುತ್ತಾನೆ. ತಥಾ ಚ = ಅಂತಹ ಜ್ಞಾನಿಯು ಶಾಂತಿ ಸಮಾಧಾನ ಸಿದ್ಧವಾಗಿರುವುದರಿಂದಲೇ. ದೋಷಭೃತಾಂ ಗಿರಃ ನ ಯಾತಿ = ದೋಷವುಳ್ಳ ಮನುಷ್ಯರ ಪುರಸ್ಕಾರ ತಿರಸ್ಕಾರದ ಮಾತುಗಳನ್ನು ಮತ್ತು ವಿಧಿನಿಷೇಧ ರೂಪ ಶಾಸ್ತ್ರವಚನಗಳನ್ನು ಸಹ (ಅಂತಹ ಜ್ಞಾನಿಯು) ಗಣನೆಗೆ ತೆಗೆದುಕೊಳ್ಳುವುದಿಲ್ಲ. ಅಂದರೆ:- ಯಾವುದರಲ್ಲೂ ಅಭಿಮಾನವಿಲ್ಲದೆ ಕಾರ್ಯಕಾರಣಭಾವವನ್ನರಿತಿರುವಂತಹವನು ಶಾಸ್ತ್ರಕ್ಕೂ ವಿಷಯನಾಗಿರುವುದಿಲ್ಲ. ಇಷ್ಟು ತತ್ತ್ವಜ್ಞಾನಿಗಳನ್ನು ಪ್ರಶಂಸಿಸಿ ಹೇಳಿದ್ದು. ಹಾಗೆಯೇ ಏಕಾಂತಭಕ್ತರು ಕೂಡ ವಿಧಿನಿಷೇಧ ಶಾಸನಗಳಿಗೆ ಹೊರತಾದವರು ಎಂಬುದನ್ನು ಹೇಳುತ್ತಾರೆ:- ತ್ವಂ = ನೀನು. ಅನುಯುಗಂ = ಪ್ರತಿಯುಗಗಳಲ್ಲಿಯೂ ಅವತಾರಮಾಡಿದ, ನ್ಯಾಯಮಾಡಿದ ಮತ್ತು ತತ್ತ್ವೋಪದೇಶ ಮಾಡಿದ ಕಥೆಯನ್ನು, ಮನುಜ್ಞೈಃ ಗೀತವಾದಿರಂಗ = ಭಕ್ತಜನಗಳ ಮೂಲಕ ಸಂಪ್ರದಾಯ ಕ್ರಮವನ್ನನುಸರಿಸಿ ಭಜನ ಕೀರ್ತನ ಶ್ರವಣ ಮುಂತಾದ ರೀತಿಯಿಂದ. ಅನ್ವಹಂ = ಪ್ರತಿದಿನ ತಪ್ಪದೆ, ಶ್ರೀಮನ್ನಾಥಭೃತ್ಯೈಃ = ನೀನು ಯಾರ ಕೈಬಿಡದ್ದಲ್ಲ ಎನ್ನದಲ್ಲ ಪೂಜಿಸುವೆಯೋ ಅಂತಹ ಭಕ್ತರು ಕೂಡ ಶಾಸ್ತ್ರವಚನ

~~[illegible]~~

[illegible] = [illegible] ಫಲವನ್ನು [illegible] = [illegible]
[illegible] ... ಹಾಗಿಲ್ಲದೆ [illegible] ... ಇಲ್ಲ ... ಇಲ್ಲ. [illegible]
[illegible] ಅರ್ಥವನ್ನು ಸಮರ್ಥಿಸಲಾಗಿದೆ.

[illegible]
[illegible]
[illegible]
[illegible]
[illegible] "ಸತ್ಯಂ ಜ್ಞಾನಂ [illegible] ಬ್ರಹ್ಮ" [illegible]
[illegible] "[illegible] ನೇತಿ ನೇತಿ [illegible]" [illegible]
[illegible]

[illegible] ಏವ ತೇ ನ [illegible]।
[illegible] ನ ನ [illegible]ಃ।
[illegible]
[illegible] ಫಲಂ [illegible] ಭವನ್ನಧನಾಃ ॥೩೮॥

[illegible] = [illegible]
[illegible] = ನಿನ್ನ [illegible] - ನಿನ್ನ [illegible]
[illegible] ನಿನ್ನ [illegible] = [illegible]

ಹೊಂದಿರುವುದು ಇಲ್ಲ. ಯಾವ ಯಾವ ವಸ್ತುವು ಅಂತ್ಯವುಳ್ಳದ್ದೋ ಅದು ಒಂದು ವಸ್ತುವು ನೀನಲ್ಲ. ಅದು ನಿನ್ನ ನಿಜಸ್ವರೂಪವಾಗಿರುವುದಿಲ್ಲ. ಅನಂತತಯಾ = ಹೀಗೆ ನಿರಂತರಾಕಾರನಾಗಿರುವುದರಿಂದಲೇ, ತ್ವಂ ಅಸಿ = ನೀನು ಇರುವೆ. ನಿನ್ನ ಅಂತ್ಯವನ್ನು ಕಾಣಲಶಕ್ಯನಾಗಿಲ್ಲ. ಇದರಿಂದ ನಿನ್ನ ಸರ್ವಜ್ಞತ್ವಕ್ಕೂ ಸರ್ವಶಕ್ತತ್ವಕ್ಕೂ ಚ್ಯುತಿಯೇನೂ ಇಲ್ಲ. ಏಕೆಂದರೆ ಮೊಲದ ಕೊಂಬನ್ನು ನೋಡದಿರುವುದು ಅಥವಾ ತಿಳಿಯದುದು ಅದೇನೂ ನ್ಯೂನತೆಯಲ್ಲ. ಇರುವುದನ್ನು ಅರಿಯದಿದ್ದರೆ ಅದು ಕುಂದು ಎಂದು ಭಾವಿಸಬಹುದು. ಇಲ್ಲದ್ದನ್ನು ಅರಿಯದುದು ಪಡೆಯದುದು ಕುಂದಲ್ಲ. ನಿನ್ನ ಅನಂತ್ಯದ ಬಗೆಯೇನೆಂದರೆ:- ಯತ್ ಅಂತರಾ = ಯಾವ ನಿನ್ನ ಜಠರದ ಮಧ್ಯದಲ್ಲಿ. ಸಹ = ಅಹೋ ಅದ್ಭುತ. ಸಾವರಣಾಃ ಅಂಡನಿಚಯಾಃ = ಸಪ್ತ ಸಪ್ತ ಆವರಣಗಳಿಂದ ಪರಿವೇಷ್ಟಿತಗಳಾದ ಅನೇಕ ಬ್ರಹ್ಮಾಂಡಗಳು ಖೇ = ಆಕಾಶದಲ್ಲಿ. ರಜಾಂಸಿ ಇವ = ಧೂಳಿನ ಕಣಗಳಂತೆ, ವಯಸಾ = ಕಾಲಚಕ್ರದೊಡನೆ, ಸಹ = ಒಟ್ಟಿಗೆ, ಒಂದಾದ ಮೇಲೆ ಒಂದರಂತೆ ಅಲ್ಲ. ಒಟ್ಟೊಟ್ಟಿಗೆ. ಯಾಂತಿ = ತಿರುಗುತ್ತಿವೆ. [illegible] ಭ್ರಮಿಸಿಕೊಂಡಿವೆ. ಯತ್ ತವ = ಯಾವ ಕಾರಣದಿಂದ ವಸ್ತುಸ್ಥಿತಿಯು ಹೀಗಿರುವುದೋ ಅದರಿಂದಲೇ, ಶ್ರುತಯಃ = ವೇದಗಳು. ಫಲಂತಿ = ತಾತ್ಪರ್ಯವೃತ್ತಿಯಿಂದ ನಿನ್ನನ್ನು ಪ್ರತಿಪಾದನೆ ಮಾಡುತ್ತ ಪರ್ಯವಸಾನಗೊಳ್ಳುತ್ತಿವೆ. ಅಭಿಧಾ ಎಂಬ ಶಬ್ದಶಕ್ತಿಯಿಂದ ಅವೇದ್ಯನಾಗಿರುವ ನಿನ್ನನ್ನು ನೇರವಾಗಿ ಇವನೇ ಪರಮಾತ್ಮನು ಎಂದು ನಿರ್ದಿಷ್ಟವಾಗಿ ಹೇಳುವುದಿಲ್ಲ. ಲಕ್ಷಣಾ ಎಂಬ ಶಬ್ದಶಕ್ತಿಯಿಂದ ನಿನ್ನನ್ನೇ ಪ್ರತಿಪಾದನೆ ಮಾಡುವುವು. ಏಕೆಂದರೆ:- ಸಗುಣಾತ್ಮನು ಅನಂತ ಕಲ್ಯಾಣಗುಣಪರಿಪೂರ್ಣನಾಗಿರುವುದರಿಂದಲೂ, ನಿರ್ಗುಣಾತ್ಮನು ವಾಗಗೋಚರ - ಅಪ್ರಮೇಯನಾಗಿರುವುದರಿಂದಲೂ

ಪದವಾಕ್ಯವಲ್ಲ; ಆತ್ಮನು ಪದವಾಕ್ಯನಾಗದೆ ಪದಾರ್ಥನಾಗದ ಪ್ರಯುಕ್ತ ವಾಕ್ಯಾರ್ಥರೂಪನು ಆಗಲಾರನಲ್ಲ ಎಂದಾಯಿತು. ಆ ಪದಾರ್ಥ ವಾಕ್ಯಾರ್ಥ ರೂಪದ ಆತ್ಮನಲ್ಲ ವೇದದ ತಾತ್ಪರ್ಯವಿಲ್ಲದ್ದರಿಂದ ಹೇಗೆ ತಿಳಿಯುವುದು? ವಾಕ್ಯಕ್ಕೆ ಮುಖ್ಯದಲ್ಲ, ತಾತ್ಪರ್ಯವೇ! ಆ ವಸ್ತುವು ಮುಖ್ಯವಾದದರಿಂದ ಪದಕ್ಕೆ ವಾಕ್ಯವಾಗಲಾರದ ಹೊರಟು ಪದವಾಕ್ಯಪ್ರಮಾಣಜ್ಞರ ವ್ಯವಸ್ಥೆ ಮಾಡಿದ್ದಾರಲ್ಲವೇ! ಎಂದರೆ:- ವಿಧಿರೂಪವಾಕ್ಯಗಳಿಗೆ ಆ ನಿಯಮವುಂಟು. ನಿಷೇಧರೂಪ ವಾಕ್ಯಗಳಿಗೆ ಆ ನಿಯಮವು ಅನ್ವಯಿಸುವುದಿಲ್ಲ. ಅದ್ದರಿಂದಲೇ ಶ್ರುತಿಯು ಸತ್ಯಂ ಜ್ಞಾನಂ ಇತ್ಯಾದಿ ವಿಧಿರೂಪವಾಕ್ಯಗಳಿಂದ ಪರಮಾತ್ಮನನ್ನು ಪ್ರತಿಪಾದನೆಮಾಡಿ ಹಾಗೂ ಶ್ರುತಿಯಲ್ಲಿಯೇ "ಅಶಬ್ದಮಸ್ಪರ್ಶಂ. ನೇತಿ ನೇತ್ಯಾತ್ಮಾ" ಇತ್ಯಾದಿ ನಿಷೇಧರೂಪವಾಕ್ಯಗಳಿಂದ ಮುಕ್ತಾಯವಾಗಿದೆ. ಅವಸ್ಥಾರೂಪನು = ಇದು ಆತ್ಮನಲ್ಲ. ಆತ್ಮನು ಅದಲ್ಲ. ಎಂದು ಅನಾತ್ಮವಸ್ತುಗಳನ್ನು ಅನಾತ್ಮಧರ್ಮಗಳನ್ನು ಅಲ್ಲಗಳೆಯುತ್ತಾ. ಭಾವಸ್ವರೂಪನು:- ನಿನ್ನಲ್ಲಯೇ ಅದ್ವೈತನಾಗಿರುತ್ತೀ. ಇದರ ತಾತ್ಪರ್ಯವನ್ನು ಹೇಳಿ ಮತ್ತು ಮುಕ್ತಾಯಗೊಳಿಸಿದೆ. ಕಾರ್ಯಕಾರಣಭಾವದಿಂದ ಎದ್ದುಕಾಣುತ್ತಿರುವ ಪ್ರಪಂಚದ ಆಧಿಭೌತಿಕಸೃಷ್ಟಿ, ಅವ್ಯಕ್ತಮಹದಹಂಕಾರಾದಿ ಆಧ್ಯಾತ್ಮಿಕಸೃಷ್ಟಿ, ನಾಮರೂಪಾತ್ಮಕವಾದ ಆಕಾಶಾದಿ ಆಧಿಭೌತಿಕಸೃಷ್ಟಿಯನ್ನು ಅಂದರೆ ವಿಶ್ವವನ್ನು ಕಾರ್ಯರೂಪವಾಗಿ ಕಲ್ಪಿಸಿ, ಹಾಗೂ ಅಧ್ಯಾರೋಪ ನ್ಯಾಯದಿಂದ ನಿರೂಪಿಸಿ, ಇದರಲ್ಲಿ ಶ್ರುತಿಯಲ್ಲಿಯೇ ಅಂತ್ಯದಲ್ಲಿ ನೇತಿ ನೇತ್ಯಾತ್ಮಾ ಎಂದು ನಿಷೇಧ ಅಂದರೆ ಅಪವಾದ ನ್ಯಾಯಕ್ರಮದಿಂದ ಪರಮಾತ್ಮವಸ್ತುವನ್ನೇ ಉಳಿಸಿಕೊಂಡಿದೆ. ಹಾಗೆಯೇ ಮನಕ್ಕೂ ಇದು ನನ್ನ ಆತ್ಮನಲ್ಲ. ಇದು ನಾನಲ್ಲ ಎಂದು ದೇಹಾದಿ ಅವ್ಯಕ್ತಪರ್ಯಂತ

ಅಪ್ರಮಾದವಾಗಿ ಹೋರಾಡುತ್ತ ಬಂದರೆ ಕೊನೆಯಲ್ಲಿ ಎಲ್ಲವನ್ನು ಗೆದ್ದು ಹೋರಾಳ್ದ ತಾನೇ - ಆತ್ಮನೇ ಉಳಿದು ಕೊಳ್ಳುವನು. ಹೀಗೆ ಮಾಡುವ ಪ್ರತ್ಯಗಾತ್ಮನಲ್ಲಿ ಅನಾತ್ಮಸ್ವರೂಪವನ್ನು ಅನಾತ್ಮಧರ್ಮಗಳನ್ನು ಮತ್ತು ತದ್ವಿಷಯಕವಾದ ಜ್ಞಾನಗಳನ್ನು ಇಲ್ಲಗೊಳಿಸುತ್ತ ಶುದ್ಧ ಚಿದಾನಂದಸ್ವರೂಪದಲ್ಲಿ ನೆಲೆನಿಲ್ಲುವಂತೆ ಮನುಷ್ಯನಿಗೆ ಸಹಾಯ ಮಾಡುತ್ತದೆ. ಪ್ರಮಾಣವಾಗಿರುತ್ತದೆ.

ಬ್ರಹ್ಮಜ್ಞನು ಶರೀರ ಜೀವನ್ಮುಕ್ತನು ಅವಿದ್ಯೆಯಿಂದ ನಾನು ಕರ್ತ ಭೋಕ್ತಾ, ಸುಖೀ ದುಃಖೀ ಸಂಸಾರೀ ಎಂಬ ಅನಾತ್ಮಸ್ವರೂಪವನ್ನು ಅನಾತ್ಮಧರ್ಮಗಳನ್ನು ಸುತ್ತ ಸುಟ್ಟು ತನ್ನಲ್ಲಿ ಆರೋಪಮಾಡಿಕೊಂಡಿರುತ್ತಾನೆ. ಅಧ್ಯಾಸದಿಂದ ಭ್ರಾಂತಿಯಿಂದ ಇರುತ್ತಾನೆ. ಹೀಗೆ ಅಧ್ಯಾಸಮಾಡಿಕೊಂಡ ವಸ್ತುಗಳೂ ಮತ್ತು ಧರ್ಮಗಳೂ ವಾಸ್ತವದಲ್ಲಿ ಹುಟ್ಟಿ ಇಲ್ಲ, ನಾಶವೂ ಇಲ್ಲ; ಅವುಗಳೊಂದಿಗೆ ನಿಜಾತ್ಮನೊಡನೆ ಅವಕ್ಕೆ ಸಂಬಂಧವುಂಟಾಗಿರುವುದಿಲ್ಲ. ಹೇಗೆಂದರೆ:- ದೃಷ್ಟಿದೋಷವುಳ್ಳವನು ಎರಡು ಚಂದ್ರಮಂಡಲಗಳನ್ನು ಕಾಣುತ್ತಾನೆ. ಆಗ ಇಲ್ಲದ ಎರಡನೆಯ ಚಂದ್ರನು ಹುಟ್ಟುವುದಿಲ್ಲ. ಆ ಮನುಷ್ಯನು ದೃಷ್ಟಿದೋಷ ನಿವೃತ್ತಿಮಾಡಿಕೊಂಡು ನೋಡಿದರೆ ಒಬ್ಬ ಚಂದ್ರನೇ ಕಾಣುವನು. ಆಗ ಎರಡನೆಯ ಚಂದ್ರನು ನಾಶಹೊಂದುವುದಿಲ್ಲ. ಹಾಗೆಯೇ ಇದು. ಸ್ವರೂಪಾಜ್ಞಾನಸ್ಥಿತಿಯಲ್ಲಿ ಮಾಯಾಕಲ್ಪಿತವನ್ನು ದರ್ಶನಮಾಡುತ್ತಾ, ನಿಜಾತ್ಮನಲ್ಲಿ ಅಧ್ಯಾಸಮೂಲಕವಾಗಿ ಅನಾತ್ಮಸ್ವರೂಪಧರ್ಮಗಳನ್ನು ಆರೋಪಮಾಡಿಕೊಂಡಿದ್ದರೂ ವೇದಪ್ರಮಾಣದಿಂದ ಸಮ್ಯಗ್ದರ್ಶನವೆಂಬ ಪ್ರಬೋಧಮಾಡಿಕೊಂಡಾಗ, ಮಾಡಿದ ಅವಿದ್ಯಾಕಲ್ಪಿತಗಳಾದ ಮಿಥ್ಯಾ ಮೋಹ ಮೋದನಾದಿ ಭೇದಗಳನ್ನು ಕಳೆದುಕೊಂಡು ಸ್ವಯಂಜ್ಯೋತಿ ಸ್ವರೂಪಾನುಭವವನ್ನು ಪಡೆಯುವನು. ॥ ೬:೧ ॥

ಶ್ರೀ ನಾರಾಯಣನಲ್ಲಿ ನಿರುಪಾಧಿಕ ವಿಶ್ವರೂಪವನ್ನು ಸಂಗ್ರಹಿಸುತ್ತಾ

ಪರಮಾತ್ಮನನ್ನು ಕುರಿತ ಸ್ತೋತ್ರ:

ಯೋऽಸ್ಯೋತ್ಪತ್ತಿಹೇತುರಭಿನ್ನನಿಧನೋ ಯೋऽಸ್ಯೋತ್ಪತ್ತಿಜೀವೋತ್ಕರೋ ಯಃ
ಯಃ ಸ್ವೇಚ್ಛಯಾ ಸಂಪ್ರಾಪ್ಯ ವಿಶ್ವಂ ಶಕ್ತ್ಯಾ ಸ್ಥಿತಃ ಶಾಸ್ತಾ ಸಃ ।
ಯಂ ಸಂಪ್ರಾಪ್ಯ ಪ್ರಾಣಾ ಜೀವಾ ಮುಕ್ತಾಃ ಸುಪುತ್ರಾಃ ಪ್ರಾಪ್ಯಂ ಯತ್ಪದಂ
ತಂ ದೇವಂ ನಿರಸ್ತಾಖಿಲಾಭಯಂ ಧ್ಯಾಯೇ ಪರಮಂ ಪದಂ ॥

ಯಃ ಅಸ್ಯ ಉತ್ಪತ್ತಿಹೇತುಃ = ಯಾವನು ಈ ಪ್ರಪಂಚದ ಉತ್ಪತ್ತಿಗೆ ಸಾಕ್ಷಿಯಾಗಿರುವನು ಅಂದರೆ ಇದನ್ನು ಸೃಷ್ಟಿಸುವನು ಎಂದು ಸಂಕಲ್ಪಿಸುತ್ತ ಪ್ರೇರಕನಾಗಿ ಇರುವುದರಿಂದ ಉಂಟುಮಾಡುತ್ತಾನೆಯೋ (ನಿಮಿತ್ತಕಾರಣ)

ಯಃ ಅಭಿನ್ನನಿಧನಃ = ಯಾವನು ಇದರ ಪ್ರಳಯದಲ್ಲೂ ಮತ್ತು ಉತ್ಪತ್ತಿಯಲ್ಲೂ ಇರುತ್ತಾನೆಯೋ, ಅಂದರೆ ಪ್ರಪಂಚ ಕಾರ್ಯದ ಪ್ರಳಯದಲ್ಲೂ ಉಪಾದಾನಕಾರಣವಾಗಿದ್ದು, ಮತ್ತು ಸ್ಥಿತಿಕಾಲದಲ್ಲೂ ರಕ್ಷಣೆಮಾಡುತ್ತ ಉತ್ಪತ್ತಿಯಲ್ಲೂ ಕಾರ್ಯ ಅವನಿಂದಾಗ ತನ್ನಲ್ಲೇ ಲಯಗೊಳಿಸಿಕೊಂಡು ತಾನು ಮಾತ್ರ ಇದ್ದೇ ಇರುತ್ತಾನೆಯೋ (ಉಪಾದಾನ ಕಾರಣ) (ಹೀಗೆ ಈ ಪ್ರಪಂಚ ಕಾರ್ಯಕ್ಕೆ ಅಭಿನ್ನ ನಿಮಿತ್ತೋಪಾದಾನ ಕಾರಣ ಎಂದಾಯಿತು)

ಯಃ ಉತ್ಪತ್ತಿ ಜೀವೋತ್ಕರಃ = ಯಾವನು ಎಲ್ಲಾ ಸಮಸ್ತ ಜೀವರಾಶಿ ಉತ್ಪತ್ತಿಯಾಗಿದ್ದಾನೆಯೋ, ಅಂದರೆ ಚರಾಚರಾತ್ಮಕವಾದ ಪ್ರಪಂಚ ರೂಪದಿಂದ ತಾನೇ ಅಭಿವ್ಯಕ್ತಿಗೊಂಡು ಈ ಸಮಸ್ತಕ್ಕೂ ಒಡೆಯನಾಗಿಯೂ ಮತ್ತು ನಿಯಾಮಕನಾಗಿಯೂ ಆಗಿದ್ದಾನೆಯೋ. (ಹೀಗೆ ಜೀವರೂಪದಿಂದ ಅಭಿವ್ಯಕ್ತನಾಗಿ ಬೇರೆ ಬೇರೆಯಾಗಿ ಸಮಸ್ತಪ್ರಾಣಿಗಳ ಜೀವನದ ಮೂಲ ಆಗಿರುವನಂತೆ)

ಯಃ : ಇದಂ ಸ್ಮೃತ್ವಾ = ಯಾವನು ಈ ವಿಶ್ವವನ್ನು ಸ್ಮರಿಸುತ್ತಾನೆ (ಇದು
ನಿರಂತರವಾಗಿದ್ದರೆ ಶ್ರೇಯಸ್ಸು ಪ್ರಾಪ್ತವಾಗುವುದು ಎಂಬರ್ಥ)

ಭಕ್ತಿಮಾನ್ ಸನ್ ಅನುಕ್ರಮೇಣ = ಭಕ್ತಿಯಿಂದ ಸಂಪಾದಿಸುವನು ತಾನೇ ಸಕಲ ಸಾಧನ
ಸಂಪತ್ತುಗಳನ್ನು ಪ್ರಯತ್ನದಿಂದ ಗಳಿಸುತ್ತಾನೆಯೋ,

ಪ್ರಾಪ್ನೋತಿ = ಸಕಲ ಸಾಕ್ಷಾತ್ಕಾರದಿಂದ [illegible] (ಜೀವರು ದೇವರನ್ನು [illegible]
ಮುಕ್ತಿ [illegible] ಪಡೆಯುತ್ತಾನೆ) ಸ್ವೀಕರಿಸುತ್ತಾನೆ,

ಯಃ ತಾಃ ಶ್ರುತ್ವಾ = ಯಾವನು ಪಕ್ಷಪಾತರಹಿತನಾಗಿ [illegible] ವಚನವನ್ನು
ರಕ್ಷಿಸುತ್ತಾನೆ ಶ್ರವಿಸುತ್ತಿರುವವನೋ, ಅವನು ಜೀವರಿಗೆ ವಿಷಯ [illegible] ತ್ತಾ
ನೆಲೆಯನ್ನು ಪಾಲಿಸುತ್ತಾ, ತಾನು ಮಾತ್ರ ವಿಷಯಗಳನ್ನು ಭುಂಜಿಸದೆ ಇರುವ
[illegible] ನಿರಂತರ ಸಾಕ್ಷಿ ಮಾತ್ರನಾಗಿರುತ್ತಾನೋ, ಅವನೇ ಪರಮಾತ್ಮನಾಗಿರುತ್ತಾನೆ.

ಇಂತಹ ಪರಮಾತ್ಮನನ್ನು ಅವನ ಮಹಿಮೆಯನ್ನು ತಿಳಿದು
ಯಾರು ಮಾನಸದಲ್ಲಿ ಅವನನ್ನು ಅನುಸರಿಸುತ್ತಾ [illegible]
ಮತ್ತು ಭಕ್ತಿಯಿಂದ ಭಜಿಸುತ್ತಾನೆಯೋ, ಅಂತಹ ಸಾಧಕನು ಮೋಕ್ಷವೆಂಬ
ಶ್ರೇಷ್ಠ ಪದವನ್ನು ಹೊಂದುವನೆಂದು ಹೇಳುತ್ತಾರೆ.

ಯಂ ಸಂಪದ್ಯ = ಯಾವನನ್ನು [illegible] ಸೇರಿಕೊಂಡಾಗ, ಅನುಶಯಃ =
ಈ ಜೀವಪ್ರಪಂಚ (ಅನಾದಿ ವಿಶ್ವ ನಾದವನ್ನು [illegible]
ಪರಮ ಪ್ರೇಮದಿಂದ ಭಜಿಸಿಕೊಂಡಿರತಕ್ಕವನು)

ಆತ್ಮಂ ಜಹಾತಿ = ಸಂಸಾರ [illegible] ಮಾಯಾ ಬದ್ಧತೆಯನ್ನು [illegible]
ತ್ತಾನೆ [illegible], ಹೇಗೆಂದರೆ :- ಸುಪ್ತಃ ಶಯಾನಂ ಯಥಾ = ಮಲಗಿದ್ದ ಹೊಂದುವನು
ಈ ಶರೀರವನ್ನು ಹೇಗೆ ಬಿಡುವನೋ (ನಿದ್ದೆಯಲ್ಲಿರುವಾಗ [illegible] ನಾನು ಎಂಬ

[illegible]

[illegible] ಎಂಬ ಅರ್ಥ [illegible] ನಿರಂತರವಾಗಿ

ಧ್ಯಾಯೇತ್ = ಧ್ಯಾನಿಸಬೇಕು. ನಮಸ್ಕರಿಸಬೇಕು. ಇತ್ಯರ್ಥಃ ॥

———— ೦ ————

ಭರ್ಗೋ ದೇವಸ್ಯ ಧೀಮಹಿ ಮಂತ್ರವ್ಯಾಖ್ಯಾ —

ದೇವಸ್ಯ ಜ್ಯೋತಮಾನಸ್ಯ, ವಿಜಿಗೀಷೋಃ, ದ್ಯೋತಮಾನಸ್ಯ, ಮೋದಮಾನಸ್ಯ ವಾ [illegible] ಪರಮಾತ್ಮನಃ । ಭರ್ಗಃ ಧೀಮಹಿ । ಭರ್ಗ ಇತಿ —

ಕಾಲಾಗ್ನಿರೂಪಮಾಸ್ಥಾಯ ಸಪ್ತಾರ್ಚಿಸ್ಸಪ್ತರಶ್ಮಿಭಿಃ ।
ಭ್ರಾಜತೇ ತತ್ಸ್ವರೂಪೇಣ ತಸ್ಮಾದ್ಭರ್ಗಸ್ಸ ಉಚ್ಯತೇ ॥

ಇತ್ಥಂ ಚ ರುದ್ರಾತ್ಮಕಂ ಪರಬ್ರಹ್ಮತೇಜಃ ಧೀಮಹ್ಯರ್ಥಃ ।
ಅತ್ರ ಭಕಾರ ರೇಫ ಗಕಾರಾಣಾಂ ಚ ಪೃಥಗರ್ಥನಿರ್ವಚನಂ ಕೃತಮಸ್ತಿ —

ಭೇತಿ ಭಾಸಯತೇ ಲೋಕಾನ್ ರೇತಿ ರಂಜಯತೇ ಪ್ರಜಾಃ ।
ಗೇತ್ಯಾಗಚ್ಛತ್ಯಜಸ್ರಂ ಭರಗೋ ಭರ್ಗ ಉಚ್ಯತೇ ॥ ಇತಿ

ಭಾಗವತೇ ೧೧ ಸ್ಕಂಧೇ ೩ ಅಧ್ಯಾಯೇ

ರಾಜಾ ನಿಮಿರುವಾಚ

ನಾರಾಯಣಾಭಿಧಾನಸ್ಯ ಬ್ರಹ್ಮಣಃ ಪರಮಾತ್ಮನಃ ।
ನಿಷ್ಠಾಮರ್ಹಥ ನೋ ವಕ್ತುಂ ಯೂಯಂ ಹಿ ಬ್ರಹ್ಮವಿತ್ತಮಾಃ ॥

ಪಿಪ್ಪಲಾಯನ ಉವಾಚ -

ಸ್ಥಿತ್ಯುದ್ಭವಪ್ರಲಯಹೇತುರಹೇತುರಸ್ಯ
ಯತ್ ಸ್ವಪ್ನಜಾಗರಸುಷುಪ್ತಿಷು ಸದ್ ಬಹಿಶ್ಚ ।
ದೇಹೇಂದ್ರಿಯಾಸುಹೃದಯಾನಿ ಚರಂತಿ ಯೇನ
ಸಂಜೀವಿತಾನಿ ತದವೇಹಿ ಪರಂ ನರೇಂದ್ರ ॥

ನೈತನ್ಮನೋ ವಿಶತಿ ವಾಗುತ ಚಕ್ಷುರಾತ್ಮಾ
ಪ್ರಾಣೇಂದ್ರಿಯಾಣಿ ಚ ಯಥಾನಲಮರ್ಚಿಷಃ ಸ್ವಾಃ ।
ಶಬ್ದೋಽಪಿ ಬೋಧಕನಿಷೇಧತಯಾಽಽತ್ಮಮೂಲಂ
ಅರ್ಥೋಕ್ತಮಾಹ ಯದೃತೇ ನ ನಿಷೇಧಸಿದ್ಧಿಃ ॥

ಸತ್ತ್ವಂ ರಜಸ್ತಮ ಇತಿ ತ್ರಿವೃದೇಕಮಾದೌ
ಸೂತ್ರಂ ಮಹಾನಹಮಿತಿ ಪ್ರವದಂತಿ ಜೀವಂ ।
ಜ್ಞಾನಕ್ರಿಯಾರ್ಥಫಲರೂಪತಯೋರುಶಕ್ತಿ
ಬ್ರಹ್ಮೈವ ಭಾತಿ ಸದಸಚ್ಚ ತಯೋಃ ಪರಂ ಯತ್ ॥

ನಾತ್ಮಾ ಜಜಾನ ನ ಮರಿಷ್ಯತಿ ನೈಧತೇಽಸೌ
ನ ಕ್ಷೀಯತೇ ಸವನವಿದ್ ವ್ಯಭಿಚಾರಿಣಾಂ ಹಿ ।
ಸರ್ವತ್ರ ಶಶ್ವದನಪಾಯ್ಯುಪಲಬ್ಧಿಮಾತ್ರಂ
ಪ್ರಾಣೋ ಯಥೇಂದ್ರಿಯಬಲೇನ ವಿಕಲ್ಪಿತಂ ಸತ್ ॥

ಅಂಡೇಷು ಪೇಶೀಷು ತರುಷ್ವವಿನಿಶ್ಚಿತೇಷು
ಪ್ರಾಣೋ ಹಿ ಜೀವಮುಪಧಾವತಿ ತತ್ರ ತತ್ರ ।
ಸನ್ನೇ ಯದಿಂದ್ರಿಯಗಣೇಽಹಮಿ ಚ ಪ್ರಸುಪ್ತೇ
ಕೂಟಸ್ಥ ಆಶಯಮೃತೇ ತದನುಸ್ಮೃತಿರ್ನಃ ॥
ಯರ್ಹ್ಯಬ್ಜನಾಭಚರಣೈಷಣಯೋರುಭಕ್ತ್ಯಾ
ಚೇತೋಮಲಾನಿ ವಿಧಮೇದ್ಗುಣಕರ್ಮಜಾನಿ ।
ತಸ್ಮಿನ್ ವಿಶುದ್ಧ ಉಪಲಭ್ಯತ ಆತ್ಮತತ್ತ್ವಂ
ಸಾಕ್ಷಾದ್ಯಥಾಮಲದೃಶೋಃ ಸವಿತೃಪ್ರಕಾಶಃ ॥

ಆತ್ಮಾ ಜ್ಞಾನಮಯಶ್ಶುದ್ಧೋ ವ್ಯತಿರಿಕ್ತೋಽಗುಣಾನ್ವಯಃ ।
ಸುಷುಪ್ತಿಸ್ವಪ್ನಜಾಗ್ರದ್ಭಿರ್ಮಾಯಾವೃತ್ತಿಭಿರೀಯತೇ ॥
ಶ್ಲೋಕಾರ್ಧೇನ ಪ್ರವಕ್ಷ್ಯಾಮಿ ಯದುಕ್ತಂ ಗ್ರಂಥಕೋಟಿಭಿಃ ।
ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ ॥

ಓಂ ನಮೋ ವಾಸುದೇವಾಯ ತಸ್ಮೈ ಭಗವತೇ ನಮಃ ।
ವ್ಯತಿರಿಕ್ತಂ ನ ಯಸ್ಯಾಸ್ತಿ ವ್ಯತಿರಿಕ್ತೋಽಖಿಲಸ್ಯ ಯಃ ॥

ಲೋಕದ ಜನತೆಯು ಪರಮಾತ್ಮನನ್ನು ಏತಕ್ಕೆ ತಿಳಿಯುತ್ತಿಲ್ಲ ಮತ್ತು ತಿಳಿಯುವುದಕ್ಕೆ ಏಕೆ ಪ್ರಯತ್ನಿಸುವುದಿಲ್ಲ? — ಹೇಳುತ್ತಾನೆ —

I ತ್ರಿಭಿರ್ಗುಣಮಯೈರ್ಭಾವೈರೇಭಿಃ ಸರ್ವಮಿದಂ ಜಗತ್ ।
ಮೋಹಿತಂ ನಾಭಿಜಾನಾತಿ ಮಾಮೇಭ್ಯಃ ಪರಮವ್ಯಯಂ ॥

II ಇಚ್ಛಾದ್ವೇಷಸಮುತ್ಥೇನ ದ್ವಂದ್ವಮೋಹೇನ ಭಾರತ ।
ಸರ್ವಭೂತಾನಿ ಸಮ್ಮೋಹಂ ಸರ್ಗೇ ಯಾಂತಿ ಪರಂತಪ ॥

III ನ ಮಾಂ ದುಷ್ಕೃತಿನೋ ಮೂಢಾಃ ಪ್ರಪದ್ಯನ್ತೇ ನರಾಧಮಾಃ ।
ಮಾಯಯಾಪಹೃತಜ್ಞಾನಾ ಆಸುರಂ ಭಾವಮಾಶ್ರಿತಾಃ ॥

IV ಅಶ್ರದ್ದಧಾನಾಃ ಪುರುಷಾ ಧರ್ಮಸ್ಯಾಸ್ಯ ಪರಂತಪ ।
ಅಪ್ರಾಪ್ಯ ಮಾಂ ನಿವರ್ತನ್ತೇ ಮೃತ್ಯುಸಂಸಾರವರ್ತ್ಮನಿ ॥

ಗೀತಾ ೭-೧೪


ದೈವೀ ಹ್ಯೇಷಾ ಗುಣಮಯೀ ಮಮ (ಶಂ. ಭಾ. ವ್ಯಾಖ್ಯಾ

(ಅತ್ರೈವ) ದೇವಸ್ಯ ತಿಷ್ಠತೀತಿ ದೈವೀ । ಶಿಕಾರೀ ನಿರ್ಮಲವಸ್ತು ಆಭಾಸರೂಪೇಣ
ಅತ್ರೈವ ತಿಷ್ಠತಿ ಮಾಯಾ = [illegible] । (ವಿವರಣ ಪತ್ರರೂಪ)

ಯದ್ವಾ “ತಥಾ ಹಿ ಪ್ರಾಜ್ಞಸ್ಯ ಸ್ವೇಷಾ ವಿದ್ಯಾ” ಇತಿ ಶ್ರವಣಾದ್ ದೇವೇ ಪ್ರಾಜ್ಞೇ
ತಿಷ್ಠತೀತಿ ದೈವೀ ಗುಣಮಯೀ ಗುಣಾತ್ಮಿಕಾ ಮಾಯಾ ಮಮ ಸ್ವರೂ-
ಪಸ್ಯ ಜಲಸ್ಯ ಶೈವಾಲಮಿವ ಆವರಣಭೂತಾ ತಿಷ್ಠತಿ

ಮಾಯಾ ಖಲು ಬ್ರಹ್ಮಾತ್ಮನೋಃ ಬ್ರಹ್ಮಜಗತೋಃ ಭೇದದರ್ಶನಹೇತುಃ

ಅನಾದ್ಯವಿದ್ಯಾಯುಕ್ತಸ್ಯ ಪುರುಷಸ್ಯಾತ್ಮವೇದನಂ ।
ಸ್ವತೋ ನ ಸಂಭವಾದನ್ಯಸ್ತತ್ತ್ವಜ್ಞೋ ಜ್ಞಾನದೋ ಭವೇತ್ ॥
(ಶ್ರೀ ಕೃಷ್ಣನ ಸುಜ್ಞಾನಾಯ ಪ್ರೋಕ್ತ) ಭಾಗವತ ೧೧-೨೨-೧೦.





# VIJAYA BANK

ಪತತ್ರಿವತ್ಯನಿದೇಶಕಸ್ಯ: ಪುರಾ: ಪ್ರಜಾಪತೇಸ್ತು:

~~ಅನ್ಯಾಭ್ಯಾಸ ಪ್ರಾಣಾಯಾಮ: ಶ್ರೀ ಶ್ರೀ ಶ್ರೀಕೃಷ್ಣಪಾಲಕ: ॥~~

~~ಪ್ರತ್ಯೇಕ ಪ್ರತ್ಯಕ್ಷ: ಕಾಲಶಕ್ತಿ ರೂಪಂ ಮಹಾ ನಾರಾಯಣಮೇ ನರ: ।~~

~~ಸೋಽಮಾಧಿಕ: ಸ್ವೇ ತ್ವಮೇವ ಸರ್ವಂ ನಿರಂಜನಾಧಿ ನಿರ್ವಿಕಲ್ಪ:~~

ಸ್ವತಂತ್ರೇ ಅದ್ವಿತೀಯಸ್ಯ ಸಂಗೇ ಪರಪರತಸ್ತ್ರತ:

ಪ್ರಧಾನಂ ಸೂಕ್ಷ್ಮಮವ್ಯಕ್ತಂ ಲಿಂಗತ್ರಯನಾಮಭಾಕ್ ।

ಅವ್ಯಕ್ತಮೇವ ಜಗದ್ಯೋನಿ:

ಹೇ ಸಖೇ, ಅಸ್ಮಾಕಂ ಮಮಾಭೀಷ್ಟ: ಗೀತಾಪರಂಪರಯಾ ಅಸ್ಮಾಕಂ ತ್ವಂ

ಶ್ರವಣಾಭ್ಯಾಸ! ತೇಷಾಂ ತ್ವಂ ಅವಗನ್ತವ್ಯ:

ಬಾಹ್ಯದ ರೂಪ. ಶಬ್ದ ಇವನ್ನು ತಿಳಿಯುವುದಕ್ಕೆ ಪ್ರತ್ಯಗಾತ್ಮನಿಗೆ ಚಕ್ಷುಃ ಶ್ರೋತ್ರಗಳ ಅಪೇಕ್ಷೆ ಇರುವುದಾದರೂ ಆ ಚಕ್ಷು ಶ್ರೋತ್ರಗಳು ಮತ್ತು ಅವುಗಳ ವ್ಯಾಪಾರಗಳು ತಿಳಿಯುವುದಕ್ಕೆ ಬೇರೊಂದು ಚಕ್ಷುಶ್ರೋತ್ರಗಳ ಅಪೇಕ್ಷೆ ಇರುವುದಿಲ್ಲವಷ್ಟೆ! ರೂಪ ಮತ್ತು ಶಬ್ದ ಎಂಬ ವಿಷಯವಿಶೇಷವನ್ನು ತಿಳಿಸುವುದಕ್ಕೆ ಚಕ್ಷುಶ್ರೋತ್ರಗಳು ಬೇಕಾಗಿವೆಯೇ ಹೊರತು ತಿಳಿವಳಿಕೆಗೆ (ಅರಿವಿಗೆ) ಅವುಗಳ ಅಪೇಕ್ಷೆ ಇರುವುದಿಲ್ಲ. ಇದರಿಂದ ಆತ್ಮನು ಜ್ಞಾನಸ್ವರೂಪನೇ ಎಂಬುದು ಗೊತ್ತಾಗುವುದು.

---

ಪ್ರತ್ಯಗಾತ್ಮನು ಈ ಬಾಹ್ಯದ ಶಬ್ದ ರೂಪಾದಿಗಳನ್ನು ತಿಳಿಯಲು ಅವನಿಗೆ, ಶ್ರೋತ್ರ ಚಕ್ಷುರಾದಿ ಇಂದ್ರಿಯಗಳ ಅಪೇಕ್ಷೆ ಇರುವುದಾದರೂ ಆ ಚಕ್ಷು ಶ್ರೋತ್ರಾದಿಗಳ ವ್ಯಾಪಾರವನ್ನು ತಿಳಿಯುವುದಕ್ಕೆ ಬೇರೊಂದು ಇಂದ್ರಿಯದ ಅಪೇಕ್ಷೆ ಇರುವುದಿಲ್ಲವಷ್ಟೆ! ಇದರಿಂದ ತಿಳಿಯುವುದೇನೆಂದರೆ :- ಇದು ಶಬ್ದ ಇದು ರೂಪ ಎಂದು ವಿಷಯವಿಶೇಷವನ್ನು ಗೊತ್ತುಮಾಡುವುದಕ್ಕೆ ಚಕ್ಷುರಾದಿ ಇಂದ್ರಿಯಗಳ ಉಪಯೋಗವೇ ಹೊರತು ಆತ್ಮನ ತಿಳಿವಳಿಕೆಗೆ ಅಂದರೆ ಅರಿವಿಗೆ ಅವುಗಳ ಅಪೇಕ್ಷೆ ಇರುವುದಿಲ್ಲ ಎಂದು ತಿಳಿಯುವುದು. ಆದ್ದರಿಂದ ಆತ್ಮನು ನಿತ್ಯಜ್ಞಾನಸ್ವರೂಪನೇ ಎಂದು ನಿಶ್ಚಯವಾಗುವುದು.

ಯಮಾಃ - ದ್ವಾದಶ

ಅಹಿಂಸಾ ಸತ್ಯಮಸ್ತೇಯಮಸಂಗೋ ಹ್ರೀರಸಂಚಯಃ ।
ಆಸ್ತಿಕ್ಯಂ ಬ್ರಹ್ಮಚರ್ಯಂ ಚ ಮೌನಂ ಸ್ಥೈರ್ಯಂ ಕ್ಷಮಾಭಯಂ ॥

ನಿಯಮಾಃ - ದ್ವಾದಶ

ಬಾಹ್ಯ ಆನ್ತರ = ಶೌಚ

ಶೌಚಂ ಜಪಸ್ತಪೋ ಹೋಮಃ ಶ್ರದ್ಧಾತಿಥ್ಯಂ ಮದರ್ಚನಂ ।
ತೀರ್ಥಾಟನಂ ಪರಾರ್ಥೇಹಾ ತುಷ್ಟಿರಾಚಾರ್ಯಸೇವನಂ ॥


M/s. Arunodaya Paper Mart
No. 41, O.K. ROAD, KUMBARPET,
Bangalore-560002.